Karnataka Kaipidi 2012 Chapter 01 Introduction

ಅಧ್ಯಾಯ

೧

# ಪ್ರಾಸ್ತಾವಿಕ


**ಕ**ರ್ನಾಟಕವು ಸಂಪದ್ಭರಿತ ಪರಂಪರೆಯನ್ನು ಹೊಂದಿದ್ದು, ಅದರ ಪ್ರಾಕೃತಿಕ ಸಂಪತ್ತು ಉಜ್ವಲ ಭವಿಷ್ಯವನ್ನು ರೂಪಿಸಲು ನಾಡಿನ ಜನತೆಗೆ ಸ್ಫೂರ್ತಿದಾಯಕವಾಗಿದೆ. ಅದರ ವಿಶೇಷ ಭೌಗೋಳಿಕ ಸನ್ನಿವೇಶ, ನೈಸರ್ಗಿಕ ಸಂಪತ್ತು ಅಂದರೆ, ಇಲ್ಲಿನ ನದಿಗಳು, ಬೆಟ್ಟಗಳು, ಕಣಿವೆಗಳು, ಮೈದಾನಗಳು, ಅರಣ್ಯಗಳು ಮತ್ತು ಇತರ ಸಂಪನ್ಮೂಲಗಳು ವೈವಿಧ್ಯತೆಯಿಂದ ಕೂಡಿದ್ದು ಹೇರಳವಾಗಿವೆ. ಹಾಗೆಯೇ ರಾಜ್ಯವು ಪ್ರೇಕ್ಷಣೀಯ ಸ್ಥಳಗಳಿಗೂ ಮತ್ತು ಕೈಗಾರಿಕಾ ಸಂಪನ್ಮೂಲಕ್ಕೂ ಅಷ್ಟೇ ಹೆಸರುವಾಸಿಯಾಗಿದೆ. ಸುಮಾರು ಎರಡು ಸಾವಿರ ವರ್ಷಗಳಷ್ಟು ದೀರ್ಘಕಾಲದ ಐತಿಹಾಸಿಕ ಪರಂಪರೆಯನ್ನುಳ್ಳ ಈ ನಾಡಿನಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವ ಅನೇಕ ಸುಂದರವಾದ ಕೋಟೆಗಳು, ಕೆರೆಗಳು, ದೇವಾಲಯಗಳು, ಮಸೀದಿಗಳು ಮತ್ತು ನಗರ/ಪಟ್ಟಣಗಳನ್ನು ಕಾಣಬಹುದು. ಅನೇಕ ಪಟ್ಟಣಗಳು ಪ್ರಮುಖ ಕೈಗಾರಿಕಾ, ವಾಣಿಜ್ಯ ಮತ್ತು ಶೈಕ್ಷಣಿಕ ಕೇಂದ್ರಗಳಾಗಿ ಬೆಳೆದಿವೆ. ಅವುಗಳಿಗೆ ಎಲ್ಲ ವಿಧವಾದ ಆಧುನಿಕ ಸವಲತ್ತುಗಳನ್ನೂ ಒದಗಿಸಲಾಗಿದೆ.

ಕರ್ನಾಟಕವು ಉತ್ಕೃಷ್ಟ ಹಾಗೂ ಶ್ರೀಮಂತ ಧಾರ್ಮಿಕ ಮತ್ತು ಕಲಾ ಪರಂಪರೆಯನ್ನು ಹೊಂದಿದೆ. ಈ ಪ್ರದೇಶವನ್ನು ಹದಿನೈದನೆಯ ಶತಮಾನದ ಶಿಲಾಶಾಸನದಲ್ಲಿ ಕವಿಯೋರ್ವ ಈ ಕೆಳಕಂಡ ರೀತಿ ವರ್ಣಿಸಿದ್ದಾನೆ.

ಅಮಳ ವಿನಯದಾಗಾರವಾದತ್ತು
ಪದ್ಮಾಸನಿಪ್ಪಾ ಸದ್ಮವಾದತ್ತ
ತಿವಿಶಾದಯಶೋಧಾಮವಾದತ್ತು
ವಿದ್ಯಾಧನ ಜನ್ಮಸ್ಥಾನವಾದತ್ತ
ಸಮತರಳ ಗಂಭೀರ ಸದ್ಗೇಹವಾದತ್ತೆ
ನಿಸಲ್ಕಿಂತುಳ್ಳ ನಾನಾ ಮಹಿಮೆ ಯೊಳೆಸೆಗುಂ
ಚಾರು ಕರ್ನಾಟದೇಶಂ

(ಎ.ಕ. ೮ ಸೊರಬ, ೨೬೧ ಕ್ರಿ.ಶ. ೧೪೦೩, ಪು ೧೦೭)

ಕರ್ನಾಟಕ ರಾಜ್ಯವು ಕನ್ನಡ ಭಾಷೆಯನ್ನು ಪ್ರಧಾನವಾಗಿ ಮಾತನಾಡುವ ಜನರು ವಾಸವಾಗಿರುವ ಪ್ರದೇಶವಾಗಿದ್ದು ಭಾರತ ಪರ್ಯಾಯ ದ್ವೀಪದ ಪಶ್ಚಿಮ–ಮಧ್ಯ ಭಾಗದಲ್ಲಿದೆ. ಇದರಲ್ಲಿ ಒಳಗೊಂಡಿರುವ ಪ್ರದೇಶಗಳೆಂದರೆ, ಅರಬ್ಬೀ ಸಮುದ್ರಕ್ಕೂ ಪಶ್ಚಿಮ ಘಟ್ಟಗಳಿಗೂ ಮಧ್ಯೆ ಸುಮಾರು ೩೨೦ ಕಿ.ಮೀ. ಉದ್ದವಾದ, ಸುಂದರವಾದ ಮತ್ತು ಮನೋಹರವಾದ ಕರಾವಳಿ ಪ್ರದೇಶ, ನಿತ್ಯಹರಿದ್ವರ್ಣದ ಕಾಡುಗಳಿಂದಲೂ, ಎತ್ತರವಾದ ಪರ್ವತಸರಣಿಗಳಿಂದಲೂ ಕೂಡಿ ರಮಣೀಯವಾಗಿ ತೋರುವ ಪಶ್ಚಿಮಘಟ್ಟಗಳ ಪ್ರದೇಶ, ಏರು ತಗ್ಗುಗಳಿಂದ ಕೂಡಿರುವ ವಿಶಾಲವಾದ ಕೆರೆಗಳ ನಾಡಾದ ಹಿಂದಿನ ಮೈಸೂರು ಸಂಸ್ಥಾನದ ತಿರುಳನ್ನು ಪ್ರತಿನಿಧಿಸುವ ದಕ್ಷಿಣದ ಬಯಲುಸೀಮೆ ಹಾಗೂ ಉತ್ತರದ ವಿಸ್ತಾರವಾದ ಮತ್ತು ಏರು ತಗ್ಗುಗಳು ಹೆಚ್ಚಾಗಿರುವ ವಿರಳ ವೃಕ್ಷಗಳ, ಸಾರವತ್ತಾದ ಕಪ್ಪು ಹತ್ತಿಮಣ್ಣನ್ನು ಹೊಂದಿದ ಶಿಲಾಮಯ ಪ್ರಸ್ಥಭೂಮಿ. ತೀರಪ್ರದೇಶಕ್ಕೂ ಕರ್ನಾಟಕದ ಮಧ್ಯದ ಪ್ರಸ್ಥಭೂಮಿಗೂ ಇರುವ ಭಿನ್ನತೆ ಗಮನಾರ್ಹವಾಗಿದೆ. ಕರ್ನಾಟಕ




- The responsibility for the correctness of internal details rests with the publisher.
- The territorial waters of India extending into the sea to the distance of twelve nautical miles measured from the appropriate base line.
- The state boundaries between Uttara Khand and Uttara Pradesh, Bihar and Jharkhand and Chattisgarh and Madhya Pradesh have not been verified by the Governments concerned.
- The administrative Headquarters of Chandigarh. Haryana and Punjab are at Chandigarh.
- The interstate Boundaries amongst Arunachal pradesh, Assam and Meghalaya shown on the map are as interpreted from the North Eastern areas (Reorganisation) Act, 1971, but have yet be verified.


ಪೂರ್ವ ಭಾಗವು ಸಾಮಾನ್ಯವಾಗಿ ಚಪ್ಪಟೆಯಾದ ಪೀಠಭೂಮಿಯಾಗಿದ್ದು ಅನೇಕ ಏಕಾಂಗಿಯಾದ ಏರು ದಿಣ್ಣೆಗಳಿಂದಲೂ, ಚಿತ್ರವಿಚಿತ್ರವಾದ ಬೆಟ್ಟಗಳ ಸಾಲುಗಳಿಂದಲೂ, ರಾಕ್ಷಸಾಕಾರದ ಶಿಲಾಖಂಡಗಳಿಂದಲೂ ಕೂಡಿದ ಪರಿಸರವನ್ನು ಹೊಂದಿದೆ. ಅನೇಕ ಬೆಟ್ಟಗಳ ಸರಣಿಗಳು ಹೆಚ್ಚಾಗಿ ಉತ್ತರ ದಕ್ಷಿಣವಾಗಿ ಹಬ್ಬಿದ್ದು ಇಡೀ ಪ್ರದೇಶವನ್ನು ಹಿರಿಕಿರಿ ಗಾತ್ರದ ಅನೇಕ ಕಣಿವೆಗಳಾಗಿ ವಿಂಗಡಿಸಿವೆ. ಆಶ್ಚರ್ಯಕರವಾದ ವೈವಿಧ್ಯಗಳುಳ್ಳ ಅನೇಕ ಭೌಗೋಳಿಕ ವಿನ್ಯಾಸಗಳು, ಅದ್ವಿತೀಯ ನದೀಜಾಲಗಳು, ವರ್ಣಮಯ ವನ್ಯಮೃಗಗಳ ಪಾರಂಪರಿಕ ಸಂಪತ್ತು ಉಲ್ಲೇಖನೀಯವಾಗಿವೆ.ರಾಜ್ಯದ ಪಶ್ಚಿಮದಲ್ಲಿ ಗಗನಚುಂಬಿ ಗಿರಿಶೃಂಗಗಳನ್ನೂ, ಹುಲುಸಾಗಿರುವ ಹಾಗೂ ದಟ್ಟ ಹಸಿರು ವನರಾಶಿಯನ್ನು ಹೊಂದಿರುವ ಪಶ್ಚಿಮಘಟ್ಟವಿದೆ. ಅಂತೆಯೇ ಘಟ್ಟಗಳ ಪಶ್ಚಿಮದಿಕ್ಕಿನಲ್ಲಿ ಪಟ್ಟೆಯಂತಿರುವ ಸಮುದ್ರ ತೀರ ಪ್ರದೇಶವು ಅದರ ಥಳಥಳಿಸುವ ತೀರಗಳು ಮತ್ತು ಫಲಭರಿತವಾದ ಹಸಿರು ಭತ್ತದ ಗದ್ದೆಗಳಿಗೆ ಪ್ರಸಿದ್ಧವಾಗಿದೆ.

ರಾಜ್ಯದ ಪುರಾತನ ದೇವಾಲಯಗಳು ಭಕ್ತರ ಧಾರ್ಮಿಕ ನಿಷ್ಠೆಯ ಪ್ರತೀಕವಾಗಿವೆ. ನಾಡಿನಾದ್ಯಂತ ಹರಡಿರುವ ಅಗ್ರಹಾರ ಮತ್ತು ಮಠಗಳು ಜನತೆಯ ಜ್ಞಾನದಾಹದ ಪ್ರತೀಕಗಳಾಗಿ ನಿಲ್ಲುತ್ತವೆ. ಎಲ್ಲೆಲ್ಲೂ ನಿಂತಿರುವ ವೀರಗಲ್ಲುಗಳು ಪ್ರಾಚೀನರ ಶೌರ್ಯ, ಸಾಹಸಗಳನ್ನು ಮೆರೆಯುತ್ತವೆ. ಹಿಂದೆ ನೇಯ್ಗೆಯು, ಕೈಗಾರಿಕೆಯೂ ಉನ್ನತವಾಗಿ ವಿಜೃಂಭಿಸುತ್ತಿತ್ತೆಂದು ಸಾರಲು ಹತ್ತಿಬೆಳೆಯುವ ದೀರ್ಘಸಂಪ್ರದಾಯವೇ ಪುರಾವೆಯಾಗಿ ನಿಲ್ಲುತ್ತದೆ. ಕಡಲ ತೀರದಲ್ಲಿರುವ ಬಂದರುಗಳು ಹಿಂದೊಮ್ಮೆ ಸಾಗರೋತ್ತರ ವಾಣಿಜ್ಯ ಬಿರುಸಾಗಿ ನಡೆಯುತ್ತಿತ್ತೆಂಬುದನ್ನು ನಮಗೆ ನೆನಪಿಸುತ್ತವೆ. ಎರೆಮಣ್ಣಿನಿಂದ ಕೂಡಿರುವ ಮೈದಾನ ಪ್ರದೇಶವು ಕೃಷಿಗೆ ಅದು ಯೋಗ್ಯ ಭೂಮಿ ಎಂಬುದನ್ನು ಸಾರಿ ಹೇಳುತ್ತದೆ. ರಾಜ್ಯದ ಮಾನವ ಸಂಪನ್ಮೂಲದಲ್ಲಿ ಜನಾಂಗೀಯ ಹಾಗೂ ಧಾರ್ಮಿಕ ವೈವಿಧ್ಯವನ್ನೂ ಕಾಣಬಹುದು. ಈ ಮಾನವ ಸಂಪನ್ಮೂಲದ ವೃತ್ತಿಪರ, ಉದ್ಯಮಶೀಲ ಹಾಗೂ ಪ್ರಗತಿಶೀಲ ಕೌಶಲ್ಯವು ಭವಿಷ್ಯದಲ್ಲಿ ರಾಜ್ಯವು ಒಂದು ಪ್ರಮುಖ ಕೇಂದ್ರವಾಗಿ ಹೊರಹೊಮ್ಮುವ ಭರವಸೆ ನೀಡುತ್ತದೆ.

ಕರ್ನಾಟಕದ ಪ್ರಾಚೀನತೆ ಹಳೆಯ ಶಿಲಾಯುಗದಷ್ಟು ಹಿಂದಿನದು. ಹಾಗೆಯೇ ಪ್ರಾಚೀನ ಮತ್ತು ಮಧ್ಯಯುಗದ ಪ್ರಬಲ ಸಾಮ್ರಾಜ್ಯಗಳಿಗೆ ಇದೇ ತವರೂರಾಗಿದೆ. ಈ ಸಾಮ್ರಾಜ್ಯಗಳು ಪೋಷಿಸಿದ ತತ್ತ್ವಜ್ಞಾನಿಗಳು ಮತ್ತು ಸಂಗೀತ ಸಾಮ್ರಾಟರು ಹುಟ್ಟುಹಾಕಿದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು ಇಂದಿಗೂ ಆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ನಿಸ್ಸಂಶಯವಾಗಿಯೂ ಕರ್ನಾಟಕವು ಅದ್ವಿತೀಯ ಕಾಣಿಕೆ ನೀಡಿದೆ. ಸಾಹಿತ್ಯ, ಲಲಿತಕಲೆ, ಧರ್ಮ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕದ ಸಾಧನೆಗಳು ಅಷ್ಟೇ ಗಣ್ಯವಾದವುಗಳು. ಭಾರತಾದ್ಯಂತ ಹರಡಿರುವ ಕರ್ನಾಟಕ ಸಂಗೀತವೆಂಬ ಸಂಗೀತ ಪದ್ಧತಿಯೊಂದನ್ನು ಅದು ಬೆಳೆಸಿತು. ಕರ್ನಾಟಕ ಮತ್ತು ಹಿಂದೂಸ್ಥಾನಿ, ಈ ಎರಡೂ ಶಾಸ್ತ್ರೀಯ ಸಂಗೀತ ಪದ್ಧತಿಗಳಿಗೆ ಕರ್ನಾಟಕವು ಗಣನೀಯ ಕೊಡುಗೆ ನೀಡಿದೆ. ಕರ್ನಾಟಕದ ಪ್ರತ್ಯೇಕ ಶೈಲಿಗಳಾದ ಚಾಳುಕ್ಯ (ವೇಸರ), ಹೊಯ್ಸಳ ಮತ್ತು ವಿಜಯನಗರದ ವಾಸ್ತು ವಿಧಾನಗಳನ್ನು ಇಲ್ಲಿ ವಿಕಸಿಸಲಾಯಿತು. ಅತ್ಯಂತ ಪ್ರಾಚೀನ ಹಿಂದೂ ಗುಹಾಂತರ ದೇವಾಲಯಗಳೂ ಕರ್ನಾಟಕದಲ್ಲಿವೆ. ಪ್ರಾಕೃತಿಕ ಸೌಂದರ್ಯದಿಂದ ಕೂಡಿರುವಂತಹ ಬೆಟ್ಟದ ಸಾಲುಗಳು, ನದೀ ಕಣಿವೆಗಳು, ಜಲಪಾತಗಳು ಮತ್ತು ಸಮುದ್ರ ತೀರಗಳೇ ಅಲ್ಲದೆ ಚಾರಿತ್ರಿಕವಾಗಿ ಪ್ರಖ್ಯಾತವಾದ ಪೌರಾಣಿಕ ಹಿನ್ನೆಲೆಯುಳ್ಳ ಪವಿತ್ರವಾದ ಹಾಗೂ ರಮಣೀಯವಾದ ಅನೇಕ ಸ್ಥಾನಗಳು ಇಲ್ಲಿವೆ. ಕರ್ನಾಟಕವು ಅಸಾಧಾರಣ ರಾಜಕೀಯ ಪರಿವರ್ತನೆಗಳ ರಂಗವಾಗಿತ್ತು. ಸ್ಮರಣೀಯ ಸಾಧನೆಗಳ ದಾಖಲೆಗಳನ್ನು ಬಿಟ್ಟು ಹೋಗಿರುವ ಘನವಂತಿಕೆಯ ಸಾಮ್ರಾಜ್ಯಗಳ ಏಳುಬೀಳುಗಳನ್ನು ಕರ್ನಾಟಕವು ಕಂಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಭಾರತದಲ್ಲಿ ಅತಿ ಹೆಚ್ಚಿನ ಜ್ಞಾನಪೀಠ ಪ್ರಶಸ್ತಿಗಳನ್ನು ರಾಜ್ಯದವರು ಪಡೆದಿದ್ದಾರೆ. ಕರ್ನಾಟಕವು ಅನೇಕ ಧಾರ್ಮಿಕ ಸುಧಾರಕರ ಭೋಧನೆಗಳ ಸಮನ್ವಯವನ್ನು ಸಾಧಿಸಿದ ಕಮ್ಮಟವಾಗಿತ್ತು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತ್ತು ವೀರಶೈವ (ಶಕ್ತಿ ವಿಶಿಷ್ಟಾದ್ವೈತ) ತತ್ವಗಳು ಕರ್ನಾಟಕದ ಮಣ್ಣಿನಲ್ಲಿ ಉದಯಿಸಿ ಬೆಳಗಿದುವು ಮತ್ತು

# KARNATAKA

## ADMINISTRATIVE DIVISIONS 2011




*State/District headquarters are also taluk headquarters.*

*Where the district/taluk name differs from its headquarters name, the latter is given within brackets.*

*Bangalore is the headquarters for Bangalore North, Bangalore South & Bangalore East taluks and also for Bangalore and Bangalore Rural districts.*

ಈ ಧರ್ಮಪ್ರತಿಪಾದಕರ ಭೋಧನೆಗಳನ್ನು ಪ್ರಪಂಚದ ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಈ ಭೋಧನೆಗಳು ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಧರ್ಮವನ್ನೂ ಮೀರಿ ಎಲ್ಲ ಜನರ ಮೇಲೆ ಪ್ರಭಾವ ಬೀರಿವೆ. ಕರ್ನಾಟಕವು ಎಲ್ಲಾ ಧರ್ಮಗಳ ಎಂದರೆ ವೈದಿಕ, ಸಿಖ್ಖ್, ಬೌದ್ಧ, ಜೈನ, ಲಿಂಗಾಯತ, ಮುಸಲ್ಮಾನ ಮತ್ತು ಕ್ರೈಸ್ತರ ಧಾರ್ಮಿಕ ಕೇಂದ್ರಗಳನ್ನು ಹೊಂದಿದೆ. ಅನೇಕ ರಾಜಕೀಯ ಏಳುಬೀಳುಗಳ ನಂತರವೂ, ಕರ್ನಾಟಕವು ಇಂತಹ ಸಾಂಸ್ಕೃತಿಕ ಪರಂಪರೆಯ ನಿರಂತರತೆಯನ್ನು ಉಳಿಸಿಕೊಂಡು ಬಂದಿದೆ. ಪ್ರಸಿದ್ಧ ಸಮಾಜ ಸುಧಾರಕರಾದ ಬಸವೇಶ್ವರರು ಕರ್ನಾಟಕದ ಗಣ್ಯ ಕೊಡುಗೆ. ಜಾತ್ಯಾಧಾರಿತ ಮೇಲುಕೀಳು ಭಾವನೆಗಳು ತುಂಬಿರುವ ಈ ಸಮಾಜದಲ್ಲಿ ಎಲ್ಲರೂ ಸಮಾನರೆಂದು ಒತ್ತಿ ಹೇಳಿದವರು ಅವರು. ಜೊತೆಗೆ "ಕಾಯಕವೇ ಕೈಲಾಸ" ಎಂಬ ತತ್ವದೊಡನೆ ಕಾಯಕತ್ವದ ದುಡಿಮೆಯ ಘನತೆಯನ್ನು ಅವರು ಎತ್ತಿ ಹಿಡಿದರು. ಮಧ್ವಾಚಾರ್ಯರು ಗುಜರಾತಿನ ಭಕ್ತಿಸಂಪ್ರದಾಯದ ಮೇಲಲ್ಲದೆ ಬಂಗಾಳದ ಚೈತನ್ಯರ ಭಕ್ತಿ ಸಂಪ್ರದಾಯದ ಮೇಲೂ ಪ್ರಭಾವ ಬೀರಿದರು. ಗುರು ಗೋವಿಂದರ ಪ್ರೀತಿಯ ಐದು ಜನ ಶಿಷ್ಯ (ಪಂಚ ಪಿಯಾರೆ) ರಲ್ಲಿ ಸಾಹಿಬ್‌ಚಂದ್ ಎಂಬುವವನು ಕರ್ನಾಟಕದ ಬಿದರೆಯವನು. ಬಂಗಾಳವನ್ನು ಬಿಟ್ಟು ಇಡೀ ಭಾರತದಲ್ಲಿ ಪ್ರಚಲಿತವಾಗಿರುವ ಹಿಂದೂಗಳ ನ್ಯಾಯಗ್ರಂಥವಾದ 'ಮಿತಾಕ್ಷರ'ವೆಂಬ ಯಾಜ್ಞವಲ್ಕ್ಯ ಸ್ಮೃತಿಯ ಬಗೆಗಿನ ಟೀಕೆಯನ್ನು ಚಾಳುಕ್ಯರ ರಾಜಧಾನಿಯಾದ ಕಲ್ಯಾಣದಲ್ಲಿದ್ದ ವಿಜ್ಞಾನೇಶ್ವರನು ಬರೆದನು. ಪೂಜ್ಯಪಾದ ಮತ್ತು ಶಾಕಟಾಯನರೆಂಬ ಇಬ್ಬರು ಪ್ರಸಿದ್ಧರಾದ ಸಂಸ್ಕೃತ ವೈಯಾಕರಣಿಗಳು ಕರ್ನಾಟಕದಲ್ಲಿ ಹುಟ್ಟಿದವರು. ಭಾರತದ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿಗಳನ್ನು ಪರಕೀಯರ ದಾಳಿಗಳಿಂದ ರಕ್ಷಿಸಿ ಪೋಷಿಸಲು ವಿಜಯನಗರದ ರಾಜರು ಸತತವಾದ ಯಶಸ್ವೀ ಪ್ರಯತ್ನಗಳನ್ನು ಕೈಗೊಂಡುದು ಇದೇ ನಾಡಿನಿಂದ. ವೇದಗಳ ಮೇಲೆ ರಚಿತವಾದ ಟೀಕೆಯಾದ 'ವೇದಾರ್ಥ ಪ್ರಕಾಶ' ಮತ್ತು 'ಆಯುರ್ವೇದ ಸುಧಾನಿಧಿ', 'ಯಜ್ಞತಂತ್ರ ಸುಧಾನಿಧಿ', 'ಪ್ರಾಯಶ್ಚಿತ್ತ ಸುಧಾನಿಧಿ' ಮತ್ತು 'ಸುಭಾಷಿತ ಸುಧಾನಿಧಿ' ಮುಂತಾದ ಅನೇಕ ಸಂಹಿತೆಗಳನ್ನು ರಚಿಸಿ ಭಾರತೀಯ ಪರಂಪರೆಯನ್ನು ರಕ್ಷಿಸಲಾಯಿತು. ಈ ಮಹಾಕಾರ್ಯಗಳಿಗೆ ವಿಜಯನಗರ ಚಕ್ರಾಧಿಪತ್ಯವು ಪ್ರೋತ್ಸಾಹ ನೀಡಿತು. ಜೈನರ ಧಾರ್ಮಿಕ ಗ್ರಂಥವಾದ 'ಮಹಾಪುರಾಣವು' ರಾಷ್ಟ್ರಕೂಟರ ಆಸ್ಥಾನದಲ್ಲಿ ಜಿನಸೇನ ಮತ್ತು ಗುಣಭದ್ರರಿಂದ ರಚಿತವಾಯಿತು. ಪ್ರಖ್ಯಾತ ಗಣಿತಶಾಸ್ತ್ರಜ್ಞರಾದ ಮಹಾವೀರ ಮತ್ತು ಭಾಸ್ಕರ ಇವರು ಕೂಡ ಕರ್ನಾಟಕದವರೇ ಆಗಿದ್ದಾರೆ

ಕರ್ನಾಟಕದಲ್ಲಿರುವ ಐಹೊಳೆಯು ದೇವಾಲಯದ ವಾಸ್ತುಶಿಲ್ಪದ ತೊಟ್ಟಿಲುಗಳಲ್ಲಿ ಒಂದಾಗಿತ್ತು. ಗುಜರಾತ್ ಮತ್ತು ಒರಿಸ್ಸಾ ಸಹಿತವಾಗಿ ಇಡೀ ದಕ್ಷಿಣ ಭಾರತದ ವಾಸ್ತುಶಿಲ್ಪದ ಮೇಲೆ ಈ ಕೇಂದ್ರವು ಪ್ರಭಾವ ಬೀರಿತು. ೫೭ ಅಡಿ ಎತ್ತರವಿರುವ, ಭಾರತದಲ್ಲೇ ಅತ್ಯಂತ ಉನ್ನತವಾದ ಏಕ ಶಿಲಾವಿಗ್ರಹವಾದ ಗೊಮ್ಮಟೇಶ್ವರ (ಶ್ರವಣಬೆಳಗೊಳ) ಮತ್ತು ಭಾರತದಲ್ಲೇ ದೊಡ್ಡದಾದ (ತಳಭಾಗದಲ್ಲಿ ೧೨೦ ಅಡಿಗೂ ಹೆಚ್ಚಿನ ವ್ಯಾಸವುಳ್ಳ) ಗುಮ್ಮಟವನ್ನು ಹೊಂದಿರುವ ವಿಜಾಪುರದ ಗೋಳಗುಮ್ಮಟ ಕರ್ನಾಟಕದಲ್ಲಿವೆ. ಹೀಗೆ ಕರ್ನಾಟಕವು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಮೃದ್ಧಗೊಳಿಸುವಲ್ಲಿ ಗಣನೀಯವಾದ ಸಾಧನೆಗಳನ್ನು ಮಾಡಿದೆ. ಭೂಮಿ, ಅರಣ್ಯ, ಖನಿಜ, ಜಲಮೂಲ, ಮಾನವಶಕ್ತಿ ಮುಂತಾದ ಗಣನೀಯ ಪ್ರಮಾಣದ ಎಂದೂ ಬರಿದಾಗದ ಸಂಪನ್ಮೂಲಗಳನ್ನು ಕರ್ನಾಟಕವು ಪಡೆದಿದೆ. ಇತಿಹಾಸ ಕಾಲದಿಂದಲೂ ವಿಶ್ವಖ್ಯಾತಿಯ ಗಂಧದ ಮರ, ಗಂಧದ ಎಣ್ಣೆ, ತೇಗದ ಮರ, ಮಸಾಲೆ ಪದಾರ್ಥಗಳು ಮತ್ತು ಚಿನ್ನಕ್ಕೆ ಇದು ತವರಿನಂತಿತ್ತು. ಈ ಉತ್ಪನ್ನಗಳಿಗೆ ಪ್ರಪಂಚದಲ್ಲೇ ತೀವ್ರ ಬೇಡಿಕೆಯ ಸ್ಥಾನಮಾನವಿತ್ತು. ಚಿನ್ನ, ಸುಣ್ಣಕಲ್ಲು, ಬೆಣಚುಕಲ್ಲು, ಕಲ್ನಾರು ಮತ್ತು ವೆನಡಿಯಂಗಳನ್ನು ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ದೇಶದಲ್ಲಿ ಮೊದಲನೇ ಸ್ಥಾನದಲ್ಲಿದೆ. ಮತ್ತು ಇತರ ಖನಿಜಗಳಾದ ಕ್ರೋಮೈಟ್, ಟಂಗ್‌ಸ್ಟನ್ ಮತ್ತು ಕೈನೈಟ್‌ಗಳ ಉತ್ಪಾದನೆಯಲ್ಲಿ ಇದಕ್ಕೆ ಎರಡನೇಯ ಸ್ಥಾನ. ಕರ್ನಾಟಕವು ಕಬ್ಬಿಣದ ಅದುರು, ತಾಮ್ರದ ಅದುರು, ಡೋಲೋಮೈಟ್ ಮತ್ತು ವಿದ್ಯುಚ್ಛಕ್ತಿಗಳ ವಿಪುಲ ಉತ್ಪಾದನಾ ಸಾಮರ್ಥ್ಯಕ್ಕೆ ಖ್ಯಾತವಾಗಿದೆ. ಕುದುರೆಮುಖದಲ್ಲಿ ಕಬ್ಬಿಣದ ಅದುರಿನ ಅತ್ಯಂತ ದೊಡ್ಡ ಗಣಿಗಾರಿಕೆ ಇದೆ. ರಾಜ್ಯದ ಎಲ್ಲಾ ಪಟ್ಟಣಗಳೂ ವಿದ್ಯುಚ್ಛಕ್ತಿಯನ್ನು ಪಡೆದಿವೆ. ಬೆಂಗಳೂರು ನಗರವು ಇಡೀ ದೇಶದಲ್ಲಿಯೇ ವಿದ್ಯುಚ್ಛಕ್ತಿಯನ್ನು ಪಡೆದ

ಮೊದಲನೆಯ ನಗರವಾಗಿದೆ(೧೯೦೫). ರೇಷ್ಮೆ ವ್ಯವಸಾಯದಲ್ಲಿ ಭಾರತದಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ. ಮೈಸೂರು ರೇಷ್ಮೆ ಮತ್ತು ರೇಷ್ಮೆಯ ಉತ್ಪನ್ನಗಳು ದೇಶದ ಎಲ್ಲಾ ವ್ಯಾಪಾರಿಗಳನ್ನು ಆಕರ್ಷಿಸಿವೆ. ಅಲ್ಲದೆ ಪ್ರಪಂಚದಲ್ಲೂ ಒಳ್ಳೆಯ ಮಾರುಕಟ್ಟೆಯನ್ನು ಪಡೆದಿವೆ. ರಾಜ್ಯಗಳಲ್ಲಿಯೇ ಅತ್ಯಂತ ವಿಸ್ತೃತ ಪ್ರದೇಶಗಳಲ್ಲಿ ಕಾಫಿ ಮತ್ತು ಮೆಣಸನ್ನು ಕರ್ನಾಟಕದಲ್ಲಿ ಬೆಳೆಯಲಾಗುತ್ತಿದೆ. ಕಾಫಿ ಮತ್ತು ಅಡಿಕೆ ಉತ್ಪಾದನೆಯಲ್ಲಿ ರಾಜ್ಯವು ಅಗ್ರಸ್ಥಾನದಲ್ಲಿದೆ; ಏಲಕ್ಕಿ, ಮೆಣಸು ಬೆಳೆಗಳಿಗೆ ಸಂಬಂಧಿಸಿದಂತೆಯೂ ಎರಡನೆಯ ಸ್ಥಾನವನ್ನು ಹೊಂದಿದೆ. ಬೆಂಗಳೂರು ರಾಜ್ಯದ ರಾಜಧಾನಿ. ಭಾರತದ ಸದ್ಯದ ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯ ಅಲೆಗಳಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ.

## ಹೆಸರಿನ ಮೂಲ

ಕನ್ನಡ ಮಾತನಾಡುವ ಜನರೇ ಹೆಚ್ಚಾಗಿರುವ ಪ್ರದೇಶವನ್ನು ಸೂಚಿಸುವ 'ಕರ್ನಾಟಕ' ಎಂಬ ಹೆಸರಿನ ಮೂಲದ ಬಗ್ಗೆ ಅನೇಕ ವಾದವಿವಾದಗಳು ಇವೆ. 'ಕರ್ನಾಟಕ' 'ಕರ್ಣಾಟಕ' ಮತ್ತು 'ಕನ್ನಡ' ಎಂಬ ಪದಗಳು ಭಾಷೆ ಮತ್ತು ಪ್ರದೇಶ ಎಂಬ ಎರಡೂ ಅರ್ಥದಲ್ಲಿ ಬಳಕೆಯಾಗಿರುವಂತೆ ಕಾಣುತ್ತದೆ. ಅಮೋಘವರ್ಷ ನೃಪತುಂಗನದೆನ್ನಲಾದ 'ಕವಿರಾಜಮಾರ್ಗ' ಮತ್ತು ಆಂಡಯ್ಯನ 'ಕಬ್ಬಿಗರಕಾವ'ಗಳಲ್ಲಿ 'ಕನ್ನಡ'ಎಂಬ ಶಬ್ದ ಪ್ರದೇಶವಾಚಿಯಾಗಿ ಬಳಕೆಯಾಗಿದೆ. ಚನ್ನಬಸವೇಶ್ವರ ಮತ್ತು ನಿಜಗುಣ ಶಿವಯೋಗಿಗಳ ಕೃತಿಗಳಲ್ಲಿ ಇದು ಜಾತಿವಾಚಕವಾಗಿದೆ. ಹೇಗಿದ್ದರೂ ಈ ಪದವು ಮೂಲತ: ಒಂದು ಪ್ರದೇಶ ಮತ್ತು ಭಾಷೆಯನ್ನು ಸೂಚಿಸುವ ಶಬ್ದವಾಗಿದೆ. ಇತಿಹಾಸಕಾರರು ಮತ್ತು ಕವಿಗಳು ಕರ್ನಾಟಕದ ಭಾಗಗಳನ್ನು 'ಕುಂತಳ', 'ಬನವಾಸಿದೇಶ' ಮತ್ತು 'ಮಹಿಷಕ' ಎಂದೂಕರೆದಿರುತ್ತಾರೆ. 'ಕರ್ನಾಟಕ' ಎಂಬ ಶಬ್ದದ ವ್ಯುತ್ಪತ್ತಿಯ ಬಗ್ಗೆ ಬಂದ ಅನೇಕ ವಾದಗಳಲ್ಲಿ ಗಮನಿಸಲು ಅರ್ಹವಾದ ಕೆಲವನ್ನು ಇಲ್ಲಿ ನೀಡಬಹುದು.

ಡಾ॥ ಶಂ.ಭಾ. ಜೋಷಿಯವರ ಪ್ರಕಾರ ಕಣ್ ಅಥವಾ ಕಳ್ ಎಂಬ ಪದದಿಂದ ಇದು ನಿಷ್ಪತ್ತಿಯಾಗಿದೆ. ಈಗಿನ ಮಹಾರಾಷ್ಟ್ರದ ಖಾನ್‌ದೇಶವೆಂಬಲ್ಲಿ ಬಹಳ ಹಿಂದಿನಿಂದಲೂ ಆ ಹೆಸರಿನ ಗೊಲ್ಲ ಜನಾಂಗದವರು ವಾಸವಾಗಿದ್ದರು; ಇದರಿಂದ ಅದನ್ನು ಕನ್ನದೇಶ ಎಂಬುದಾಗಿ ಕರೆದರು, ಎಂದು ಅವರು ಹೇಳುತ್ತಾರೆ. ಖಾನ್‌ದೇಶವನ್ನು ಹಿಂದೆ ಕನ್ನದೇಶವೆಂದು ಕರೆದಿರುವ ಬಗ್ಗೆ ಮತ್ತು ಕಣ್ಣ ಅಥವಾ ಕಳ್ಳ ಎಂಬ ಹೆಸರಿನ ಜನರಿಂದ ಅದು ಹಾಗೆ ಕರೆಯಲ್ಪಟ್ಟಿತೆಂಬುದರ ಬಗ್ಗೆ ಸರಿಯಾದ ಪ್ರಮಾಣಬದ್ಧ ಆಧಾರಗಳನ್ನು ಜೋಷಿಯವರು ನೀಡಿಲ್ಲ. ಕರ್ನಾಟಕದ ಜನಸಂಖ್ಯೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದನಗಾಹಿ ಜನರಿದ್ದರೂ ಕಾವೇರಿಯಿಂದ ಗೋದಾವರಿಯವರೆಗೆ ಅಷ್ಟೇ ಅಲ್ಲ, ನರ್ಮದಾ ನದಿಯಾಚೆಯವರೆಗೂ ವ್ಯಾಪಿಸಿದ್ದ ಈ ನಾಡಿಗೆ ಅವರಿಂದಲೇ ಈ ಹೆಸರು ಬರುವಷ್ಟು ಅವರು ಪ್ರಬಲರಾಗಿದ್ದರೆಂದು ತೋರಿಸಲು ಸರಿಯಾದ ಆಧಾರಗಳಿಲ್ಲ (ಕನ್ನಡದ ಜನರು ಹಿಂದೆ ವಿಂಧ್ಯದ ಆಚೆಗೂ ವ್ಯಾಪಿಸಿದ್ದರೆಂದೂ 'ಸ್ಕಾಂದಪುರಾಣ'ದಲ್ಲಿ ಹೇಳಿರುವಂತೆ 'ಕರ್ಣಾಟ ರಾಕ್ಷಸ'ನನ್ನು ವಿಂಧ್ಯದ ದಕ್ಷಿಣಕ್ಕೆ ಅಟ್ಟಲಾಯಿತೆಂದೂ ಡಾ॥ ಶಂ.ಭಾ. ಜೋಷಿಯವರೇ ತೋರಿಸಿಕೊಟ್ಟಿದ್ದಾರೆ). 'ಕರ್+ನಾಡು' (ಕಪ್ಪುನೆಲ ಅಥವಾ ಕಪ್ಪುಮಣ್ಣಿನಿಂದ ಕೂಡಿರುವ ಪ್ರದೇಶ) ಎಂಬುದರಿಂದ ಈ ಹೆಸರು ನಿಷ್ಪತ್ತಿಯಾಗಿದೆ, ಎಂಬುದು ಎರಡನೆಯವಾದ. ಸಾಮಾನ್ಯವಾಗಿ ವಿದ್ವಾಂಸರು ಒಪ್ಪಿರುವ ಅಂಶವೆಂದರೆ ಇದು ಕರು (ಕಪ್ಪು) ಮತ್ತು ನಾಡು (ಪ್ರದೇಶ) ಎಂಬುದರಿಂದ ನಿಷ್ಪತ್ತಿಯಾಗಿದೆ ಎಂಬುದು. ಇದಕ್ಕೆ ಪೂರಕವಾಗಿ ಕರ್ನಾಟಕದ ಬಯಲುಸೀಮೆ ಪ್ರಾಂತ್ಯದಲ್ಲಿ ಕಂಡುಬರುವ ಎರೆಮಣ್ಣನ್ನೇ ನಿದರ್ಶನವೆಂದು ಪರಿಗಣಿಸುವುದುಂಟು.

ಆದರೆ 'ಕರುನಾಡು' ಎಂಬ ಪದದ ಮೂಲಕ್ಕೆ ಸಂಬಂಧಿಸಿದ ಮೂರನೆಯ ವಾದವನ್ನು ಬೆಂಬಲಿಸಲು ಪ್ರಬಲವಾದ ಆಧಾರವಿದೆ. ಪ್ರಾಚೀನ ತಮಿಳು ಕೃತಿಗಳಾದ 'ತೋಲ್ಕಾಪ್ಪಿಯಂ' ಮತ್ತು 'ಶಿಲಪ್ಪದಿಗಾರಂ'ಗಳಲ್ಲಿ ಈ ಪದವನ್ನು ಬಳಸಿದೆ. 'ಕರುನಾಟ್' ಎಂದು ಈ ನಾಡನ್ನು ಅಲ್ಲಿ ಕರೆಯಲಾಗಿದೆ. ಈ ಔಚಿತ್ಯಪೂರ್ಣವಾದ

ಹೆಸರನ್ನು ತಮಿಳರು ನೀಡಿರುತ್ತಾರೆ. ಅವರ ಪ್ರಕಾರ ಕರ್ನಾಟಕವು ಪೂರ್ವಘಟ್ಟಗಳ ಮೇಲಕ್ಕಿರುವ ದೊಡ್ಡದಾದ ಅಥವಾ ಎತ್ತರವಾದ (ಪೀಠಭೂಮಿಯ) ಪ್ರದೇಶವಾಗಿದೆ. 'ಕರುನಾಟ್' ಅಥವಾ ಎತ್ತರವಾದ ಪ್ರದೇಶ ಎಂಬ ಶಬ್ದವು ಸಂಸ್ಕೃತದಲ್ಲಿಯೂ ಧ್ವನಿತವಾಗಿದೆ. ಮಹಾಭಾರತದ ಪುಣೆ ಆವೃತ್ತಿಯಲ್ಲಿ 'ಕರ್ಣಾಟಕ' ಎಂಬ ಪದಕ್ಕೆ ಸಂವಾದಿಯಾಗಿ 'ಉನ್ನತ್ಯಕ' ಎಂಬುದನ್ನು ಬಳಸಿದೆ. (ಕುಂಬಕೋಣಂ ಪ್ರತಿಯಲ್ಲಿ 'ಕರ್ಣಾಟಕ' ಎಂಬ ಶಬ್ದವು ಉಲ್ಲೇಖವಾಗಿರುವ ಎಡೆಯಲ್ಲೆಲ್ಲ ಪುಣೆಯ ಪ್ರತಿಯಲ್ಲಿ 'ಉನ್ನತ್ಯಕ' ಎಂದು ಪ್ರಯೋಗಿಸಲಾಗಿದೆ). ಹೀಗೆ ಕರ್ಣಾಟಕ ಎಂಬ ಶಬ್ದವು 'ಕರುನಾಟ್' ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. ಇದರ ಅರ್ಥ ಉನ್ನತ್ಯಕ ಅಥವಾ ಎತ್ತರವಾದ ಭೂಮಿ ಎಂದು. ಕರ್ಣಾಟಕದ ಪ್ರಸ್ತಾಪವು 'ಮಹಾಭಾರತ'ದಲ್ಲಿಯೂ, ಶೂದ್ರಕನ 'ಮೃಚ್ಛಕಟಿಕ'ದಲ್ಲಿಯೂ ಮತ್ತು ವರಾ ಮಿಹಿರನ 'ಬೃಹತ್‌ಸಂಹಿತೆ'ಯಲ್ಲಿಯೂ ಬಂದಿದೆ. ಹೀಗೆ ಸುಮಾರು ೨೦೦೦ ವರ್ಷಗಳ ಹಿಂದಿನಿಂದಲೂ ಶಬ್ಧ ಪ್ರಚುರದಲ್ಲಿರುವುದು ತಿಳಿಯುತ್ತದೆ. ಬಾದಾಮಿಯ ಚಾಳುಕ್ಯರ ಸೈನ್ಯಕ್ಕೆ ಹಿಂದೆಯೇ ಹೇಳಿರುವಂತೆ 'ಕರ್ಣಾಟ ಬಲ' ಎಂದು ಹೆಸರಿತ್ತು; ಜಾವಾದಲ್ಲಿನ ೧೨ನೆಯ ಶತಮಾನದ ಒಂದು ಶಾಸನದಲ್ಲಿ ಕರ್ಣಾಟಕವನ್ನು ಉಲ್ಲೇಖಿಸಲಾಗಿದೆ.

## ಸ್ಥಳ ನಿರ್ದೇಶನ ಮತ್ತು ಮೇರೆಗಳು

ಕರ್ನಾಟಕ ರಾಜ್ಯವು ಸರಿಸುಮಾರು ೧೧° ೩೫'ನಿಂದ ೧೮°೩೦' ಉತ್ತರ ಅಕ್ಷಾಂಶಮತ್ತು ೭೪°೦೫' ನಿಂದ ೭೮°೪೦' ಪೂರ್ವ ರೇಖಾಂಶಗಳ ನಡುವೆ ನೆಲೆಗೊಂಡಿರುವ ಪ್ರಸ್ಥಭೂಮಿಯ ಭಾಗವಾಗಿದೆ. ಇಲ್ಲಿ ಪಶ್ಚಿಮ ಮತ್ತು ಪೂರ್ವ ಘಟ್ಟಶ್ರೇಣಿಗಳು ನೀಲಗಿರಿ ಪರ್ವತ ಶ್ರೇಣಿಗಳೊಡನೆ ಕೂಡಿಕೊಳ್ಳುತ್ತವೆ. ರಾಜ್ಯವು ದಕ್ಷಿಣ ಭಾರತದ ಡೆಕ್ಕನ್(ದಕ್ಷಿಣ) ಪ್ರಸ್ಥಭೂಮಿ ಪ್ರದೇಶದ ಪಶ್ಚಿಮ ಭಾಗದಲ್ಲಿದೆ. ೧೯೫೬ರ ನವೆಂಬರ್ ಒಂದರಂದು ರಾಜ್ಯಗಳ ಪುನಸ್ಸಂಯೋಜನೆಯ ಅಧಿನಿಯಮದನ್ವಯ ಈ ರಾಜ್ಯವನ್ನು ಸ್ಥಾಪಿಸಲಾಯಿತು. ಮೊದಲಿಗೆ ಮೈಸೂರು ರಾಜ್ಯವೆಂದು ಇದನ್ನು ಕರೆಯಲಾಗುತ್ತಿತ್ತು. ಆನಂತರ ೧೯೭೩ರಲ್ಲಿ ಕರ್ನಾಟಕವೆಂದು ಮರುನಾಮಕರಣ ಮಾಡಲಾಯಿತು. ರಾಜ್ಯದ ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದೆ. ವಾಯವ್ಯದಲ್ಲಿ ಮಹಾರಾಷ್ಟ್ರ ಮತ್ತು ಗೋವ ರಾಜ್ಯಗಳಿವೆ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರಪ್ರದೇಶ, ನೈರುತ್ಯದಲ್ಲಿ ಕೇರಳ, ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು ರಾಜ್ಯಗಳಿವೆ. ಉತ್ತರ ದಕ್ಷಿಣವಾಗಿ ರಾಜ್ಯವು ಸುಮಾರು ೭೫೦ ಕಿಲೋಮೀಟರ್ ಮತ್ತು ಪೂರ್ವ ಪಶ್ಚಿಮವಾಗಿ ಸುಮಾರು ೪೦೦ ಕಿಲೋಮೀಟರ್ ವಿಸ್ತರಿಸಿದ್ದು ಒಟ್ಟು ಸುಮಾರು ೧,೯೧,೭೯೧ ಚದುರ ಕಿಲೋಮೀಟರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ.

ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕವು ೧೯೯೬ ರಲ್ಲಿ ೦.೫೯೮ ಇದ್ದದ್ದು, ೨೦೦೬ ರಲ್ಲಿ ೦.೬೫೮ಕ್ಕೆ ಏರಿಕೆಯಾಗಿ ಅಖಿಲ ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕ ೦.೬೪೮ಕ್ಕಿಂತ ಹೆಚ್ಚಾಗಿರುತ್ತದೆ. ೨೦೦೬ನೇ ಸಾಲಿನಲ್ಲಿ ಕರ್ನಾಟಕ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವು ೦.೬೪೭ ಆಗಿದ್ದು, ಅಖಿಲ ಭಾರತ ಅಭಿವೃದ್ಧಿ ಸೂಚ್ಯಂಕ ೦.೬೩೩ಕ್ಕಿಂತ ಹೆಚ್ಚಾಗಿರುತ್ತದೆ. ಇಂಟರ್ ನ್ಯಾಷನಲ್ ಫುಡ್ ಪಾಲಿಸಿ ರೀಸರ್ಚ್ ಇನ್‌ಸ್ಟಿಟ್ಯೂಟ್ (ಐ ಎಫ್ ಪಿ ಆರ್ ಐ) ನವದೆಹಲಿ ಅವರ ಪ್ರಕಾರ ರಾಜ್ಯದ ಹಸಿವಿನ ಸೂಚ್ಯಂಕವು ೨೩.೭ ಆಗಿದ್ದು, ಭಾರತದ ಹಸಿವಿನ ಸೂಚ್ಯಂಕಕ್ಕೆ ಸಮನಾಗಿದ್ದು, ಉಳಿದ ರಾಜ್ಯಗಳಿಗೆ ಹೋಲಿಸಿದಾಗ ೧೧ನೇ ಸ್ಥಾನದಲ್ಲಿರುತ್ತದೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

ರಾಜ್ಯದ ವಿಸ್ತೀರ್ಣವು ೧,೯೧,೭೯೧ ಚದರ ಕಿಲೋಮೀಟರುಗಳು (೭೪,೧೨೨ ಚದರ ಮೈಲಿಗಳು) ಆಗಿದೆ. ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ. ೫.೮೩ ಭಾಗವನ್ನು ಹೊಂದಿದ್ದು ವಿಸ್ತೀರ್ಣದಲ್ಲಿ ಇದು ಎಂಟನೆಯ ದೊಡ್ಡ ರಾಜ್ಯವಾಗಿದೆ. ದೇಶದಲ್ಲಿನ ರಾಜ್ಯವಾರು ಜನಸಂಖ್ಯೆಯಲ್ಲಿ ಒಂಬತ್ತನೆಯ ಸ್ಥಾನ

ಗಳಿಸಿದೆ. ರಾಜ್ಯದಲ್ಲಿ (೨೦೧೦ರಲ್ಲಿ)ಒಟ್ಟು ೩೦ ಜಿಲ್ಲೆಗಳಿವೆ. ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು, ಬೆಳಗಾವಿ, ಬಳ್ಳಾರಿ, ಬೀದರ್(ಬಿದರೆ), ವಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಗುಲಬರ್ಗಾ, ಯಾದಗಿರಿ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ ಮತ್ತು ಉತ್ತರ ಕನ್ನಡ. ರಾಜ್ಯದ ಅತಿ ಹೆಚ್ಚು ಜನರ ಭಾಷೆ ಕನ್ನಡವಾಗಿದೆ. ಪ್ರತಿ ಜಿಲ್ಲೆಯ ಆಡಳಿತವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು ನಡೆಸುತ್ತಾರೆ. ಜಿಲ್ಲೆಯನ್ನು ಉಪವಿಭಾಗಗಳನ್ನಾಗಿ ಮತ್ತೆ ವಿಭಜಿಸಲಾಗಿದೆ. ಉಪವಿಭಾಗದ ಉಪವಿಭಾಗಾಧಿಕಾರಿಗಳು ಮತ್ತು ಉಪವಿಭಾಗದ ದಂಡಾಧಿಕಾರಿಗಳು ಉಪವಿಭಾಗದ ಆಡಳಿತ ನಡೆಸುತ್ತಾರೆ. ಜಿಲ್ಲಾ ಪಂಚಾಯತಿಯು ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ(ಗ್ರಾಮೀಣ ಆಡಳಿತ) ಮತ್ತು ನಗರಾಡಳಿತ ಇಲಾಖೆಯು ನಗರ/ಪುರಸಭೆ ಆಡಳಿತದ ಮೇಲ್ವಿಚಾರಣೆ ಹೊಂದಿರುತ್ತವೆ.

ಕ್ರಿ.ಶ. ೨೦೦೧ರ ಭಾರತದ ಜನಗಣತಿಯಿಂತೆ ಕರ್ನಾಟಕದ ಒಟ್ಟು ಜನಸಂಖ್ಯೆ ೫,೨೮,೫೦,೫೬೨. ಈ ಪೈಕಿ ಪುರುಷರ ಸಂಖ್ಯೆ ೨,೬೮,೯೮,೯೧೮ (ಶೇ.೫೦.೮೯) ಮತ್ತು ಮಹಿಳೆಯರ ಸಂಖ್ಯೆ.. ೨,೫೯,೫೧,೬೪೪ (ಶೇ. ೪೯.೧೧). ಪ್ರತಿ ೯೬೪ ಮಹಿಳೆಯರಿಗೆ ೧,೦೦೦ ಪುರುಷರಿದ್ದಾರೆ. ೧೯೯೧ರ ಜನಸಂಖ್ಯೆಗೆ ಹೋಲಿಸಿದರೆ ಇದು ಶೇ.೧೭.೨೫ ಪ್ರಮಾಣ ಜನಸಂಖ್ಯಾ ಹೆಚ್ಚಳವನ್ನು ತೋರಿಸುತ್ತದೆ. ಪ್ರತಿ ಚದರ ಕಿಲೋ ಮೀಟರಿಗೆ ೨೭೫.೬ ಜನಸಂಖ್ಯಾ ಸಾಂದ್ರತೆ ಇದೆ ಮತ್ತು ಶೇ.೩೩.೯೮ ಮಂದಿ ನಗರದಲ್ಲಿ ವಾಸಿಸುತ್ತಿದ್ದಾರೆ. ಇನ್ನು ಅಕ್ಷರಸ್ಥರ ಪ್ರಮಾಣ ಶೇ. ೬೬.೬, ಈ ಪೈಕಿ ಶೇ.೭೬.೧ ಪುರುಷರು ಮತ್ತು ಶೇ. ೫೬.೯ ಮಂದಿ ಮಹಿಳಾ ಅಕ್ಷರಸ್ಥರಿದ್ದಾರೆ. ಜನಸಂಖ್ಯೆಯಲ್ಲಿ ಶೇ. ೮೩ ಮಂದಿ ಹಿಂದುಗಳು, ಶೇ. ೧೧ ಮಂದಿ ಮುಸ್ಲಿಮರು, ಶೇ. ೪ ಮಂದಿ ಕ್ರೈಸ್ತರು, ಶೇ. ೦.೭೮ ಮಂದಿ ಜೈನರು, ಶೇ. ೦.೭೩ ಮಂದಿ ಬೌದ್ಧರು ಹಾಗೂ ಉಳಿದವರು ಬೇರೆ ಬೇರೆ ಧರ್ಮಗಳಿಗೆ ಸೇರಿದವರು. ೨೦೧೧ರ ಭಾರತದ ಜನಗಣತಿ (ತಾತ್ಕಾಲಿಕ ಅಂಕಿಅಂಶಗಳನ್ವಯ) ಯಿಂತೆ ಕರ್ನಾಟಕದ ಒಟ್ಟು ಜನಸಂಖ್ಯೆ ೬,೧೧,೩೦,೭೦೪. ಈ ಪೈಕಿ ಪುರುಷರ ಸಂಖ್ಯೆ ೩,೧೦,೫೭,೭೪೨ ಮತ್ತು ಮಹಿಳೆಯರ ಸಂಖ್ಯೆ, ೩,೦೭,೨೦,೦೯೬೨. ಪ್ರತಿ ೯೬೮ ಮಹಿಳೆಯರಿಗೆ ೧,೦೦೦ ಪುರುಷರಿದ್ದಾರೆ. ೨೦೦೧ರ ಜನಸಂಖ್ಯೆಗೆ ಹೋಲಿಸಿದರೆ ಇದು ಶೇ.೧೫.೬೭ ಪ್ರಮಾಣ ಜನಸಂಖ್ಯಾ ಹೆಚ್ಚಳವನ್ನು ತೋರಿಸುತ್ತದೆ. ಪ್ರತಿ ಚದರ ಕಿಲೋ ಮೀಟರಿಗೆ ೩೧೯ ಜನಸಂಖ್ಯಾ ಸಾಂದ್ರತೆ ಇದೆ. ಒಂದರಿಂದ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆ ೬೮,೫೫,೮೦೧. ಒಟ್ಟು ಜನಸಂಖ್ಯೆಯಲ್ಲಿ ಸಾಕ್ಷರರ ಶೇ.೭೫.೬ ಆಗಿದೆ. ಅದರಲ್ಲಿ ಪುರುಷರ ಸಾಕ್ಷರತೆ ಶೇ.೮೨.೮೫ ಮತ್ತು ಮಹಿಳೆಯರ ಸಾಕ್ಷರತೆಯ ಶೇ. ೬೮.೧೩ ಆಗಿದೆ.

## ಪ್ರಾದೇಶಿಕ ಬದಲಾವಣೆಗಳು

ಕ್ರಿ.ಶ. ೧೭೯೯ರ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಾನಂತರ ಹಿಂದಿನ ರಾಜಾಡಳಿತ ರಾಜ್ಯವಾಗಿದ್ದ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ೧೯೫೬ರಲ್ಲಿ ರಾಜ್ಯದ ಪುನಸ್ಸಂಯೋಜನೆ ಅಧಿನಿಯಮದ ಅಡಿಯಲ್ಲಿ ಇದನ್ನೇ ಕೇಂದ್ರವಾಗಿರಿಸಿಕೊಂಡು ಹೊಸ ಮೈಸೂರು ರಾಜ್ಯವು ಉದಯಿಸಿತು. ಆಗ ಈ ರಾಜ್ಯದ ವಿಸ್ತೀರ್ಣ ೭೫,೪೧೨ ಚ.ಕಿ.ಮೀ. ೧೮೮೧ರಲ್ಲಿ ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು, ತುಮಕೂರು, ಕೋಲಾರ, ಕಡೂರು, ಮೈಸೂರು, ಚಿತ್ರದುರ್ಗ ಮತ್ತು ಶಿವಮೊಗ್ಗ ಹೀಗೆ ಒಟ್ಟು ಏಳು ಜಿಲ್ಲೆಗಳನ್ನು ಸೇರಿಸಲಾಗಿತ್ತು. ೧೮೮೬ರಲ್ಲಿ ಎಂಟನೆಯ ಜಿಲ್ಲೆಯಾಗಿ ಹಾಸನ ಜಿಲ್ಲೆಯನ್ನು ರಚಿಸಲಾಯಿತು. ೧೯೩೯ರಲ್ಲಿ ಒಂಬತ್ತನೇ ಜಿಲ್ಲೆಯಾಗಿ ಮಂಡ್ಯ ಜಿಲ್ಲೆಯ ರಚನೆಯಾಯಿತು. ೧೯೫೩ರಲ್ಲಿ ಆಂಧ್ರಪ್ರದೇಶ ರಾಜ್ಯವನ್ನು ರಚಿಸಿದಾಗ ಆಗಿನ ಮದ್ರಾಸ್ ರಾಜ್ಯಕ್ಕೆ ಸೇರಿದ್ದ ಬಳ್ಳಾರಿ ಜಿಲ್ಲೆಯನ್ನು (ಆದೋನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳನ್ನು ಹೊರತುಪಡಿಸಿ) ಅಂದಿನ ಮೈಸೂರು ರಾಜ್ಯಕ್ಕೆ ವರ್ಗಾಯಿಸಲಾಯಿತು. ಇದರಿಂದಾಗಿ

ಮೈಸೂರು ರಾಜ್ಯಕ್ಕೆ ವಿಸ್ತೀರ್ಣವು ೯,೮೯೭ ಚ.ಕಿ.ಮೀ. ಗೆ ಏರಿಕೆಯಾಯಿತು. ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಭಾರತದಲ್ಲಿ ಹೊಸ ಭಾಷಾವಾರು ರಾಜ್ಯಗಳನ್ನು ಸೃಷ್ಟಿಸಲು ರಾಜಕೀಯ ಚಳವಳಿಗಳು ಕಾಣಿಸಿಕೊಂಡವು. ಇದೇ ಕಾಲಕ್ಕೆ ಮದರಾಸು ರಾಜ್ಯದ ಉತ್ತರ ಭಾಗದಿಂದ ತೆಲುಗು ಮಾತನಾಡುವ ರಾಜ್ಯವನ್ನು ಸೃಷ್ಟಿಸಬೇಕೆಂಬ ಚಳವಳಿಗೆ ಹೆಚ್ಚು ಚಾಲನೆ ದೊರೆಯಿತು. ೧೯೫೩ರಲ್ಲಿ ಮದ್ರಾಸ್ ರಾಜ್ಯದ ಹದಿನಾರು ಉತ್ತರ ಜಿಲ್ಲೆಗಳು ಸೇರಿ ಹೊಸ ಆಂಧ್ರ ರಾಜ್ಯದ ಉದಯವಾಯಿತು. ೧೯೫೩ರಲ್ಲಿ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು, ಭಾಷಾವಾರು ರಾಜ್ಯಗಳ ಸೃಷ್ಟಿಗೇ ರಾಜ್ಯಗಳ ಪುನಸ್ಸಂಯೋಜನಾ ಸಮಿತಿಯನ್ನು ಸ್ಥಾಪಿಸಿದರು. ಈ ಸಮಿತಿಗೆ ನ್ಯಾಯವಾದಿ ಫಸಲ್ ಆಲಿ ಮುಖ್ಯಸ್ಥರು. ಸಮಿತಿಯನ್ನು ಫಸಲ್ ಆಲಿ ಸಮಿತಿಯೆಂದೇ ಕರೆಯಲಾಯಿತು. ೧೯೫೪ರಿಂದ ಗೃಹ ಸಚಿವರಾಗಿ ಸೇವೆ ಸಲ್ಲಿಸಿದ ಗೋವಿಂದ ವಲ್ಲಭ ಪಂತ್ ಇದರ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು ನೇಮಕವಾದರು. ಈ ಸಮಿತಿಯು ೧೯೫೫ರಲ್ಲಿ ವರದಿಯನ್ನು ಸಿದ್ಧಪಡಿಸಿ ಭಾರತದ ರಾಜ್ಯಗಳ ಪುನಸ್ಸಂಯೋಜನೆಗೆ ಶಿಫಾರಸು ಮಾಡಿತು.

೧೯೫೬ರ ರಾಜ್ಯಗಳ ಪುನಸ್ಸಂಯೋಜನಾ ಅಧಿನಿಯಮ ನವೆಂಬರ್ ೧ರಂದು ಜಾರಿಗೆ ಬಂತು. ಇದು ಎ, ಬಿ, ಮತ್ತು ಸಿ ರಾಜ್ಯಗಳ ನಡುವೆ ಇದ್ದ ತಾರತಮ್ಯವನ್ನು ತೊಡೆದುಹಾಕಿತು. ಅಲ್ಲದೆ ಈ ಅಧಿನಿಯಮವು ರಾಜ್ಯದ ಗಡಿಗಳನ್ನು ಪುನಸ್ಸಂಯೋಜನೆಯಾಗುವಂತೆ ಮಾಡಿತು. ಕೇಂದ್ರಾಡಳಿತ ಪ್ರದೇಶಗಳು ಹೊಸದಾಗಿ ಹುಟ್ಟಿಕೊಂಡವು ಇಲ್ಲವೇ ರದ್ದಾದವು. ೧೯೫೬ರ ನವೆಂಬರ್ ೧ರಂದು ಭಾರತವನ್ನು ಬೇರೆ ಬೇರೆ ರಾಜ್ಯಗಳಾಗಿ ಮತ್ತು ಕೇಂದ್ರಾಡಳಿತ ಪ್ರದೇಶವಾಗಿ ವಿಭಜಿಸಲಾಯಿತು. ಕೊಡಗು ಜಿಲ್ಲೆ, ದಕ್ಷಿಣ ಮುಂಬೈನ ಕನ್ನಡ ಮಾತನಾಡುವ ಜಿಲ್ಲೆಗಳು ಮತ್ತು ಪಶ್ಚಿಮ ಹೈದರಾಬಾದ್ ರಾಜ್ಯವನ್ನು ಸೇರಿಸಿ ಮೈಸೂರು ರಾಜ್ಯವನ್ನು ವಿಸ್ತರಿಸಲಾಯಿತು. ೧೯೫೬ರ ನವೆಂಬರ್ ೧ರಂದು ರಾಜ್ಯ ಪುನಸ್ಸಂಯೋಜನಾ ಅಧಿನಿಯಮದನ್ವಯ ಈಗಿರುವ ಪ್ರಾದೇಶಿಕ ಘಟಕಗಳೂ ಸೇರಿದಂತೆ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. (೧.೧೧.೧೯೭೩ರಿಂದ ಜಾರಿಗೆ ಬರುವಂತೆ ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು). ರಾಜ್ಯವು ಒಳಗೊಂಡ ಪ್ರದೇಶಗಳೆಂದರೆ :

ಅ. ಬಳ್ಳಾರಿ ಜಿಲ್ಲೆ ಸೇರಿದಂತೆ ಹಳೆಯ ಮೈಸೂರು ರಾಜ್ಯ

ಆ. ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆ ಮತ್ತು ಚಾಂದಘಡ ತಾಲೂಕು ಹೊರತುಪಡಿಸಿ ಬೆಳಗಾವಿ ಜಿಲ್ಲೆ –ಇದು ೫೪,೩೪೭ ಚದರ ಕಿಲೋ ಮೀಟರ್ ಪ್ರದೇಶವನ್ನು ಒಳಗೊಳ್ಳುತ್ತದೆ.

ಇ. ಗುಲಬರ್ಗಾ (ಕೋಡಂಗಲ್ ಮತ್ತು ತಾಂಡೂರು ತಾಲೂಕುಗಳನ್ನು ಹೊರತುಪಡಿಸಿ), ರಾಯಚೂರು (ಅಲಂಪುರ ಮತ್ತು ಗಡವಾಲ ತಾಲೂಕುಗಳನ್ನು ಹೊರತುಪಡಿಸಿ), ೧೪,೦೭೮ ಚದರ ಕಿಲೋ ಮೀಟರ್ ಪ್ರದೇಶವನ್ನು ಒಳಗೊಳ್ಳುತ್ತದೆ, ಬೀದರ್ ಜಿಲ್ಲೆ, (ಅಹಮದ್‌ಪುರ, ನೀಲಂಗ, ಉದ್ಗೀರ್ ತಾಲೂಕುಗಳು, ಬೀದರ್ ತಾಲೂಕಿನ ನಾಯಲ್ಕರ್ ಸರ್ಕಲ್, ನೀರ್ನಾ ಸರ್ಕಲ್ ಹೊರತುಪಡಿಸಿ ಜಹೀರಾಬಾದ್ ತಾಲೂಕು, ಹುಮ್ನಾಬಾದ್ ತಾಲೂಕಿನ ಮೂರು ಹಳ್ಳಿಗಳು ಮತ್ತು ನಾರಾಯಣ್ ಖೇಡ್ ಹೊರತುಪಡಿಸಿ) ಹಿಂದಿನ ಹೈದರಾಬಾದ್ ರಾಜ್ಯದ ೫,೩೬೩ ಚದರ ಕಿಲೋ ಮೀಟರ್ ಪ್ರದೇಶ ಇದರಲ್ಲಿ ಸೇರಿದೆ.

ಈ. ದಕ್ಷಿಣ ಕನ್ನಡ (ಕಾಸರಗೂಡು ತಾಲೂಕು ಮತ್ತು ಅಮೀನದೀವಿ ದ್ವೀಪಗಳನ್ನು ಹೊರತುಪಡಿಸಿ) ಇದು ೮,೩೮೫ ಚದರ ಕಿಲೋ ಮೀಟರ್ ಪ್ರದೇಶವನ್ನು ಒಳಗೊಂಡಿದೆ ಮತ್ತು ಹಿಂದಿನ ಮದ್ರಾಸ್ ರಾಜ್ಯದಿಂದ ೨,೭೮೬ ಚದರ ಕಿಲೋ ಮೀಟರ್ ಪ್ರದೇಶ ಒಳಗೊಂಡಂತೆ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕು ಮತ್ತು

ಉ. ೪,೧೩೧ ಚದರ ಕಿಲೋ ಮೀಟರ್ ಪ್ರದೇಶ ಒಳಗೊಂಡಂತೆ ಕೊಡಗು ಜಿಲ್ಲೆ. ಇದು ಹಿಂದಿನ 'ಸಿ' ವರ್ಗೀಕರಣದ ರಾಜ್ಯಕ್ಕೆ ಸೇರಿತ್ತು.

೧೯೬೬ರಲ್ಲಿ ಸವಣೂರು ತಾಲೂಕನ್ನು ಸೃಷ್ಟಿಸಲಾಯಿತು. ೧೯೭೪ರಲ್ಲಿ ಬಳ್ಳಾರಿಯ ಹಿಂದಿನ ಮಲ್ಲಾಪುರಂ ತಾಲೂಕನ್ನು ವಿಸರ್ಜಿಸಿ ಹಗರಿಬೊಮ್ಮನಹಳ್ಳಿ ತಾಲೂಕನ್ನು ಸೃಷ್ಟಿಸಲಾಯಿತು. ೧೯೮೬ರಲ್ಲಿ ಹಿಂದಿನ ಬೆಂಗಳೂರು ಜಿಲ್ಲೆಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಸೃಷ್ಟಿಸಲಾಯಿತು. ಬೆಂಗಳೂರು ಜಿಲ್ಲೆಯಲ್ಲಿ ಆನೇಕಲ್ ತಾಲೂಕು, ಬೆಂಗಳೂರು ಉತ್ತರ ತಾಲೂಕು (ಹಿಂದಿನ ದೇವನಹಳ್ಳಿ ತಾಲೂಕಿನ ಜಾಲಹೋಬಳಿ, ಹಿಂದಿನ ನೆಲಮಂಗಲ ತಾಲೂಕಿನ ದಾಸನಪುರ ಹೋಬಳಿ ಸೇರಿದಂತೆ) ಬೆಂಗಳೂರು ದಕ್ಷಿಣ ತಾಲೂಕು (ಹಿಂದಿನ ಮಾಗಡಿ ತಾಲೂಕಿನ ತಾವರೆಕೆರೆ ಹೋಬಳಿ, ಹಿಂದಿನ ಹೊಸಕೋಟೆ ತಾಲೂಕಿನ ಬಿದರಹಳ್ಳಿ ಹೋಬಳಿ ಸೇರಿದಂತೆ) ಮತ್ತು ಬೆಂಗಳೂರು ನಗರ ಒಗ್ಗೂಡಿದ ಪ್ರದೇಶಗಳು (ಅರ್ಬನ್ ಅಗ್ಲೋಮರೇಷನ್)ಸೇರಿದವು. ಕರ್ನಾಟಕ ರಾಜ್ಯದ ಅಧಿಕಾರ ವ್ಯಾಪ್ತಿಯು ಮಹಾರಾಷ್ಟ್ರದ ಒಳಕ್ಕೆ ಬರುವ ಬೆಳಗಾವಿ ತಾಲೂಕಿನ ದಾಮ್ನೆ ಎಸ್ ಬೈಲೂರು ಮತ್ತು ಕುದುರಿಮಣಿ ಹಾಗೂ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಮುಖೇಡ್‌ಗೂ ವಿಸ್ತರಿಸುತ್ತದೆ.

೧೯೯೭ರ ಆಗಸ್ಟ್‌ನಲ್ಲಿ ಹೊಸತಾಗಿ ಸೃಷ್ಟಿಸಿದ ಏಳು ಜಿಲ್ಲೆಗಳು ಸೇರಿ ರಾಜ್ಯದ ಒಟ್ಟು ಜಿಲ್ಲೆಗಳ ಸಂಖ್ಯೆ ೨೭ಕ್ಕೇರಿತು. ಬಿಜಾಪುರ ಜಿಲ್ಲೆಯನ್ನು ಬಿಜಾಪುರ ಮತ್ತು ಬಾಗಲಕೋಟೆ ಎಂದು ಎರಡು ಜಿಲ್ಲೆಗಳಾಗಿ ವಿಭಜಿಸಲಾಯಿತು. ಹನ್ನೊಂದು ತಾಲೂಕುಗಳ ಪೈಕಿ ಜಮಖಂಡಿ, ಮುಧೋಳ, ಬೀಳಗಿ, ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ತಾಲೂಕುಗಳನ್ನು ಹೊಸತಾಗಿ ಸೃಷ್ಟಿಸಿದ ಬಾಗಲಕೋಟೆಯಡಿ ತರಲಾಯಿತು. ಈಗಿನ ಬಿಜಾಪುರ ಜಿಲ್ಲೆಯು ಇಂಡಿ, ಸಿಂಧಗಿ, ಬಿಜಾಪುರ, ಬಸವನಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಒಳಗೊಂಡಿದೆ. ಹೊಸ ದಾವಣಗೆರೆ ಜಿಲ್ಲೆಯನ್ನು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲೂಕು, ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ಮತ್ತು ಹೊನ್ನಾಳಿ ತಾಲೂಕುಗಳು, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕುಗಳನ್ನು ವರ್ಗಾಯಿಸಿ ಸೃಷ್ಟಿಸಲಾಯಿತು. ಧಾರವಾಡ ಜಿಲ್ಲೆಯನ್ನು ಮೂರು ಜಿಲ್ಲೆಗಳಾಗಿ ವಿಭಜಿಸಲಾಯಿತು. ಅವೆಂದರೆ ಧಾರವಾಡ, ಗದಗ ಮತ್ತು ಹಾವೇರಿ. ಹಾವೇರಿ ಜಿಲ್ಲೆಯಲ್ಲಿ ಶಿಗ್ಗಾವಿ, ಸವಣೂರು, ಹಾನಗಲ್, ಹಾವೇರಿ, ಬ್ಯಾಡಗಿ, ಹಿರೇಕೆರೂರು ಮತ್ತು ರಾಣಿಬೆನ್ನೂರು ತಾಲೂಕುಗಳು ಸೇರಿವೆ. ಗದಗ ಜಿಲ್ಲೆಯಲ್ಲಿ ನರಗುಂದ, ರೋಣ, ಗದಗ, ಮುಂಡರಗಿ ಮತ್ತು ಶಿರಹಟ್ಟಿ ತಾಲೂಕುಗಳು ಸೇರಿವೆಯಾದರೆ ಉಳಿದ ಐದು ತಾಲೂಕುಗಳು ಅಂದರೆ ಧಾರವಾಡ, ನವಲಗುಂದ, ಹುಬ್ಬಳ್ಳಿ, ಕಲಘಟಗಿ ಮತ್ತು ಕುಂದಗೋಳ ಸೇರಿ ಧಾರವಾಡ ಜಿಲ್ಲೆ ರಚನೆಯಾಗಿದೆ.

ರಾಯಚೂರು ಜಿಲ್ಲೆಯನ್ನು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳೆಂದು ಎರಡು ವಿಭಾಗ ಮಾಡಲಾಗಿದೆ. ಹೊಸತಾಗಿ ರಚಿತವಾದ ಕೊಪ್ಪಳ ಜಿಲ್ಲೆಗೆ ಗಂಗಾವತಿ, ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗ ತಾಲೂಕುಗಳನ್ನು ಸೇರಿಸಲಾಗಿದೆ. ಹಾಗೆಯೇ ಉಳಿದ ಐದು ತಾಲೂಕುಗಳು–ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು ಮತ್ತು ಸಿಂಧನೂರು ತಾಲೂಕುಗಳನ್ನು ರಾಯಚೂರು ಜಿಲ್ಲೆಯಲ್ಲೇ ಮುಂದುವರೆಸಲಾಯಿತು. ದಕ್ಷಿಣ ಕನ್ನಡವನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯೆಂದು ಎರಡು ಜಿಲ್ಲೆಗಳಾಗಿ ವಿಭಜಿಸಲಾಯಿತು. ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಮಂಗಳೂರು ಮತ್ತು ಸುಳ್ಯ ತಾಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಳಿದವು. ಕಾರ್ಕಳ, ಕುಂದಾಪುರ ಮತ್ತು ಉಡುಪಿ ತಾಲೂಕುಗಳನ್ನು ಹೊಸತಾಗಿ ರಚಿಸಿದ ಉಡುಪಿ ಜಿಲ್ಲೆಗೆ ವರ್ಗಾಯಿಸಲಾಯಿತು. ಹಳೆಯ ಮೈಸೂರು ಜಿಲ್ಲೆಯ ಹನ್ನೊಂದು ತಾಲೂಕುಗಳ ಪೈಕಿ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳು ಹೊಸತಾಗಿ ರಚಿತವಾದ ಚಾಮರಾಜನಗರ ಜಿಲ್ಲೆಗೆ ವರ್ಗಾವಣೆಯಾದವು. ಉಳಿದ ಏಳು ತಾಲೂಕುಗಳು ಅಂದರೆ, ಹೆಗ್ಗಡದೇವನಕೋಟೆ, ಹುಣಸೂರು, ಕೃಷ್ಣರಾಜನಗರ, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ ಮತ್ತು ತಿರುಮಕೂಡಲ ನರಸೀಪುರ ತಾಲೂಕುಗಳು ಮೈಸೂರು ಜಿಲ್ಲೆಯ ಭಾಗಗಳಾಗಿ ಮುಂದುವರಿದವು. ೨೦೦೭ರ ಆಗಸ್ಟ್‌ನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಿತಿಯನ್ನು ಪರಿವರ್ತಿಸಿ ರಾಮನಗರ ಜಿಲ್ಲೆಯನ್ನು ರಚಿಸಲಾಯಿತು. ಹಾಗೆಯೇ ಕೋಲಾರ ಜಿಲ್ಲೆಯ ಮಿತಿಯನ್ನು ಪರಿವರ್ತಿಸಿ ಚಿಕ್ಕಬಳ್ಳಾಪುರ

ಜಿಲ್ಲೆಯನ್ನು ಸರ್ಕಾರಿ ಆದೇಶ ಆರ್.ಡಿ.೨೭ ಬುಡಪು, ಬೆಂಗಳೂರು ೨೦೦೭ರ ಆಗಸ್ಟ್ ೩, ತಿದ್ದುಪಡಿ ೨೩.೮.೨೦೦೭ರ ಅನ್ವಯ ರಚಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ರಾಮನಗರ, ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲೂಕುಗಳನ್ನು ರಾಮನಗರ ಜಿಲ್ಲೆಯಡಿ ತರಲಾಯಿತು. ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ತಾಲೂಕುಗಳನ್ನು ಕೋಲಾರ ಜಿಲ್ಲೆಯಿಂದ, ಹೊಸತಾಗಿ ರಚಿಸಿದ ಚಿಕ್ಕಬಳ್ಳಾಪುರ ಜಿಲ್ಲೆಗೆ ವರ್ಗಾಯಿಸಲಾಯಿತು. ೨೦೦೯ರ ಕೊನೆಯಲ್ಲಿ ಗುಲಬರ್ಗಾ ಜಿಲ್ಲೆಯ ಶಹಾಪುರ, ಸುರಪುರ ಮತ್ತು ಯಾದಗಿರಿ ತಾಲೂಕುಗಳನ್ನು ಸೇರಿಸಿ ಯಾದಗಿರಿ ಜಿಲ್ಲೆಯನ್ನು ರಾಜ್ಯದ ೩೦ನೇ ಜಿಲ್ಲೆಯಾಗಿ ರಚಿಸಲಾಯಿತು.


## ಆಡಳಿತ ವಿಭಾಗಗಳು

ಆಡಳಿತ ಉದ್ದೇಶದಿಂದ ಕರ್ನಾಟಕ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳಾಗಿ ೫೨ ಉಪ ವಿಭಾಗಗಳಾಗಿ, ೩೦ ಜಿಲ್ಲೆಗಳಾಗಿ, ೧೭೬ ತಾಲೂಕುಗಳಾಗಿ, ೭೪೭ ಹೋಬಳಿ/ಕಂದಾಯ ವೃತ್ತಗಳಾಗಿ ವಿಭಜಿಸಲಾಗಿದೆ. ಕರ್ನಾಟಕ ರಾಜ್ಯದ ಜಿಲ್ಲಾವಾರು ವಿಸ್ತೀರ್ಣ, ಜನಸಂಖ್ಯೆ ಮತ್ತು ಆಡಳಿತ ವಿಭಾಗಗಳನ್ನು ಮುಂದೆ ನೀಡಿದೆ. ಬೆಂಗಳೂರು ವಿಭಾಗದಲ್ಲಿ ಸೇರಿಸಿರುವ ಪ್ರದೇಶಗಳೆಂದರೆ ಬೆಂಗಳೂರು(ನಗರ), ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳು. ಇವೆಲ್ಲವುಗಳ ಕೇಂದ್ರ ಕಚೇರಿ ಬೆಂಗಳೂರು. ಮೈಸೂರು ವಿಭಾಗದಲ್ಲಿ ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳು ಸೇರಿವೆ. ಇವುಗಳ ಕೇಂದ್ರ ಕಚೇರಿ ಮೈಸೂರು. ಬೆಳಗಾವಿ ವಿಭಾಗದಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಗದಗ, ಹಾವೇರಿ, ಉತ್ತರಕನ್ನಡ ಮತ್ತು ಬಾಗಲಕೋಟೆ ಜಿಲ್ಲೆಗಳು ಸೇರಿವೆ. ಇದರ ಕೇಂದ್ರ ಕಚೇರಿ ಬೆಳಗಾವಿ. ಗುಲಬರ್ಗಾವನ್ನು ಕೇಂದ್ರ ಕಚೇರಿಯಾಗಿರಿಸಿಕೊಂಡಿರುವ ಗುಲಬರ್ಗಾ ವಿಭಾಗಕ್ಕೆ ಬೀದರ್, ಗುಲಬರ್ಗಾ, ಯಾದಗಿರಿ, ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಸೇರಿವೆ. ರಾಜ್ಯದಲ್ಲಿ ಒಟ್ಟು ೨೭,೪೮೧ ಹಳ್ಳಿಗಳಲ್ಲಿ ಜನವಸತಿ ಇದೆ. ೧,೯೨೫ ಹಳ್ಳಿಗಳು ಜನರಹಿತವಾಗಿವೆ. ಒಟ್ಟು ಪಟ್ಟಣಗಳ ಮತ್ತು ನಗರ ಸಭೆಗಳ ಸಂಖ್ಯೆ ೨೭೦. ಗ್ರಾಮಪಂಚಾಯತಿಗಳ ಸಂಖ್ಯೆ ೫,೬೨೮. ಹಾಗೆಯೇ ೨೧೯ ಮುನಿಸಿಪಲ್ ಕಾರ್ಪೋರೇಷನ್‌ಗಳಿವೆ. ಕರ್ನಾಟಕದಲ್ಲಿ ಹತ್ತು ಲಕ್ಷಕ್ಕೂ ಮಿಗಿಲಾದ ಜನಸಂಖ್ಯೆ ಇರುವ ಏಕೈಕ ನಗರವೆಂದರೆ ಬೆಂಗಳೂರು. ದೇಶದ ೨೩ ಮಹಾನಗರಗಳ, ನಗರ ಸಂದಣಿ ಇರುವ ಆರು ನಗರಗಳ ಪೈಕಿ ಬೆಂಗಳೂರು ಕೂಡ ಒಂದು. ಒಂದು ಚದರ ಕಿಲೋ ಮೀಟರಿನಲ್ಲಿ ತಾಲೂಕುವಾರು ವಿಸ್ತೀರ್ಣ, ಜನಸಂಖ್ಯೆ, ಗ್ರಾಮೀಣ ಪ್ರದೇಶದ ಜನಸಂಖ್ಯೆ, ನಗರ ಪ್ರದೇಶದ ಜನಸಂಖ್ಯೆ ಮತ್ತು ಒಟ್ಟು ಪ್ರದೇಶದ ಜನಸಂಖ್ಯೆ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

### ರಾಜ್ಯದಲ್ಲಿರುವ ಆಡಳಿತ ವಿಭಾಗಗಳ ವಿವರ

| ಕ್ರಮ ಸಂಖ್ಯೆ | ವರ್ಷಗಳು | ವಿಸ್ತೀರ್ಣ (ಚ.ಕಿಮೀ) | ತಾಲೂಕುಗಳು | ಹೋಬಳಿಗಳು | ಜನ ವಾಸಿಸುತ್ತಿರುವ ಹಳ್ಳಿಗಳು | ಜನ ವಾಸವಿಲ್ಲದ ಹಳ್ಳಿಗಳು | ನಗರ ಮತ್ತು ಪಟ್ಟಣಗಳು |
|---|---|---|---|---|---|---|---|
| ೧ | ೧೯೬೧ | ೧,೯೧,೭೫೭ | ೧೭೫ | ೬೬೨ | ೨೬,೩೭೭ | ಲಭ್ಯವಿಲ್ಲ | ೨೩೧ |
| ೨ | ೧೯೭೧ | ೧,೯೧,೭೭೩ | ೧೭೫ | ೭೩೯ | ೨೬,೮೨೮ | ೨,೭೦೭ | ೨೪೫ |
| ೩ | ೧೯೮೧ | ೧,೯೧,೭೯೧ | ೧೭೫ | ೭೪೫ | ೨೭,೦೨೪ | ೨,೩೬೨ | ೨೮೧ |
| ೪ | ೧೯೯೧ | ೧,೯೧,೭೯೧ | ೧೭೫ | ೭೪೫ | ೨೭,೦೬೬ | ೨,೧೨೭ | ೨೫೪ |
| ೫ | ೨೦೦೧ | ೧,೯೧,೭೯೧ | ೧೭೬ | ೭೪೫ | ೨೭,೪೮೧ | ೧,೯೨೫ | ೨೭೦ |
| ೬ | ೨೦೧೧ | ೧,೯೧,೭೯೧ | ೧೭೬ | ೭೪೭ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ |

# ಕರ್ನಾಟಕದ ಭೂಸ್ವರೂಪಗಳು



## ಭೂಭೌತಲಕ್ಷಣಗಳು(ಪ್ರಾಕೃತಿಕ ಭೂಗೋಳ)

ಭಾರತ ಒಕ್ಕೂಟದ ಎರಡು ಬೃಹತ್ ಪ್ರಾಂತ್ಯಗಳ ಭಾಗವಾಗಿ ಕರ್ನಾಟಕ ರಾಜ್ಯದ ಭೂಭೌತಲಕ್ಷಣಗಳು ಕಂಡುಬರುತ್ತವೆ. ಆ ಎರಡು ಲಕ್ಷಣಗಳೆಂದರ ದಕ್ಷಿಣ ಪ್ರಸ್ಥಭೂಮಿ ಮತ್ತು ಕಡಲತೀರದ ಬಯಲು ಹಾಗೂ ದ್ವೀಪಗಳು. ರಾಜ್ಯದಲ್ಲಿ ಪ್ರಮುಖವಾದ ನಾಲ್ಕು ಭೂಭೌತಲಕ್ಷಣಗಳನ್ನು ಕಾಣಬಹುದು.


೧. **ಉತ್ತರ ಕರ್ನಾಟಕ ಪ್ರಸ್ಥಭೂಮಿ:** ಉತ್ತರ ಕರ್ನಾಟಕ ಪ್ರಸ್ಥಭೂಮಿಯು ಬೆಳಗಾವಿ, ಬೀದರ್, ಬಿಜಾಪುರ, ಬಾಗಲಕೋಟೆ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಿದೆ. ಇದು ಬಹುತೇಕ ದಖನ್ ಪ್ರಸ್ಥಭೂಮಿಯಿಂದಾಗಿದೆ. ಈ ಪ್ರಸ್ಥಭೂಮಿಯಲ್ಲಿ ಏಕತಾನತೆ ತರುವ ವೃಕ್ಷರಹಿತ ದೃಶ್ಯಾವಳಿ ಎದ್ದುಕಾಣುತ್ತದೆ. ಸರಾಸರಿ ಸಮುದ್ರ ಮಟ್ಟದಿಂದ ಸಾಮಾನ್ಯವಾಗಿ ೩೦೦ ರಿಂದ ೬೦೦ ಮೀಟರ್ ಎತ್ತರವಿದೆ. ಆದಾಗ್ಯೂ ಕೃಷ್ಣಾ, ಭೀಮಾ, ಘಟಪ್ರಭಾ, ಮಲಪ್ರಭಾ ನದಿಗಳ ಬಯಲು, ಅವುಗಳ ಮಧ್ಯೆ ಅಲ್ಲಲ್ಲೇ ಕಾಣಿಸುವ ಜಲಾನಯನ ಪ್ರದೇಶಗಳು, ಮೆಟ್ಟಿಲಿನಾಕಾರದ ದೃಶ್ಯಾವಳಿ, ಲ್ಯಾಟರೈಟ್‌ನಿಂದಾದ ಕಡಿದಾದ ಭಾಗಗಳು, ಶೇಷ ಗುಡ್ಡಗಳು ಮತ್ತು ಏಣುಗಳಿಂದಾಗಿ ವಿಶಾಲವಾದ ಪ್ರಸ್ಥಾಭೂಮಿಯ ಏಕತಾನತೆ ಭಂಗವಾಗುತ್ತದೆ. ಪೂರ್ವದೆಡೆಗೆ ಪ್ರಸ್ಥಭೂಮಿಯ ಸಾಮಾನ್ಯ ಇಳಿಜಾರಿದೆ. ಈ ಪ್ರಾಂತ್ಯದ ಬಲುಪಾಲು ಕಪ್ಪು ಹತ್ತಿ ಮಣ್ಣಿನಿಂದ ಆವೃತವಾಗಿವೆ.

೨. **ಮಧ್ಯಕರ್ನಾಟಕ ಪ್ರಸ್ಥಭೂಮಿ:** ಮಧ್ಯಕರ್ನಾಟಕ ಪ್ರಸ್ಥಭೂಮಿಯ ಬಳ್ಳಾರಿ,ದಾವಣಗೆರೆ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ರಾಯಚೂರು ಕೊಪ್ಪಳ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರಾಂತ್ಯವು ಒಂದೆಡೆ ದಖನ್ ಪ್ರಸ್ಥಭೂಮಿಯಿಂದಾದ ಉತ್ತರ ಕರ್ನಾಟಕ ಪ್ರಸ್ಥಭೂಮಿ, ಇನ್ನೊಂದೆಡೆ ಸಾಪೇಕ್ಷವಾಗಿ ಎತ್ತರಿಸಿರುವ ದಕ್ಷಿಣ ಕರ್ನಾಟಕ ಪ್ರಸ್ಥಭೂಮಿಯ ನಡುವಿನ ಪರಿವರ್ತನಾ ಹೊರಮೈಯ್ಯನ್ನು ಪ್ರತಿನಿಧಿಸುತ್ತದೆ. ಹೆಚ್ಚೂ ಕಡಿಮೆ ಈ ಪ್ರಾಂತ್ಯವು ತುಂಗಭದ್ರಾ ತಗ್ಗು ಪ್ರದೇಶವನ್ನು ಪ್ರತಿನಿಧಿಸುತ್ತದೆ. ಈ ಭಾಗದ ಸಾಧಾರಣ ಔನ್ನತ್ಯ ೪೫೦ ರಿಂದ ೭೦೦ ಮೀಟರ್‌ವರೆಗೆ ವ್ಯತ್ಯಯಗೊಳ್ಳುತ್ತದೆ. ಆದರೂ ಈ ಪರಿವರ್ತನಾ ವಲಯವನ್ನು ಛೇದಿಸಿದಂತೆ ಧಾರವಾಡ ಗುಂಪಿನ ಶಿಲೆಗಳು ಅನೇಕ ಸಮಾಂತರ ಏಣುಗಳಾಗಿ ಕಂಡುಬರುತ್ತವೆ. ಇಂಥ ಶೇಷ ಬೆಟ್ಟಗಳು ಸರಾಸರಿ ಸಮುದ್ರ ಮಟ್ಟದಿಂದ ಸುಮಾರು ೯೦೦ ಮೀಟರ್ ಎತ್ತರದಲ್ಲಿವೆ. ಪೂರ್ವದೆಡೆಗೆ ಈ ಪ್ರಾಂತ್ಯದ ಸಾಮಾನ್ಯ ಇಳಿಜಾರನ್ನು ಕಾಣಬಹುದು.

೩. **ದಕ್ಷಿಣ ಕರ್ನಾಟಕ ಪ್ರಸ್ಥಭೂಮಿ:** ದಕ್ಷಿಣ ಕರ್ನಾಟಕ ಪ್ರಸ್ಥಭೂಮಿಯು ಬೆಂಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಹಾಸನ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರಾಂತ್ಯವು ಬಹುತೇಕ ಕರ್ನಾಟಕ ಭಾಗದ ಕಾವೇರಿ ನದಿಯ ಕೊಳ್ಳವನ್ನು ಒಳಗೊಳ್ಳುತ್ತದೆ. ಇದು ೬೦೦ ಮೀಟರ್ ಸಮೋನ್ನತ ರೇಖೆಯಿಂದ ಆವೃತವಾಗಿದ್ದು, ಕಡಿದಾದ ಇಳಿಜಾರಿರುವುದು ಇದರ ವಿಶೇಷ ಲಕ್ಷಣ. ಪಶ್ಚಿಮ ಮತ್ತು ದಕ್ಷಿಣದಲ್ಲಿ ಪಶ್ಚಿಮಘಟ್ಟಗಳ ಗಿರಿಗಳಿಂದ ಆವೃತವಾಗಿವೆ. ಇದರ ಉತ್ತರ ಭಾಗವು ಸ್ಪಷ್ಟವಾಗಿ ಗುರುತಿಸಬಹುದಾದ ಉನ್ನತ ಪ್ರಸ್ಥಭೂಮಿಯಿಂದ ಛೇದಗೊಂಡಿದೆ. ಪೂರ್ವದಲ್ಲಿ ಕಾವೇರಿ ನದಿಯ ಕಣಿವೆ ಮತ್ತು ಈ ನದಿಯ ಉಪನದಿಗಳು ಅನಾವರಣಗೊಂಡು ಅಸಮ ಬಯಲನ್ನು ಸೃಷ್ಟಿಸಿವೆ. ಈ ಪ್ರಾಂತ್ಯದ ಸಾಧಾರಣ ಎತ್ತರ ೬೦೦ ರಿಂದ ೯೦೦ ಮೀಟರುಗಳಷ್ಟು ವ್ಯತ್ಯಯವಾಗುತ್ತವೆ. ಆದಾಗ್ಗೂ ಶೇಷ ಔನ್ನತ್ಯ ೧,೫೦೦ ರಿಂದ ೧,೭೦೦ ಮೀಟರುಗಳಷ್ಟು ಇರುವುದನ್ನು ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ಮತ್ತು ಕೊಡಗು ಜಿಲ್ಲೆಯ ಬ್ರಹ್ಮಗಿರಿ ಶ್ರೇಣಿಗಳಲ್ಲಿ ಕಾಣಬಹುದು.

೪. **ಕರ್ನಾಟಕದ ಕರಾವಳಿ ಪ್ರದೇಶ:** ಕರ್ನಾಟಕದ ಕರಾವಳಿ ಪ್ರದೇಶವು ಪೂರ್ವದಲ್ಲಿ ಕರ್ನಾಟಕ ಪ್ರಸ್ಥಭೂಮಿಯ ಪಶ್ಚಿಮಘಟ್ಟಗಳ ಅಂಚಿನ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರದ ನಡುವೆ ಹರಡಿದೆ. ಈ ಭಾಗ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಪಶ್ಚಿಮಘಟ್ಟದ ಅನೇಕ ಏಣುಗಳು ಚಾಚಿದ ಭಾಗಗಳು ಅಡ್ಡಹಾಯ್ದಂತೆ ಕಂಡುಬರುತ್ತದೆ. ಈ ಪ್ರದೇಶವೇ

# ಕರ್ನಾಟಕದ ಭೂ ನಿಕ್ಷೇಪಗಳು



- SYENITE
- AMPHIBOLITE/HORN BLEND ESCHIST
- BANDED FERROG INO US CHERT
- DOLERITE & AMPHIBOLITE DYKES
- FELSITE-PORPHYRY-DIORITE DYKE AND LAMP HROPHYRE DYKE
- FERROGINOUS/MANGANIFERROUSCHERT=
- FERRUGINOUSCHERT/B.H.Q/B.F.Q
- GRANITE
- IRON FORMATION
- IRON STONE
- MAGNATITE QUARTZITE
- MANGANESE AND IRON FORMATION WITH PHYLLITE AND CHERT
- META ULTRAMAFITE
- METABASALT/META ANDESITE WITH FERROGENIOUS BANDS
- PEGMATITE VEIN
- PINK GRANULITE
- PYROXENEGRANULITE
- PYROXENEGRANULITE
- PYROXENITE, GABBRO
- QUARTIZITE
- QUARTZ REEF
- QUARTZ VEIN
- QUARTZITE/SILLIMANITE./FUCHSITE

ಅತ್ಯಂತ ಸಂಕೀರ್ಣವಾದುದು. ಇದರ ತುಂಬ ನದಿಗಳಿವೆ, ನದಿಚಾಚುಗಳಿವೆ, ಜಲಪಾತಗಳಿವೆ, ಗಿರಿಶೃಂಗಗಳಿವೆ, ಬೆಟ್ಟಸಾಲುಗಳಿವೆ. ಕರಾವಳಿ ಪ್ರದೇಶವನ್ನು ಎರಡು ಪ್ರಮುಖ ಭೂಭೌತಘಟಕಗಳಾಗಿ ವಿಭಜಿಸಬಹುದು – ಬಯಲು ಮತ್ತು ಪಶ್ಚಿಮಘಟ್ಟಗಳು. ಕರಾವಳಿ ಬಯಲು ಅಳಿವೆಯ ಇಕ್ಕಟ್ಟಾದ ವಿಸ್ತರಣೆಯನ್ನೂ ಮತ್ತು ಕಡಲ ಬಯಲನ್ನು ಪ್ರತಿನಿಧಿಸುತ್ತದೆ. ಪೂರ್ವದೆಡೆ ದಿಢೀರೆಂದು ಎದ್ದಿರುವ ಭಾಗವೇ ಪಶ್ಚಿಮ ಘಟ್ಟಗಳನ್ನು ರೂಪಿಸಿದೆ. ದಕ್ಷಿಣ ಭಾಗಕ್ಕೆ ಹೋಲಿಸಿದರೆ (೯೦೦ ರಿಂದ ೧,೫೦೦ ಮೀಟರ್) ಘಟ್ಟದ ಉತ್ತರ ಭಾಗದ ಔನ್ನತ್ಯ ಕೆಳಮಟ್ಟದ್ದು ಎಂದೇ ಹೇಳಬಹುದು (೪೫೦ ರಿಂದ ೬೦೦ ಮೀಟರ್). ಕರಾವಳಿ ಪಟ್ಟಿಯು ಸರಾಸರಿ ೫೦ರಿಂದ ೮೦ ಕಿಲೋ ಮೀಟರ್ ಅಗಲವಾಗಿದೆ. ಉದ್ದ ಉತ್ತರ ದಕ್ಷಿಣವಾಗಿ ಸುಮಾರು ೨೬೭ ಕಿಲೋ ಮೀಟರ್. ಕೆಲವೆಡೆ ಪಕ್ಕದ ಪಶ್ಚಿಮಘಟ್ಟಗಳ ಶೃಂಗಗಳು ಕಾರವಾರದ ಬಳಿ ಕಾಣುವಂತೆ ಹದಿಮೂರು ಕಿಲೋ ಮೀಟರುಗಳಷ್ಟು ಸನಿಹದಲ್ಲಿದೆ. ಸರಾಸರಿ ಸಮುದ್ರ ಮಟ್ಟದಿಂದ ಈ ಭಾಗದ ಸರಾಸರಿ ಎತ್ತರ ೭೫ ಮೀಟರುಗಳಷ್ಟು.


**ಭೂಸ್ಥಳ(ಮೇಲ್ಮೈ)ಲಕ್ಷಣ:** ಸ್ಥಳ ಲಕ್ಷಣಗಳ ಎಲ್ಲ ವ್ಯತ್ಯಯಗಳ ನಮೂನೆಗಳನ್ನು ಕರ್ನಾಟಕ ಪ್ರತಿನಿಧಿಸುತ್ತದೆ. ಉನ್ನತ ಪರ್ವತಗಳು, ಪ್ರಸ್ಥಭೂಮಿ, ಶೇಷ ಗುಡ್ಡಗಳು ಹಾಗೂ ಕರಾವಳಿ ಬಯಲು. ರಾಜ್ಯವು ಪಶ್ಚಿಮ, ಪೂರ್ವ ಮತ್ತು ದಕ್ಷಿಣದಲ್ಲಿ ಪರ್ವತಮಾಲೆಯಿಂದ ಆವೃತವಾಗಿದೆ. ಆದರೆ ರಾಜ್ಯದ ಪ್ರಧಾನ ಲಕ್ಷಣವೆಂದರೆ ಪ್ರಸ್ಥಭೂಮಿ. ಸರಾಸರಿ ಸಮುದ್ರ ಮಟ್ಟದಿಂದ ಪ್ರಸ್ಥಭೂಮಿಯು ೬೦೦ ರಿಂದ ೯೦೦ ಮೀಟರ್ ಎತ್ತರದಲ್ಲಿದೆ. ಇಡೀ ಭೂ ದೃಶ್ಯ ಅಂಕುಡೊಂಕಾಗಿದ್ದು, ಪರ್ವತಗಳಿಂದ, ಆಳ ಕಮರಿಗಳಿಂದ ಛೇದಿತವಾಗಿದೆ. ಅರಬ್ಬೀ ಸಮುದ್ರಕ್ಕೆ ಎದುರಾಗಿರುವ ಕಿರಿದಾದ ಕರಾವಳಿ ಪಟ್ಟಿಯಲ್ಲಿ ಮಾತ್ರ ಸರಾಸರಿ ಸಮುದ್ರ ಮಟ್ಟಕ್ಕಿಂತ ಮೇಲೆ ३೦೦ ಮೀಟರಿಗಿಂತ ಕಡಿಮೆ ಎತ್ತರದ ಮೈದಾನವನ್ನು ಕಾಣಬಹುದು. ೧,೫೦೦ ಮೀಟರಿಗಿಂತ ಹೆಚ್ಚು ಎತ್ತರದ ಕೆಲವೇ ಶೃಂಗಗಳು ಪಶ್ಚಿಮ ಮತ್ತು ಪೂರ್ವ ಘಟ್ಟದ ಸಮೂಹದಲ್ಲಿವೆ. ಪಶ್ಚಿಮಘಟ್ಟವನ್ನು ಪಶ್ಚಿಮ ಪೂರ್ವ ದಿಕ್ಕುಗಳಲ್ಲಿ ಅಡ್ಡ ಕೊಯ್ದಂತೆ ಚಿತ್ರ ಪಡೆಯುವುದಾದರೆ ನಾವು ಸಾಮಾನ್ಯವಾಗಿ ಮೊದಲು ಕಿರಿದಾದ ಕರಾವಳಿ ಬಯಲು, ಮುಂದೆ ಪೂರ್ವಕ್ಕೆ ಹಾಯ್ದಂತೆ ಚಿಕ್ಕ ಚಿಕ್ಕ ಪ್ರಸ್ಥಭೂಮಿಗಳನ್ನು ವಿವಿಧ ಔನ್ನತ್ಯದಲ್ಲಿ ಕಾಣುತ್ತೇವೆ. ಮುಂದುವರಿದಂತೆ ದಿಢೀರೆಂದು ಬಹು ಎತ್ತರದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಇದರ ನಂತರ ಪೂರ್ವಕ್ಕೆ ಇಳಿಜಾರು ಎದುರಾಗುತ್ತದೆ. ಹಾಗೆಯೇ ಪೂರ್ವ, ಉತ್ತರ ಮತ್ತು ಪಶ್ಚಿಮಕ್ಕೆ ಇಳಿಜಾರು ತೋರುವ ಪ್ರಸ್ಥಭೂಮಿ ಎದುರಾಗುತ್ತದೆ.

ಕರ್ನಾಟಕದ ಉನ್ನತ ಗಿರಿಶೃಂಗಗಳ ಪೈಕಿ ಮುಖ್ಯವಾದವುಗಳೆಂದರೆ ಮುಳ್ಳಯ್ಯನಗಿರಿ (೧,೯೨೫ ಮೀಟರ್), ಬಾಬಾಬುಡನ್‌ಗಿರಿ (ಚಂದ್ರದ್ರೋಣ ಪರ್ವತ–೧,೮೯೪ ಮೀಟರ್), ಮತ್ತು ಕುದುರೆಮುಖ (೧,೮೯೫ ಮೀಟರ್). ಇವೆಲ್ಲವೂ ಚಿಕ್ಕಮಗಳೂರು ಜಿಲ್ಲೆಯಲ್ಲೇ ಇವೆ. ಪುಷ್ಪಗಿರಿ (೧,೯೦೮ ಮೀಟರ್) ಕೊಡಗು ಜಿಲ್ಲೆಯಲ್ಲಿದೆ. ೧,೫೦೦ ಮೀಟರಿಗೂ ಎತ್ತರವಿರುವ ಹತ್ತಾರು ಶೃಂಗಗಳು ರಾಜ್ಯದಲ್ಲಿವೆ. ಬೇರೆ ಬೇರೆ ಎತ್ತರವಿರುವ ಪ್ರದೇಶಗಳ ಶೇಕಡಾವಾರು ಇಂತಿದೆ. ೧೫೦ ಮೀಟರುಗಳಿಗೂ ಕಡಿಮೆ ಎತ್ತರದವು ೫.೧೬; ೧೫೦ ರಿಂದ ३೦೦ ಮೀಟರ್ ಎತ್ತರದವು ೧.೯೫; ३೦೦ ರಿಂದ ೬೦೦ ಮೀಟರ್ ಎತ್ತರದವು ೪३.೫೧; ೬೦೦ರಿಂದ ೧३೫೦ ಮೀಟರ್ ಎತ್ತರದವು ೪೮.೧೮; ೧३೫೦ ಮೀಟರಿಗೂ ಹೆಚ್ಚು ಎತ್ತರದವು ೦.೫೭.

## ಭೂವಿಜ್ಞಾನ

ಭೂಇತಿಹಾಸವನ್ನು ಶಿಲೆಗಳ ವಯೋಮಾನ, ಅವುಗಳಲ್ಲಿ ಲಭ್ಯವಿರುವ ಜೀವ್ಯವಶೇಷಗಳನ್ನು ಆಧರಿಸಿ ಎರಡು ಮಹಾಕಲ್ಪ (ಇಯಾನ್) ಹಾಗೂ ನಾಲ್ಕು ಕಲ್ಪಗಳಾಗಿ (ಇರಾ) ಭೂವಿಜ್ಞಾನಿಗಳು ವಿಭಜಿಸಿದ್ದಾರೆ. ಒಂದೊಂದು ಕಲ್ಪವನ್ನು ಯುಗ (ಪಿರೀಯಡ್), ಯುಗವನ್ನು ಉಪಯುಗ (ಇಪೋಕ್), ಉಪಯುಗವನ್ನು ಕಾಲ (ಏಜ್) ಎಂದು ವಿಭಜನೆ ಮಾಡಲಾಗಿದೆ.

## ಕರ್ನಾಟಕದ ಇಳಿಜಾರು ಪ್ರದೇಶಗಳು



**ಮಹಾಕಲ್ಪಗಳು:**

೧. ಪ್ರಿಕೇಂಬ್ರಿಯನ್ (ಕೇಂಬ್ರಿಯನ್‌ಗಿಂತ ಹಿಂದಿನದು),
೨. ಫೆನೆರೋಝೋಯಿಕ್ (ದೃಶ್ಯ ಮಹಾಕಲ್ಪ)

**ಪ್ರಿಕೇಂಬ್ರಿಯನ್ ಮಹಾಕಲ್ಪ-ಕಲ್ಪಗಳು:**

೧. ಆರ್ಕೇಯನ್ (ಆರ್ಷೇಯ) - ೩೫೦ ರಿಂದ ೨೫೦ ಕೋಟಿ ವರ್ಷಗಳು ಹಿಂದಿನದು
೨. ಪ್ರೊಟಿರೋಝೋಯಿಕ್ (ಆದಿಜೀವಿ ಕಲ್ಪ) - ೨೫೦ ರಿಂದ ೬೦ ಕೋಟಿ ವರ್ಷಗಳು ಹಿಂದಿನದು

**ದೃಶ್ಯಮಹಾಕಲ್ಪ:**

೧ ಪೆಲಿಯೋಝೋಯಿಕ್ (ಪ್ರಾಚೀನಜೀವಿ ಕಲ್ಪ) ೬೦ ರಿಂದ ೨೫.೩ ಕೋಟಿ ವರ್ಷಗಳು ಹಿಂದಿನದು
೨. ಮೀಸೋಝೋಯಿಕ್ (ಮಧ್ಯಜೀವಿಕಲ್ಪ )೨೨.೫ ರಿಂದ ೬.೫ ಕೋಟಿ ವರ್ಷಗಳು ಹಿಂದಿನದು
೩. ಸೀನೋಝೋಯಿಕ್ (ನವಜೀವಿ ಕಲ್ಪ) ೬.೫ ರಿಂದ ೦ ಕೋಟಿ ವರ್ಷಗಳು ಹಿಂದಿನದು

ಕರ್ನಾಟಕದಲ್ಲಿನ ಶಿಲಾರಚನೆಗಳನ್ನು ಪ್ರಮುಖವಾಗಿ ನಾಲ್ಕು ವಿಭಾಗವಾಗಿ ವಿಂಗಡಿಸಬಹುದು. ಅತ್ಯಂತ ವ್ಯಾಪಕವಾಗಿ ಹರಡಿರುವ ಬಹುತೇಕ ನೆಲಮಟ್ಟದಲ್ಲೇ ಕಾಣುವ ನೈಸ್ ಶಿಲಾ ಸಂಕೀರ್ಣ. ಇದರಲ್ಲೂ ಎರಡು ವಯೋಮಾನದ ನೈಸ್ ಶಿಲೆಗಳಿವೆ. ಪುರಾತನ ನೈಸ್ ಶಿಲೆಗಳ ವಯೋಮಾನ ೩೦೦ ಕೋಟಿ ವರ್ಷಕ್ಕೂ ಹೆಚ್ಚು. ಇವು ಟೋನೋಲೈಟ್ ಮತ್ತು ಟ್ರಾಂಜೋಮೈಟ್ ಸಂಯೋಜನೆಯುಳ್ಳವು. ಬಹುತೇಕ ರಾಮನಗರ ಗ್ರಾನೈಟ್ ಪಟ್ಟಿಯ ಪಶ್ಚಿಮ ಭಾಗಕ್ಕೆ ಇದು ಸೀಮಿತವಾಗಿವೆ. ಹಾಗೆಯೇ ಕರ್ನಾಟಕದ ಪೂರ್ವ ಭಾಗದಲ್ಲಿ ವಿಸ್ತರಿಸಿರುವ ಕಿರಿಪ್ರಾಯದ ನೈಸ್ ಸಂಕೀರ್ಣ - ವಯೋಮಾನ ಸುಮಾರು ೨೬೦ ಕೋಟಿ ವರ್ಷ. ಇದನ್ನುಳಿದರೆ ಕರ್ನಾಟಕ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿರುವ ಶಿಲೆಗಳೆಂದರೆ ಶಿಸ್ಟ್ ಶಿಲಾಪಟ್ಟಿಗಳು (ಶಿಸ್ಟ್ ಎಂದರೆ ರೂಪಾಂತರಗೊಂಡ ಪತ್ರರೂಪಿ ಶಿಲೆಗಳು.) ಇವುಗಳಲ್ಲೂ ಮೂರು ಬಗೆಯಿದೆ. ಅತ್ಯಂತ ಪುರಾತನ ಶಿಸ್ಟ್ ಶಿಲೆಗಳು - ಮೊದಲನೆಯ ಬಗೆಯವು. ಈ ಗುಂಪಿನಲ್ಲಿ ಬರುವ ಶಿಲಾ ಜಾಡುಗಳೆಂದರೆ ಸರಗೂರು ಶಿಸ್ಟ್ ಜಾಡು, ಹೊಳೆನರಸೀಪುರ ಶಿಸ್ಟ್ ಜಾಡು, ಕುಣಿಗಲ್ ಶಿಸ್ಟ್ ಜಾಡು, ಗುರುಗುಂಟ ಶಿಸ್ಟ್ ಜಾಡು, ಆಲದಹಳ್ಳಿ ಶಿಸ್ಟ್ ಜಾಡು ಕಲ್ಯಾಡಿ ಶಿಸ್ಟ್ ಜಾಡು, ಕೃಷ್ಣರಾಜಪೇಟೆ ಶಿಸ್ಟ್ ಜಾಡು, ನುಗ್ಗೇಹಳ್ಳಿ ಶಿಸ್ಟ್ ಜಾಡು. ಇವೆಲ್ಲವೂ ಹೆಚ್ಚಿನ ಪ್ರಮಾನದಲ್ಲಿ ರೂಪಾಂತರಿತ ಮೇಫಿಕ್, ಅಲ್ಟ್ರಾ ಮೇಫಿಕ್ ಶಿಲೆಗಳನ್ನು ಹೊಂದಿವೆ. ವಿಶೇಷವಾಗಿ ಆಲದಹಳ್ಳಿ, ಕಲ್ಯಾಡಿ ಜಾಡು ತಾಮ್ರ ನಿಕ್ಷೇಪಗಳಿಗೆ ಪ್ರಸಿದ್ಧ. ನುಗ್ಗೇಹಳ್ಳಿ ಜಾಡು ಕ್ರೋಮೈಟ್ ನಿಕ್ಷೇಪಗಳಿಗೆ ಪ್ರಸಿದ್ಧ. ಮೇಲಿನ ಈ ಎಲ್ಲ ಶಿಲಾ ಜಾಡುಗಳನ್ನು ಸರಗೂರು ಶಿಸ್ಟ್‌ಗಳಿಗೆ ಹೋಲಿಸಿ ಅದೇ ಹೆಸರಿನಿಂದ ಭೂವೈಜ್ಞಾನಿಕವಾಗಿ ಗುರುತಿಸಲಾಗಿದೆ. ಇವೆಲ್ಲವುದರ ವಯೋಮಾನ ೩೦೦ ಕೋಟಿ ವರ್ಷಗಳಿಗಿಂತ ಹೆಚ್ಚು.

ಎರಡನೆಯ ವರ್ಗದ ಶಿಸ್ಟ್ ಶಿಲಾ ಜಾಡನ್ನು ಸ್ವರ್ಣಭರಿತ ಎಂದು ಗುರುತಿಸಲಾಗಿದೆ. ಇವುಗಳಲ್ಲಿ ಮುಖ್ಯವಾದ ಶಿಸ್ಟ್ ಶಿಲಾ ಜಾಡುಗಳೆಂದರೆ ಕೋಲಾರ ಶಿಸ್ಟ್ ಜಾಡು, ಪೆನ್ನಾರ್ ಹಗರಿ ಶಿಸ್ಟ್ ಜಾಡು, ಹಟ್ಟಿ ಮಸ್ಕಿ ಶಿಸ್ಟ್ ಜಾಡು, ಮಂಗಳೂರು ಶಿಸ್ಟ್ ಜಾಡು, ಹುನಗುಂದ ಕುಷ್ಟಗಿ ಶಿಸ್ಟ್ ಜಾಡು. ಈ ಪೈಕಿ ಅತ್ಯಂತ ಪ್ರಸಿದ್ಧ ಶಿಸ್ಟ್ ಶಿಲಾ ಜಾಡೆಂದರೆ ಕೋಲಾರ ಮತ್ತು ಹಟ್ಟಿ-ಮಸ್ಕಿ ಶಿಸ್ಟ್ ಜಾಡು. ಇವುಗಳ ವಯೋಮಾನ ೨೭೦ ಕೋಟಿ ವರ್ಷಕ್ಕೂ ಮಿಗಿಲು.ಮೂರನೆಯ ಗುಂಪಿನ ಶಿಸ್ಟ್ ಶಿಲಾ ಜಾಡನ್ನು ಧಾರವಾಡ ವಿಧದ ಶಿಲಾ ಜಾಡೆಂದು ಗುರುತಿಸಿದೆ. ಇವನ್ನು ಸಾಮಾನ್ಯವಾಗಿ ಭೂವೈಜ್ಞಾನಿಕವಾಗಿ ಕಿರಿಪ್ರಾಯದ ಶಿಸ್ಟ್ ಶಿಲಾ ಜಾಡೆಂದು ಸಂಬೋಧಿಸುವುದುಂಟು. ಇವುಗಳಲ್ಲಿ ಪ್ರಮುಖವಾದದ್ದು ಮತ್ತು ಹೆಚ್ಚು ವ್ಯಾಪಕವಾಗಿರುವ ಶಿಸ್ಟ್ ಜಾಡೆಂದರೆ :ಬಾಬಾಬುಡನ್ ಶಿಸ್ಟ್ ಜಾಡು, ಚಿತ್ರದುರ್ಗ ಶಿಸ್ಟ್ ಜಾಡು ಮತ್ತು ಶಿವಮೊಗ್ಗ ಶಿಸ್ಟ್

ಜಾಡು. ಪ್ರಮುಖವಾಗಿ ಕಬ್ಬಿಣ, ಮ್ಯಾಂಗನೀಸ್, ತಾಮ್ರ ಲೋಹಗಳಿಗೆ ಈ ಜಾಡುಗಳು ಹೆಸರುವಾಸಿ. ಇವುಗಳ ವಯೋಮಾನ ಅಂದಾಜು ೩೦೦ ಕೋಟಿ ವರ್ಷ.

ಇವುಗಳ ಅನಂತರ ಕರ್ನಾಟಕದ ಭೂವಿಜ್ಞಾನದಲ್ಲಿ ಎದ್ದು ಕಾಣುವ ಲಕ್ಷಣಗಳೆಂದರೆ ಕಿರಿಪ್ರಾಯದ ಗ್ರಾನೈಟ್ ಶಿಲೆಗಳು. ಈ ಕಿರಿಪ್ರಾಯದ ಗ್ರಾನೈಟ್ ಶಿಲೆಗಳು ಧಾರವಾಡ ಶಿಲಾಸ್ತೋಮದ ಚಟುವಟಿಕೆಯ ನಂತರ ಮೈದಳೆದ ಶಿಲೆಗಳು. ಇವುಗಳ ಪ್ರಾಯ ೨೬೦ ಕೋಟಿ ವರ್ಷಗಳಿಂದ ೨೫೦ ಕೋಟಿ ವರ್ಷಗಳು. ಈ ವಯೋಮಾನದ ಶಿಲೆಗಳು ಉತ್ತರ ದಕ್ಷಿಣವಾಗಿ ರೇಖೀಯವಾಗಿ ಹಬ್ಬಿವೆ. ಸುಮಾರು ೭೦೦ ಕಿ.ಮೀ. ಗಳಷ್ಟು ಉದ್ದವಿವೆ, ೫೦ ಕಿ.ಮೀ. ಗರಿಷ್ಠ ಅಗಲ. ಹಿಂದೆ ಈ ಶಿಲೆಗಳನ್ನು ಕ್ಲೋಸ್‌ಪೆಟ್ ಗ್ರಾನೈಟ್ ಎಂದು ಕರೆಯುತ್ತಿದ್ದರು. ಅದನ್ನೇ ಈಗ ರಾಮನಗರ ಗ್ರಾನೈಟ್ ಎಂದು ಕರೆಯುತ್ತಾರೆ (ಸರ್ ಬ್ಯಾರಿ ಕ್ಲೋಸ್ – (೧೭೫೬–೧೮೧೩) ಈಸ್ಟ್ ಇಂಡಿಯಾ ಕಂಪನಿಯಲ್ಲಿದ್ದ ಸೈನ್ಯಾಧಿಕಾರಿ. ಶ್ರೀರಂಗಪಟ್ಟಣ ಯುದ್ಧದಲ್ಲಿ ಟಿಪ್ಪುವನ್ನು ಸೋಲಿಸಿದುದರಲ್ಲಿ ಇವನ ಪಾತ್ರ ಮಹತ್ವದ್ದು. ಎಂದೇ ಅವನ ಹೆಸರಿನಲ್ಲಿ ರಾಮನಗರವನ್ನು ಹಿಂದೆ ಕ್ಲೋಸ್‌ಪೇಟೆ ಎನ್ನುತ್ತಿದ್ದರು). ಕರ್ನಾಟಕದಲ್ಲಿ ಅಲ್ಲಲ್ಲೇ ಬಿಡಿಬಿಡಿಯಾಗಿ ಮೈದಳೆದಿರುವ ಚಿತ್ರದುರ್ಗ, ಅರಸೀಕೆರೆ, ಬಾಣಾವರ ಗ್ರಾನೈಟ್‌ಗಳನ್ನು ಈ ಗುಂಪಿಗೆ ಸೇರಿಸಬಹುದು.

ಮೇಲೆ ವಿವರಿಸಿದ ಈ ಎಲ್ಲ ಶಿಲಾ ಜಾಡುಗಳು ಸ್ಥೂಲವಾಗಿ ಆರ್ಷೇಯ ಕಲ್ಪಕ್ಕೆ ಸೇರಿವೆ. ಇದರ ನಂತರ ಕರ್ನಾಟಕದಲ್ಲಿ ಪ್ರಮುಖವಾದ ಭೂವೈಜ್ಞಾನಿಕ ರಚನೆಗಳೆಂದರೆ ಕರ್ನಾಟಕದ ಉತ್ತರ ಭಾಗದಲ್ಲಿ ವಿಶೇಷವಾಗಿ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಯಾದಗಿರಿ ಮತ್ತು ಗುಲಬರ್ಗಾ ಜಿಲ್ಲೆಯಲ್ಲಿ ನೈಸ್ ಶಿಲೆಯನ್ನು ಬುನಾದಿ ಮಾಡಿಕೊಂಡು ಅದರ ಮೇಲೆ ಅನನುರೂಪವಾಗಿ ಸ್ತರವಾಗಿರುವ ಶಿಲೆಗಳು ಸುಮಾರು ೮,೦೦೦ ಚ.ಕಿ.ಮೀ. ಜಾಗವನ್ನು ಆಕ್ರಮಿಸಿದೆ. ಇವುಗಳನ್ನು ಕಲಾದಗಿ ಗುಂಪಿನ ಶಿಲೆಗಳು ಎನ್ನುತ್ತಾರೆ (ಕಲಾದಗಿ, ಬಾಗಲಕೋಟೆ ಜಿಲ್ಲೆಯ ಒಂದು ಪಟ್ಟಣ. ಇದರ ಪ್ರಾತಿನಿಧಿಕ ಶಿಲೆಗಳನ್ನು ಇಲ್ಲಿ ಕಾಣಬಹುದು).

ಕರ್ನಾಟಕದ ಈಶಾನ್ಯ ಭಾಗದಲ್ಲಿ ವಿಶೇಷವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಕಲಾದಗಿ ಗುಂಪಿನ ಶಿಲೆಗಳ ಮೇಲೆ ಅವಕ್ಕಿಂತಲೂ ಕಿರಿಪ್ರಾಯದ ಶಿಲಾಗುಂಪು ಸಂಚಯವಾಗಿರುವುದು ಕಂಡುಬರುತ್ತದೆ. ಈ ಗುಂಪಿನ ಶಿಲೆಗಳನ್ನು ಭೀಮಾ ಗುಂಪೆಂದು ವರ್ಗೀಕರಿಸಿದೆ ಒಟ್ಟು ವಿಸ್ತೀರ್ಣ ೫,೨೦೦ ಚ.ಕಿ.ಮೀ. ಈ ಎರಡೂ ಗುಂಪಿನ ಶಿಲೆಗಳು ಅತ್ಯಂತ ದೊಡ್ಡ ಪ್ರಮಾಣದ ಸುಣ್ಣಶಿಲಾ ನಿಕ್ಷೇಪವನ್ನು ಹೊಂದಿವೆ. ಇವೆಲ್ಲವನ್ನೂ ಸ್ಥೂಲವಾಗಿ ಆದಿಜೀವಿ ಕಲ್ಪದ ಶಿಲೆಗಳೆನ್ನಬಹುದು. ಕರ್ನಾಟಕದಲ್ಲಿ ಇದರ ನಂತರದ ಪ್ರಮುಖ ಶಿಲಾರಚನೆಗಳೆಂದರೆ ದಖನ್ ಪ್ರಸ್ಥಭೂಮಿಯನ್ನು ರೂಪಿಸಿರುವ ಟ್ರಾಪ್ ಮತ್ತು ಅಂತರ ಟ್ರಾಪ್ ಶಿಲೆಗಳು. ಇವು ಭಾರತದ ಭೂಚರಿತ್ರೆಯಲ್ಲಿ ಅತ್ಯಂತ ಮುಖ್ಯವಾದ ಲಕ್ಷಣಗಳು ಎನ್ನಿಸಿವೆ. ಬೆಳಗಾವಿ, ಯಾದಗಿರಿ, ಗುಲಬರ್ಗಾ, ಬೀದರ್ ಮತ್ತು ಬಿಜಾಪುರದವರೆಗೆ ಟ್ರಾಪ್ ಶಿಲೆಗಳು ವಿಸ್ತರಿಸಿವೆ. ಇವು ಮಧ್ಯಜೀವಿ ಕಲ್ಪದ ಕ್ರಿಟೇಷಿಯಸ್ ಯುಗದ ಅಂತ್ಯದಲ್ಲಿ ಮೈದಳೆದ ಶಿಲೆಗಳು. ಮುಂದೆ ತೃತೀಯ ಜೀವಿ ಕಲ್ಪದ ಆರಂಭದ ಕಾಲಕ್ಕೂ ವಿಸ್ತರಿಸಿದವು. ಇದರ ನಂತರದ ಶಿಲಾ ರಚನೆಗಳು ಆಧುನಿಕ ಕಾಲಕ್ಕೆ ಸೇರಿವೆ. ಲ್ಯಾಟರೈಟ್ (ಮುರಕಲ್ಲು), ಮೆಕ್ಕಲು ನಿಕ್ಷೇಪಗಳನ್ನು ಇವು ಒಳಗೊಳ್ಳುತ್ತವೆ.

## ಖನಿಜ ಸಂಪನ್ಮೂಲಗಳು

ಕರ್ನಾಟಕದಲ್ಲಿ ಹಲವು ಲೋಹ, ಅಲೋಹ ಖನಿಜಗಳ ಭಂಡಾರವಿದೆ. ಚಿನ್ನವನ್ನು ಉತ್ಪಾದಿಸುತ್ತಿರುವ ಏಕೈಕ ರಾಜ್ಯವಿದು. ಬಹು ಮುಖ್ಯವಾದ ಕೊರತೆಯೆಂದರೆ ಇಲ್ಲಿ ಇಂಧನ ಖನಿಜಗಳು ಅಲಭ್ಯ. ಪೆಟ್ರೋಲ್, ಕಲ್ಲಿದ್ದಲು ಸಂಪನ್ಮೂಲವನ್ನು ಹೊರ ರಾಜ್ಯಗಳಿಂದ ಖರೀದಿಸಬೇಕು. ಆದರೂ ಪ್ರಮುಖ ಕೈಗಾರಿಕೆಗಳಿಗೆ

ಬೇಕಾದ ಅಗತ್ಯ ಲೋಹಗಳ ಭಂಡಾರ ಸಾಕಷ್ಟಿದೆ. ವಿಶೇಷವಾಗಿ ಬಾಕ್ಸೈಟ್, ಕಬ್ಬಿಣ, ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳು, ಕ್ರೋಮೈಟ್ ಅದಿರು ರಫ್ತು ಮಾಡುವ ಪ್ರಮಾಣದಲ್ಲಿ ಲಭ್ಯ. ವಿಶೇಷವಾಗಿ ಸಿಮೆಂಟ್ ಕಾರ್ಖಾನೆಗೆ ಬೆನ್ನೆಲುಬಾದ ಸುಣ್ಣಶಿಲಾ ನಿಕ್ಷೇಪಗಳು ಹೇರಳವಾಗಿವೆ. ಹಾಗೆಯೇ ಕರ್ನಾಟಕ ಅಲಂಕರಣ ಶಿಲೆಗಳಿಗೂ ಹೆಸರುವಾಸಿಯಾಗಿದೆ. ಕರ್ನಾಟಕದ ಭೂವಿಜ್ಞಾನವನ್ನು ಅಧ್ಯಯನ ಮಾಡಲು ೧೮೮೦ರಷ್ಟು ಹಿಂದೆಯೇ ಮೈಸೂರು ಭೂವಿಜ್ಞಾನ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಈಗ ಅದನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯೆಂದು ಮರುನಾಮಕರಣ ಮಾಡಲಾಗಿದೆ. ಬೇರೆ ಬೇರೆ ಶಿಲಾವರ್ಗಗಳಲ್ಲಿ ದೊರೆಯುವ ಒಟ್ಟು ಖನಿಜ ನಿಕ್ಷೇಪಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು.

**ಲೋಹ ಖನಿಜಗಳು:** ಕ್ರೋಮೈಟ್, ಕಬ್ಬಿಣ, ಮ್ಯಾಂಗನೀಸ್, ಬಾಕ್ಸೈಟ್, ತಾಮ್ರ, ಚಿನ್ನ, ಬೆಳ್ಳಿ; **ಅಲೋಹ ಖನಿಜಗಳು:** ಕಲ್ನಾರು, ಜೇಡಿಮಣ್ಣು, ಕುರಂದ, ಕಾವುಜೇಡಿ, ಸುದ್ದೆಮಣ್ಣು, ಕಯನೈಟ್, ಓಕರ್, ಬೆಣಚು, ಬಳಪದಕಲ್ಲು, ಸುಣ್ಣಶಿಲೆ; **ಕಟ್ಟಡದ ಕಲ್ಲುಗಳು:** ಷಹಬಾದ್ ಕಲ್ಲು, ಗ್ರಾನೈಟ್ ಸಂಬಂಧಿ ಶಿಲೆಗಳು, ಡಾಲರೈಟ್, ಗ್ಯಾಬ್ರೋ, ಮರಳುಕಲ್ಲು, ಪೈರಾಕ್ಸಿನೈಟ್, ಚಾರ್ನೋಕೈಟ್, ನೈಸ್, ಇತ್ಯಾದಿ; ಲೋಹ ಖನಿಜಗಳೆಲ್ಲವೂ ಪ್ರಮುಖವಾಗಿ ಪ್ರಧಾನ ಖನಿಜಗಳ ಗುಂಪಿಗೆ ಬರುತ್ತವೆ. ಉಳಿದವು ಅಪ್ರಧಾನ ಖನಿಜಗಳು.ಖನಿಜಗಳ ಉತ್ಪಾದನೆಯ ದೃಷ್ಟಿಯಿಂದ ಕಬ್ಬಿಣದ ಅದಿರು, ಸುಣ್ಣಶಿಲೆ, ಮ್ಯಾಂಗನೀಸ್, ಮ್ಯಾಗ್ನೆಸೈಟ್, ಬಾಕ್ಸೈಟ್ ಮತ್ತು ಚಿನ್ನ ಅತ್ಯಂತ ದೊಡ್ಡ ಸ್ಥಾನವನ್ನು ಪಡೆದಿವೆ.

ಕರ್ನಾಟಕಕ್ಕೆ ಚಿನ್ನದ ನಾಡು ಎಂಬ ಖ್ಯಾತಿ ಇದೆ. ೧೯೮೦ರಿಂದ ೨೦೦೧ರವರೆಗೆ ಕೋಲಾರದ ಚಿನ್ನದ ಗಣಿಗಳು ಚಿನ್ನದ ಉತ್ಪಾದನೆಯಲ್ಲಿ ತೊಡಗಿದ್ದವು. ಇವುಗಳಲ್ಲಿ ಮೈಸೂರು ಗಣಿ, ಚಾಂಪಿಯನ್ ಗಣಿ ಮತ್ತು ನಂದಿದುರ್ಗ ಗಣಿಗಳು ಪ್ರಮುಖವಾದವು. ಅದರಲ್ಲೂ ಚಾಂಪಿಯನ್ ಗಣಿಗಳು ೩,೨೩೦ ಮೀಟರ್ ಆಳ ಇಳಿದು, ಇಡೀ ಕೋಲಾರ ಚಿನ್ನದ ಗಣಿಗಳ ಪೈಕಿ ಹೆಚ್ಚಿನ ಚಿನ್ನವನ್ನು ಉತ್ಪಾದನೆ ಮಾಡಿವೆ. ಕೋಲಾರ್ ಗೋಲ್ಡ್ ಫೀಲ್ಡ್‌ನ ಒಟ್ಟು ಚಿನ್ನದ ಉತ್ಪಾದನೆ ಸುಮಾರು ೮೦೦ ಟನ್ ಎಂದು ಅಂದಾಜು. ಈಗ ಗಣಿಗಳು ಸಂಪೂರ್ಣವಾಗಿ ನಿಂತುಹೋಗಿವೆ. ಅದುರಿನಲ್ಲಿ ಚಿನ್ನದ ಅಂಶ ಕಡಿಮೆಯಾಗಿ ಆಳ ಗಣಿಗಳ ನಿರ್ವಹಣೆಯ ವೆಚ್ಚ ಅಧಿಕವಾಗಿದ್ದರಿಂದ ಈ ಗಣಿಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಯಿತು. ಸದ್ಯದಲ್ಲಿ ಹಟ್ಟಿ ಚಿನ್ನದ ಗಣಿಗಳು ವರ್ಷಕ್ಕೆ ಎರಡರಿಂದ ಮೂರು ಟನ್ ಚಿನ್ನವನ್ನು ಉತ್ಪಾದನೆ ಮಾಡುತ್ತಿವೆ. ಭಾರತದಲ್ಲಿ ಈಗ ಚಿನ್ನವನ್ನು ಉತ್ಪಾದನೆ ಮಾಡುತ್ತಿರುವ ಏಕೈಕ ಗಣಿ ಇದು. ಕರ್ನಾಟಕದಲ್ಲೇ ಪುರಾತನರು ತೋಡಿದ ಸುಮಾರು ೫೩ ಚಿನ್ನದ ಗುಂಡಿ/ಗಣಿಗಳನ್ನು ಭೂವಿಜ್ಞಾನಿಗಳು ಗುರುತಿಸಿದ್ದಾರೆ.

ಕರ್ನಾಟಕ ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಅದಿರಿನ ಗಣಿ ಕಾರ್ಯಾಚರಣೆ ಮಾಡುತ್ತಿದೆ. ಕಬ್ಬಿಣ ಅದಿರಿನ ಉತ್ಪಾದನೆಯಲ್ಲಿ ಕರ್ನಾಟಕಕ್ಕೆ ನಾಲ್ಕನೇ ಸ್ಥಾನವಿದೆ. ಕಬ್ಬಿಣ ಅದಿರಿನ ಪ್ರಧಾನ ಅದುರು ಮ್ಯಾಗ್ನೆಟೈಟ್. ೭೪.೪೦% ಕಬ್ಬಿಣದ ಅಂಶ. ಹೀಮಟೈಟ್ ೭೦.೦೦% ಕಬ್ಬಿಣದ ಅಂಶ. ಬಳ್ಳಾರಿ, ಬಿಜಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ತುಮಕೂರು, ಉತ್ತರ ಕನ್ನಡ ಜಿಲ್ಲೆಗಳು ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಅದಿರಿನ ಕೈಗಾರಿಕೆ ಮಾಡುತ್ತಿವೆ. ಈ ಪೈಕಿ ವ್ಯಾಪಕ ಗಣಿಗಾರಿಕೆ ನಡೆದಿರುವುದು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿ, ಕೆಮ್ಮಣ್ಣುಗುಂಡಿ ಮತ್ತು ಕುದುರೆಮುಖದಲ್ಲಿ. ಹಾಗೆಯೇ ಬಳ್ಳಾರಿ ಜಿಲ್ಲೆಯ ದೋಣಿಮಲೈ, ಕುಮಾರಸ್ವಾಮಿ, ಬೇಗಲ್ಲು, ತಿಮ್ಮಪ್ಪನಗುಡ್ಡ ಹಾಗೂ ರಾಮದುರ್ಗದಲ್ಲಿ, ಬಳ್ಳಾರಿ, ಹೊಸಪೇಟೆ, ಸಂಡೂರು ವಲಯದಲ್ಲಿ ಅತ್ಯುತ್ತಮ ದರ್ಜೆಯ ಅದುರು ಲಭ್ಯ. ಇಲ್ಲಿ ಹೀಮಟೈಟ್ ಅದುರು ಶೇ. ೬೭ರಿಂದ ೬೮ ಭಾಗ ಕಬ್ಬಿಣಾಂಶವನ್ನು ಹೊಂದಿದೆ.

ಬಳ್ಳಾರಿ ಜಿಲ್ಲೆಯಲ್ಲಿ, ವಿಶೇಷವಾಗಿ ದೋಣಿಮಲೈ ಗುಡ್ಡಸಾಲಿನಲ್ಲಿ ೧೫೫೧ ದಶಲಕ್ಷ ಟನ್, ರಾಮನಗುಡ್ಡ ಸಾಲಿನಲ್ಲಿ ೨೧೨ ದಶಲಕ್ಷ ಟನ್, ಕುಮಾರಸ್ವಾಮಿ ಗುಡ್ಡದಲ್ಲಿ ೧೮೨ ದಶಲಕ್ಷ ಟನ್ ಕಬ್ಬಿಣದ ಅದಿರಿನ ನಿಕ್ಷೇಪವಿದೆಯೆಂದು ಅಂದಾಜು ಮಾಡಲಾಗಿದೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್

| ಕ್ರಮ ಸಂಖ್ಯೆ | ಖನಿಜ | ಪ್ರಮಾಣ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|---|---|---|
| | ೧. ಲೋಹೀಯ ಅ. ಕಬ್ಬಿಣ ಸಂಬಂಧಿ | | | | | | |
| ೧ | ಕ್ರೊಮೈಟ್ | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | ೧೫ | ೧೮ | ೧೯ | ೨೭ | ೨೭ |
| ೨ | ಕಬ್ಬಿಣದ ಅದಿರು | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | ೧೮,೯೦೨ | ೨೨,೫೯೫ | ೨೪,೦೪೪ | ೩೪,೧೦೭ | ೩೯೬೯೩ |
| ೩ | ಮ್ಯಾಂಗನೀಸ್ ಅದಿರು | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | ೧೮,೯೦೨ | ೨೨,೫೯೫ | ೨೪,೦೪೪ | ೩೪,೧೦೭ | ೩೯೬೯೩ |
| | ಆ. ಕಬ್ಬಿಣೇತರ | | | | | | |
| ೪ | ಬಾಕ್ಸೈಟ್ | ಸಾವಿರ ಮೆಟ್ರಿಕ್ ಟನ್ನುಗಳಲ್ಲಿ | ೫೦ | ೫೨ | ೩೦ | ೫೮ | ೬೮ |
| ೫ | ತಾಮ್ರ | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | – | – | – | – | – |
| ೬ | ಚಿನ್ನ | ಸಾವಿರ ಮೆಟ್ರಿಕ್ ಟನ್ನುಗಳಲ್ಲಿ | ೨,೧೪೦ | ೨,೪೭೫ | ೨,೭೦೫ | ೦ | ೩,೩೯೦ |
| ೭ | ಬೆಳ್ಳಿ | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | ೨೧೯ | ೨೭೫ | ೨೭೦ | ೩೩೭ | ೩೩೯ |
| | ೨. ಲೋಹೇತರ | | | | | | |
| ೮ | ಕಲ್ನಾರು | ಟನ್ನುಗಳಲ್ಲಿ | – | – | – | – | – |
| ೯ | ಜೇಡಿ(ಮತ್ತು ಇತರ) | ಟನ್ನುಗಳಲ್ಲಿ | – | – | – | – | – |
| ೧೦ | ಕುರಂದ | ಟನ್ನುಗಳಲ್ಲಿ – | – | – | – | – | |
| ೧೧ | ಕಾವುಜೇಡಿ | ಟನ್ನುಗಳಲ್ಲಿ | ೩.೩೪೬ | ೧೫,೩೬೦ | ೧೧,೨೯೬ | ೦ | ೦ |
| ೧೨ | ಸುದ್ದೆಮಣ್ಣು | ಟನ್ನುಗಳಲ್ಲಿ | ೧೧,೮೭೭ | ೧೫,೭೮೧ | ೧೪,೯೭೮ | ೫,೮೨೭ | ೦ |
| ೧೩ | ಕೈನೈಟ್ | ಟನ್ನುಗಳಲ್ಲಿ | ೩೫೫ | ೨೩೦ | ೨೯೭ | ೩೦೧ | ೬೩೫ |
| ೧೪ | ಮ್ಯಾಗ್ನಸೈಟ್ | ಟನ್ನುಗಳಲ್ಲಿ | ೨೫,೫೩೬ | ೨೧,೨೧೪ | ೧೭,೧೭೯ | ೧೯.೬೯೩ | ೨.೬೫೩ |
| ೧೫ | ಓಕರ್ | ಟನ್ನುಗಳಲ್ಲಿ | ೨೫,೭೭೬ | ೨೫,೦೪೭ | ೩೪,೩೪೯ | ೧,೦೮೦ | ೨,೦೫೮ |
| ೧೬ | ಬೆಣಚು | ಟನ್ನುಗಳಲ್ಲಿ | ೧೦,೨೬೦ | ೬,೮೪೯ | ೨,೯೭೩ | ೬೨,೫೦೦ | ೬೭,೩೬೩ |
| ೧೭ | ಬಳಪದಕಲ್ಲು | ಟನ್ನುಗಳಲಿ | ೦ | ೦ | ೧,೮೯೨ | ೬,೭೧,೪೩೬ | ೦ |
| | ೩. ಕಟ್ಟಡ ವಸ್ತುಗಳು | | | | | | |
| ೧೮ | ಡಾಲಮೈಟ್ | ಟನ್ನುಗಳಲ್ಲಿ | ೯೨.೭೮೦ | ೧,೨೩,೦೨೫ | ೧,೬೬.೯೬೭ | ೨,೬೨,೦೫೧ | ೪,೩೩,೨೯೮ |
| ೧೯ | ಚಿಪ್ಪು ಸುಣ್ಣ | ಟನ್ನುಗಳಲ್ಲಿ | ೫೩,೩೨೦ | ೮೯,೨೨೪ | ೮೭,೭೧೨ | ೯೨,೮೫೬ | ೧,೦೧,೧೦೬ |
| ೨೦ | ಸುಣ್ಣಶಿಲೆ | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | ೯,೮೩೯ | ೧೦,೪೮೧ | ೧೨,೧೮೧ | ೧,೩೫೯ | ೯,೨೧೫ |
| ೨೧ | ಎರಕದ ಮರಳು | ಸಾವಿರ ಮೆಟ್ರಿಕ್‌ಟನ್ನುಗಳಲ್ಲಿ | – | – | – | – | – |

ಶ್ರೇಣಿಯಲ್ಲಿ ೩,೦೦೦ ದಶಲಕ್ಷ ಟನ್, ಕುದುರೆಮುಖದಲ್ಲಿ ೬೦೦ ದಶಲಕ್ಷ ಟನ್ ಕಬ್ಬಿಣದ ಅದಿರಿದೆಯೆಂದು ಅಂದಾಜು. ಪಶ್ಚಿಮಘಟ್ಟದ ಪರಿಸರಕ್ಕೆ ಅದರಿಂದ ಹಾನಿ ಎಂಬ ಕಾರಣಕ್ಕಾಗಿ ಸುಪ್ರೀಂ ಕೋರ್ಟ್ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕದ ಪ್ರಮುಖ ನಿಕ್ಷೇಪಗಳ ಪೈಕಿ ಮ್ಯಾಂಗನೀಸ್ ನಿಕ್ಷೇಪಗಳೂ ಸೇರಿವೆ. ಇವು ಬಹುತೇಕ ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಚಿಕೆಯಾಗಿವೆ. ಭಾರತದ ಗಣಿಗಳ ಬ್ಯೂರೋ ಮಾಡಿರುವ ಅಂದಾಜಿನಂತೆ ಕರ್ನಾಟಕ ರಾಜ್ಯದಲ್ಲಿ ವಿವಿಧ ದರ್ಜೆಯ ಸುಮಾರು ೬೪,೫೪೭,೦೦೦ ಟನ್ ಮ್ಯಾಂಗನೀಸ್ ಅದಿರು ದೊರೆಯುತ್ತದೆ. ಸಂಡೂರಿನ ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರು ನಿಯಮಿತ ಕಂಪನಿ ೨,೩೦,೦೦೦ ಟನ್ ಮ್ಯಾಂಗನೀಸ್ ಅದಿರನ್ನು ಉತ್ಪಾದನೆ ಮಾಡುತ್ತಿದೆ. ಕರ್ನಾಟಕದ ಒಟ್ಟು ಮ್ಯಾಂಗನೀಸ್ ಉತ್ಪಾದನೆ ವಾರ್ಷಿಕ ೫,೬೪,೦೦೦ ಮೆಟ್ರಿಕ್ ಟನ್ನುಗಳು.

ಕ್ರೊಮೈಟ್ ಉತ್ಪಾದನೆಯಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನವಿದೆ. ಸದ್ಯದಲ್ಲಿ ಅತಿ ಹೆಚ್ಚಿನ ಕ್ರೊಮೈಟ್ ಅದಿರನ್ನು ಉತ್ಪಾದನೆ ಮಾಡುತ್ತಿರುವುದು ನುಗ್ಗೇಹಳ್ಳಿ ಶಿಸ್ಟ್ ಜಾಡಿನಲ್ಲಿರುವ ಭೈರಾಪುರ ಗಣಿಗಳಲ್ಲಿ. ವಾರ್ಷಿಕ ಸರಾಸರಿ ಕ್ರೊಮೈಟ್ ಅದಿರಿನ ಉತ್ಪಾದನೆ ೧೦,೦೦೦ ಟನ್ನುಗಳೆಂದು ಅಂದಾಜು.

ಹಿಂದೆ ಹಾಸನ ಜಿಲ್ಲೆಯ ಕಲ್ಯಾಡಿ, ಚಿತ್ರದುರ್ಗ ಜಿಲ್ಲೆಯ ಇಂಗಳದಾಳು ಮತ್ತು ಗುಲಬರ್ಗಾದ ತಿಂತಿಣಿಯಲ್ಲಿ ತಾಮ್ರದ ಉತ್ಪಾದನೆ ಮಾಡಲಾಗಿತ್ತಾದರೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಾಮ್ರ ಕೊಳ್ಳುವುದೇ ಇಲ್ಲಿನ ಗಣಿಗಾರಿಕೆಗಿಂತಲೂ ಕಡಿಮೆ ವೆಚ್ಚವಾಗುತ್ತದೆಂದು ಕಂಡುಬಂದ ಮೇಲೆ ಈ ಎಲ್ಲ ಗಣಿಗಳ ಕಾರ್ಯಾಚರಣೆಯೂ ನಿಂತಿದೆ.ಅಲ್ಯೂಮಿನಿಯಂ ಲೋಹದ ಮುಖ್ಯ ಅದುರಾದ ಬಾಕ್ಸೈಟ್ ಬೆಳಗಾವಿ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ದೊರೆಯುತ್ತದೆ. ಕರ್ನಾಟಕದಲ್ಲಿ ಒಟ್ಟು ೨೭ ದಶಲಕ್ಷ ಟನ್ ಬಾಕ್ಸೈಟ್ ನಿಕ್ಷೇಪವಿದೆಯೆಂದು ಅಂದಾಜು.

**ಅಲಂಕರಣ ಶಿಲೆಗಳ ಉದ್ಯಮ:** ಅಲಂಕರಣ ಶಿಲೆಗಳ ಉತ್ಪಾದನೆಯಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ಗ್ರಾನೈಟ್ ಉದ್ಯಮ ಲಾಭದಾಯಕವಾಗಿ ಪರಿಣಮಿಸಿದೆ. ವಿವಿಧ ಬಗೆಯ ಅಲಂಕರಣ ಶಿಲೆಗಳು ಅದರಲ್ಲೂ ಗ್ರಾನೈಟ್, ಗ್ಯಾಬ್ರೋ, ಡಾಲರೈಟ್, ನೈಸ್, ಚಾರ್ನೋಕೈಟ್ ಶಿಲೆಗಳು ಅಲಂಕರಣ ಶಿಲೆಗಳಾಗಿ ವಿದೇಶಗಳಲ್ಲೂ ಬೇಡಿಕೆ ಗಳಿಸಿವೆ. ರಾಜ್ಯದಲ್ಲಿ ಒಟ್ಟು ೪,೨೦೦ ಚ.ಕಿ.ಮೀ. ಪ್ರದೇಶದಲ್ಲಿ ಅಲಂಕರಣ ಶಿಲೆಗಳು ಲಭ್ಯವೆಂದು ಸಮೀಕ್ಷೆಗಳು ದೃಢಪಡಿಸಿವೆ. ವಿಶೇಷವಾಗಿ ಚಾಮರಾಜನಗರ, ಕೊಳ್ಳೆಗಾಲ, ಮಾಗಡಿ, ರಾಮನಗರ, ಕನಕಪುರ, ಶಿರಾ, ಚಿಂತಾಮಣಿ ಅತ್ಯುತ್ತಮ ದರ್ಜೆಯ ಅಲಂಕರಣ ಶಿಲೆಗಳನ್ನು ಉತ್ಪಾದಿಸುತ್ತಿದೆ. ಇಳಕಲ್ಲು ಪಿಂಕ್ ಗ್ರಾನೈಟ್ ಎಂಬುದು ವಿಶ್ವವಿಖ್ಯಾತ. ಒಟ್ಟಾರೆ ರಾಜ್ಯದಲ್ಲಿ ಅಲಂಕರಣ ದರ್ಜೆಯ ಗ್ರಾನೈಟ್ ಉತ್ಪಾದನೆ ೯೫,೭೧,೬೯೩ ಸಾವಿರ ಘನ ಮೀಟರ್‌ಗಳೆಂದು ಅಂದಾಜು.

## ಕರ್ನಾಟಕದ ಖನಿಜೋತ್ಪಾದನೆ

ಕರ್ನಾಟಕದ ಭೂಚರಿತ್ರೆಯ ಶೇ. ೬೦ ಭಾಗ ಆರ್ಷೇಯ ಕಲ್ಪದ ಶಿಲೆಗಳನ್ನು ಪ್ರತಿನಿಧಿಸುತ್ತವೆ. ಪ್ರಧಾನವಾಗಿ ನೈಸ್, ಗ್ರಾನೈಟ್ ಮತ್ತು ಚಾರ್ನೋಕೈಟ್ ಶಿಲೆಗಳು. ದಖನ್ ಟ್ರಾಪ್ ಶಿಲೆಗಳ ಮೇಲೆ ಟೋಪಿಯಂತೆ ಕುಳಿತಿರುವ ಲ್ಯಾಟರೈಟ್ ಶಿಲೆಗಳು ತೃತೀಯ ಜೀವಿ ಕಲ್ಪದ ಆರಂಭದಲ್ಲಿ ಜ್ವಾಲಾಮುಖಿ ಚಟುವಟಿಕೆ ನಿಂತಮೇಲೆ ಮೈದಳೆದಿವೆ. ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಲ್ಯಾಟರೈಟ್ ಟೊಪ್ಪಿಗೆಯನ್ನು ಕಾಣಬಹುದು. ಹಾಗೆಯೇ ಕರ್ನಾಟಕದಲ್ಲಿ ಹನ್ನೊಂದು ಬಗೆಯ ಮಣ್ಣನ್ನು ಗುರುತಿಸಲಾಗಿದೆ.

**ಮಣ್ಣು:** ರಾಜ್ಯದ ಮಣ್ಣಿನ ವರ್ಗೀಕರಣ ಹೀಗಿದೆ. **ಎಂಟಿಸಾಲ್ಸ್:** ಮಣ್ಣಿನ ಕ್ಷಿತಿಜ(ಹೊರೈಜನ್) ಹೆಚ್ಚು ಅಭಿವೃದ್ಧಿಯಾಗಿರುವುದಿಲ್ಲ. ಹೊಸತಾಗಿ ಉಂಟಾದ ನೆರೆ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಈ ಬಗೆಯ ಮಣ್ಣು ಕಂಡುಬರುತ್ತದೆ. ಗಾಳಿಯಿಂದ ತೂರಿಬಂದ ಮರಳಿನಡಿಯಲ್ಲಿ ಮೈದಳೆದಿರುತ್ತದೆ; **ಇನ್‌ಸೆಪ್ಟಿಸಾಲ್:** ಇನ್ನೂ ಅಭಿವೃದ್ಧಿಯ ಹಂತದಲ್ಲಿರುವ ಮಣ್ಣು; **ಮೋಲಿಸಾಲ್ಸ್:** ಹುಲ್ಲುಗಾವಲು ಮಣ್ಣು. ಜೈವಿಕ ಪದಾರ್ಥದಿಂದ ಕೂಡಿದ ಗಾಢವರ್ಣದ ಮಣ್ಣು; **ಸ್ಪೋಡೋಸಾಲ್ಸ್:** ಮರಳುಮಣ್ಣು. ಅರಣ್ಯ ಪ್ರದೇಶದಲ್ಲಿ ಹೆಚ್ಚು ಕಂಡುಬರುತ್ತದೆ. ಇದರ ಬಿ ಪದರದಲ್ಲಿ ಜೈವಿಕ ಪದಾರ್ಥ, ಕಬ್ಬಿಣ ಮತ್ತು ಅಲ್ಯುಮಿನಿಯಂ ಆಕ್ಸೈಡ್ ಹೆಚ್ಚು ಕಂಡುಬರುತ್ತವೆ; **ಆಲ್ಫಿಸಾಲ್ಸ್:** ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಅಭಿವೃದ್ಧಿಯಾಗಿರುತ್ತದೆ. ಇದರ ಬಿ ಸ್ತರದಲ್ಲಿ ಹೆಚ್ಚು ಜೇಡಿ ಬೆರೆತಿರುತ್ತದೆ; ಅಲ್ಟಿಸಾಲ್ಸ್:ಆಮ್ಲೀಯ ಗುಣದ ಮಣ್ಣು. ಹೆಚ್ಚು ಶಿಥಿಲಗೊಂಡಿರುತ್ತದೆ; **ಆಕ್ಸಿಸಾಲ್ಸ್:** ಫಲವತ್ತಾದ ಆಮ್ಲೀಯ ಮಣ್ಣು. ಕಬ್ಬಿಣ, ಅಲ್ಯುಮಿನಿಯಂ **ಆಕ್ಸೈಡ್‌ಗಳಿಂದ ಸಮೃದ್ಧವಾದ, ಹೆಚ್ಚು ಶಿಥಿಲಗೊಂಡ ಮಣ್ಣು; ಎರಿಡಿಸಾಲ್ಸ್:** ಮರುಭೂಮಿಯ ಮಣ್ಣು. ಹೆಚ್ಚು ಕ್ಯಾಲ್ಸಿಯಂ ಮತ್ತು ಕಡಿಮೆ ಜೈವಿಕ ಪದಾರ್ಥಗಳು ಇದರ ಪ್ರಧಾನ ಲಕ್ಷಣ; **ವರ್ಟಿಸಾಲ್ಸ್:** ಜೇಡಿಮಣ್ಣು. ಶುದ್ಧವಿದ್ದಾಗ ಹೆಚ್ಚು ಬಿರಿಯುತ್ತದೆ. ತೇವಾಂಶದಿಂದ ಕೂಡಿದ ಹಾಗೂ ಶುಷ್ಕ ವಾತಾವರಣದಲ್ಲಿ ಅಭಿವೃದ್ಧಿಯಾಗುತ್ತದೆ; **ಆಂಡಿಸಾಲ್ಸ್:** ಜ್ವಾಲಾಮುಖಿಯ ಮಣ್ಣು. ಆಳ ಭಾಗದಲ್ಲಿ ಮೈದಳೆದಿರುತ್ತದೆ. ಕಬ್ಬಿಣ ಮತ್ತು ಅಲ್ಯುಮಿನಿಯಂ ಹೆಚ್ಚಿನ ಪ್ರಮಾಣದಲ್ಲಿರುತ್ತದೆ; **ಹಿಸ್ಟೊಸಾಲ್ಸ್:** ಜೈವಿಕ ಪದಾರ್ಥದಿಂದಾದ ಮಣ್ಣು. ಜೌಗು ಮತ್ತು ತರಿ ಭೂಮಿಗಳಲ್ಲಿ ಹೆಚ್ಚು ಕಂಡುಬರುತ್ತವೆ. ಮಣ್ಣು ಯಾವ ಬಗೆಯ ಕೃಷಿಗೆ ಯೋಗ್ಯ ಎಂಬುದನ್ನಾಧರಿಸಿ ಆರು ವಿಧವಾಗಿ ವರ್ಗೀಕರಿಸಿದೆ: **ಕೆಂಪುಮಣ್ಣು, ಲ್ಯಾಟರೈಟ್ ಮಣ್ಣು, ಮೆಕ್ಕಲು ಮಣ್ಣು, ಇಳಿಜಾರು ಮಣ್ಣು, ಅರಣ್ಯದ ಮಣ್ಣು ಮತ್ತು ತೀರ ಪ್ರದೇಶದ ಮಣ್ಣು.**

## ಜಲಸಂಪನ್ಮೂಲಗಳು

ಭಾರತದ ಮೇಲ್ಮೈ ಜಲಸಂಪನ್ಮೂಲದ ಪ್ರಮಾಣ ೧.೭ ಲಕ್ಷ ಮಿಲಿಯನ್ ಘನ ಮೀಟರು. ಇದರಲ್ಲಿ ಕರ್ನಾಟಕದ ಪಾಲು ಶೇ. ಸುಮಾರು ೬ ಭಾಗದಷ್ಟು. ಇದರಲ್ಲಿ ಶೇ. ೪೦ ಭಾಗ ಪೂರ್ವವಾಹಿ ನದಿಗಳಿಂದಲೂ, ಉಳಿದ ಭಾಗ ಪಶ್ಚಿಮವಾಹಿ ನದಿಗಳಿಂದಲೂ ಲಭ್ಯ. ರಾಜ್ಯದಲ್ಲಿ ಏಳು ಪ್ರಮುಖ ನದಿಗಳು ಮತ್ತು ಅವುಗಳ ಉಪನದಿಗಳು ನೀರು ಹರಿಸುತ್ತವೆ. ಅವುಗಳೆಂದರೆ :

| ನದಿ ವ್ಯವಸ್ಥೆ | | ರಾಜ್ಯದಲ್ಲಿನ ಜಲಾನಯನ ಪ್ರದೇಶ | | ಸರಾಸರಿ ಹರಿಯುವ ನೀರಿನ ಪ್ರಮಾಣದ ಅಂದಾಜು | | |
|---|---|---|---|---|---|---|
| ಸಂಖ್ಯೆ | ನದಿ | ಸಾವಿರ ಚ.ಕಿ.ಮೀ. | ಶೇಕಡಾ | ಮಿಲಿಯನ್ ಘನಮೀಟರು | ಟಿ.ಎಂ.ಸಿ.(ದಶ ಲಕ್ಷ ಘನ ಮೀ.) | ಶೇಕಡಾ |
| ೧ | ಕೃಷ್ಣಾ | ೧೧೩.೨೯ | ೫೯.೪೮ | ೨೭,೪೫೧ | ೯೬೯.೪೪ | ೨೮.೨೦ |
| ೨ | ಕಾವೇರಿ | ೩೪.೨೭ | ೧೭.೯೯ | ೧೦,೯೮೦ | ೩೮೭.೭೬ | ೧೧.೨೮ |
| ೩ | ಗೋದಾವರಿ | ೪.೪೧ | ೨.೩೧ | ೧,೪೧೫ | ೪೯.೯೭ | ೧.೪೫ |
| ೪ | ಪಶ್ಚಿಮವಾಹಿ ನದಿಗಳು | ೨೪.೨೫ | ೧೨.೬೩ | ೫೬,೬೦೦ | ೧,೯೯೮.೮೩ | ೫೮.೧೪ |
| ೫ | ಉತ್ತರ ಪೆನ್ನಾರ್ | ೬.೯೪ | ೩.೬೪ | | | |
| ೬ | ದಕ್ಷಿಣ ಪೆನ್ನಾರ್ | ೪.೩೭ | ೨.೨೯ | ೯೦೬ | ೩೨ | ೦.೯೩ |
| ೭ | ಪಾಲಾರ್ | ೨.೯೭ | ೧.೫೬ | | | |
| | | ೧೯೦.೫೦ | ೧೦೦ | ೯೭,೩೫೨ | ೩,೪೩೮.೦೦ | ೧೦೦ |

**ಕೃಷ್ಣಾನದಿ ಕೊಳ್ಳ:** ಕೃಷ್ಣಾನದಿಯ ಜಲಾನಯನವು ಮಹಾರಾಷ್ಟ್ರ(೬೯,೪೨೪ ಚ.ಕಿ.ಮೀ), ಕರ್ನಾಟಕ(೧,೧೩,೨೭೧ ಚ.ಕಿ.ಮೀ) ಮತ್ತು ಆಂಧ್ರಪ್ರದೇಶ(೭೬,೨೫೨ಚ.ಕಿ.ಮೀ) ರಾಜ್ಯಗಳಲ್ಲಿ ವ್ಯಾಪಿಸಿದ್ದು ಒಟ್ಟು ಜಲಾನಯನದ(೨,೫೮,೯೪೮ ಚ.ಕಿ.ಮೀ) ಶೇ. ೪೩.೭೪ ಭಾಗ ನಮ್ಮ ರಾಜ್ಯದಲ್ಲಿದೆ. ಹಾಗೆಯೇ ಕರ್ನಾಟಕದಲ್ಲಿ ಈ ನದಿ ಪಾತ್ರದ ಉದ್ದ ೪೮೩ ಕಿಲೋ ಮೀಟರು. ಕೃಷ್ಣಾ ನದಿಯ ಉಪನದಿಗಳ ಪೈಕಿ ಪ್ರಮುಖವಾದ ತುಂಗಭದ್ರಾ ನದಿಯ ಜಲಾನಯನ ಪ್ರದೇಶವೇ ಅತಿ ದೊಡ್ಡದು. ಇದರ ವಿಸ್ತೀರ್ಣ ೬೬,೨೩೭ ಚ.ಕಿ.ಮೀ. ಭೀಮಾ, ಕೊಯ್ನಾ, ಪಂಚಗಂಗಾ, ದೂದ್‌ಗಂಗಾ, ತುಂಗಭದ್ರಾ, ಹಿರಣ್ಯಕೇಶಿ, ಘಟಪ್ರಭಾ ಮತ್ತು ಮಲಪ್ರಭಾ ಇವು ಕೃಷ್ಣಾ ನದಿಯ ಪ್ರಮುಖ ಉಪ ನದಿಗಳು. ಈ ಕೊಳ್ಳ ಒಟ್ಟು ೧೮ ಜಿಲ್ಲೆಗಳನ್ನು ಆವರಿಸಿದೆ. ಅಂತೆಯೇ ರಾಜ್ಯದ ಶೇ. ೬೦ ಭಾಗ ಭೌಗೋಳಿಕ ಪ್ರದೇಶವನ್ನು ಒಳಗೊಳ್ಳುತ್ತದೆ.

**ಕೃಷ್ಣಾನದಿ:** ಕೃಷ್ಣಾನದಿಯು ಅಂತರರಾಜ್ಯ ನದಿಯಾಗಿದ್ದು ಭಾರತದ ದಕ್ಷಿಣ ಪ್ರಸ್ಥಭೂಮಿಯಲ್ಲಿ ಹರಿಯುವ ಎರಡನೇ ದೊಡ್ಡ ನದಿಯಾಗಿದೆ. ಪಶ್ಚಿಮಘಟ್ಟದಲ್ಲಿ, ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ೧,೩೩೭ ಮೀಟರ್ ಎತ್ತರದಲ್ಲಿ ಹುಟ್ಟಿ ಪಶ್ಚಿಮದಿಂದ ಪೂರ್ವಕ್ಕೆ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಸುಮಾರು ೧,೪೦೦ ಕಿಲೋ ಮೀಟರ್‌ಗಳಷ್ಟು ದೂರ ಹರಿಯುತ್ತದೆ. ಕೃಷ್ಣಾನದಿಯ ಜಲಾನಯನ ಪ್ರದೇಶ ಸುಮಾರು ೨.೫೯ ಲಕ್ಷ ಚದರ ಕಿಲೋ ಮೀಟರು. ನದೀಕ್ಷೇತ್ರದ ಶೇಕಡ ೪೩.೭೪ ಭಾಗ ಕರ್ನಾಟಕದಲ್ಲಿದೆ. ಶೇಕಡ ೨೯.೪೫ ಭಾಗ ಆಂಧ್ರಕ್ಕೂ ಮತ್ತು ಶೇಕಡ ೨೬.೮೧ ಭಾಗ ಮಹಾರಾಷ್ಟ್ರಕ್ಕೂ ಸೇರಿದೆ. ರಾಜ್ಯದಲ್ಲಿ ಅದರ ಉಪನದಿಗಳು ಸೇರಿದರೆ ಸುಮಾರು ೬೦೪ ಕಿಲೋ ಮೀಟರು ದೂರ ಹರಿಯುತ್ತದೆ. ಕೃಷ್ಣಾ ನದಿಯೊಂದೇ ಕರ್ನಾಟಕದಲ್ಲಿ ೪೮೩ ಕಿಲೋ ಮೀಟರು ಉದ್ದವಿದೆ. ಇದರ ಮುಖ್ಯ ಉಪನದಿಗಳು ಭೀಮಾ, ಕೊಯ್ನಾ, ಪಂಚಗಂಗಾ, ಧೂದ್‌ಗಂಗಾ, ತುಂಗಭದ್ರಾ, ಹಿರಣ್ಯಕೇಶಿ, ಘಟಪ್ರಭಾ ಮತ್ತು ಮಲಪ್ರಭಾ. ಕೊಯ್ನಾ ಮತ್ತು ಪಂಚಗಂಗಾಗಳನ್ನು ಬಿಟ್ಟು (ಇದು ಕೂಡ ೩ ಕಿ.ಮೀ. ಉದ್ದ ಮಾತ್ರ ನಮ್ಮ ರಾಜ್ಯದ ಗಡಿಯಲ್ಲಿ ಹರಿಯುತ್ತದೆ), ಮಿಕ್ಕೆಲ್ಲಾ ಉಪನದಿಗಳು ಕರ್ನಾಟಕ ರಾಜ್ಯದ ಮೂಲಕವೇ ಹರಿಯುತ್ತವೆ. ೪೭,೮೬೬ ಚ.ಕಿ.ಮೀ.ನಷ್ಟು ವಿಸ್ತೀರ್ಣದ ಅತಿದೊಡ್ಡ ಹರಿವಿನ ಪ್ರದೇಶವನ್ನು ಹೊಂದಿರುವ ತುಂಗಭದ್ರಾ ನದಿಯು ಕೃಷ್ಣೆಯ ಅತಿ ಮುಖ್ಯ ಉಪನದಿಯಾಗಿದೆ. ಸಾಂಪ್ರದಾಯಿಕವಾಗಿ ಕೃಷ್ಣಾ ನದಿಯ ಉಗಮ ಸ್ಥಾನವಾದ ನೀರು ಬುಗ್ಗೆ ಮಹಾಬಲೇಶ್ವರದ ಕಡಿದಾದ ಬೆಟ್ಟದ ತಪ್ಪಲಿನಲ್ಲಿರುವ ಪುರಾತನ ಮಹಾದೇವ ದೇವಾಲಯದಲ್ಲಿ ಹಸುವಿನ ಬಾಯಿಯಂತಿರುವ ವಿಗ್ರಹದ ಭಾಗದಿಂದ ಧಾರೆಯಾಗಿ ಹರಿಯುತ್ತದೆ. ಕೃಷ್ಣಾ ನದಿಯನ್ನು, ವಿಷ್ಣು ತನ್ನ ಶರೀರದಿಂದ ಸೃಷ್ಟಿಸಿ ಅದ್ಭುತ ಶಕ್ತಿಯನ್ನು ಅದರಲ್ಲಿ ಕ್ರೋಢಿಕರಿಸಿದ ಕಾರಣ ಈ ನದಿಗೆ ವಿಷ್ಣುವಿನ ಅವತಾರವಾದ ಕೃಷ್ಣಾ ಎಂದು ಹೆಸರು ಬಂದಿತು ಎಂದು ಪುರಾಣ ಕಥೆ ಇದೆ.

ಕೃಷ್ಣಾ ನದಿಯು ಉಗಮದಿಂದ ೧೩೬ ಕಿ.ಮೀ. ದೂರದಲ್ಲಿ ಮಹಾಬಲೇಶ್ವರ ಬೆಟ್ಟಗಳ ಪಶ್ಚಿಮದ ಪಕ್ಕದಿಂದ ಕೊಯ್ನಾ ನದಿಯ ನೀರನ್ನು ಪಡೆಯುತ್ತದೆ. ಇನ್ನೂ ಕೆಳಭಾಗದಲ್ಲಿ ಎಡದಂಡೆಯಲ್ಲಿ ಕೃಷ್ಣಾ ನದಿಗೆ ಯೆರ್ಲಾ ಸಂಗಮವಾಗುತ್ತದೆ, ಮುಂದೆ ವೆರ್ಣಾ, ಪಂಚಗಂಗಾ ಮತ್ತು ಧೂದ್ ಗಂಗಾ ನದಿಗಳು ಬಲದಂಡೆಯಿಂದ ಬಂದು ಸೇರುತ್ತವೆ. ಕೊನೆಯ ಮೂರು ನದಿಗಳಿಂದ ಪಶ್ಚಿಮ ಘಟ್ಟಗಳಲ್ಲಿ ಸುಮಾರು ೧೪೪ ಕಿ.ಮೀ. ಉದ್ದದ ಪ್ರದೇಶ ನೀರುಣ್ಣುತ್ತದೆ. ತನ್ನ ಉಗಮದಿಂದ ೨೯ ಕಿ.ಮೀ. ದೂರದಲ್ಲಿ ಧೂದ್ ಗಂಗಾ ಸಂಗಮದಲ್ಲಿ, ಕೃಷ್ಣಾ ಕರ್ನಾಟಕವನ್ನು ಪ್ರವೇಶಿಸುತ್ತದೆ. ಈ ಭಾಗದಲ್ಲಿ ನದಿಯು ಸುಮಾರು ೫೩೩ ಮೀ.ನಷ್ಟು ಕೆಳಗಿಳಿದು ಬಂದಿದ್ದು ಹೆಚ್ಚಿಗೆ ಮಳೆಬೀಳುವ ಪಶ್ಚಿಮ ಘಟ್ಟಗಳ ಪ್ರದೇಶದಿಂದ ಹೊರಬರುತ್ತದೆ. ಕರ್ನಾಟಕವನ್ನು ಪ್ರವೇಶಿಸಿದ ಮೇಲೆ ಕೃಷ್ಣಾ ನದಿಗೆ ಬಲ ದಂಡೆಯಿಂದ

# ನದಿ ಹರಿವು ಹಾಗೂ ನದಿ ಪಾತ್ರಗಳು



ಘಟಪ್ರಭಾ ಬಂದು ಸೇರುವವರೆಗೂ ಸುಮಾರು ೨೦೦ಕಿ.ಮೀ. ವರೆಗೂ ಹೇಳಿಕೊಳ್ಳುವಂಥ ಯಾವ ನದಿಯ ನೀರು ಸೇರುವುದಿಲ್ಲ; ಮತ್ತೆ ೩೫ ಕಿ.ಮೀ. ಕೆಳಗೆ ಮಲಪ್ರಭಾ ಸೇರುತ್ತದೆ. ಈ ಎರಡು ನದಿಗಳೂ ಪಶ್ಚಿಮ ಘಟ್ಟಗಳಲ್ಲಿ ಜನಿಸುತ್ತವೆ. ಮಲಪ್ರಭಾ ಸಂಗಮದ ಮುಂದೆ ಸ್ವಲ್ಪ ದೂರದಲ್ಲಿ ಕೃಷ್ಣಾ ನದಿಯು ದಖ್ಖಣದ ಪ್ರಸ್ಥಭೂಮಿಯ ಉನ್ನತ ಪ್ರದೇಶದಿಂದ ೧೨೨ ಮೀಟರ್‌ನಷ್ಟು ಕೆಳಕ್ಕಿಳಿದು ರಾಯಚೂರಿನ ಮೆಕ್ಕಲು ಮಣ್ಣಿನ ನಾಡಿನಲ್ಲಿ ಹರಿಯುತ್ತದೆ. ಈ ಜಾಗದಲ್ಲಿರುವ ಛಾಯಾ ಭಗವತಿ ಜಲಪಾತ ಒಂದು ಮನೋಹರ ದೃಶ್ಯ. ಕೃಷ್ಣಾ ನದಿಯು ಸುಮಾರು ೩೪೩ ಮೀಟರ್ ಎತ್ತರದಲ್ಲಿ ಆಂಧ್ರಪ್ರದೇಶವನ್ನು ಸೇರುವ ಮೊದಲು, ಇದರ ಉಗಮ ಸ್ಥಾನದಿಂದ ೭೮೨ ಕಿ.ಮೀ.ದೂರದಲ್ಲಿ ತನ್ನ ಎಡದಂಡೆಯಲ್ಲಿ ಭೀಮಾ ನದಿಯನ್ನು ಸೇರಿಸಿಕೊಳ್ಳುತ್ತದೆ. ಅಹ್ಮದ್‌ನಗರ, ಪುಣೆ, ಸೊಲ್ಲಾಪುರ ಮತ್ತು ಗುಲಬರ್ಗಾ ಜಿಲ್ಲೆಗಳ ಜಲಾನಯನ ಪ್ರದೇಶದ ನೀರನ್ನು ಒಳಗೊಂಡು ಭೀಮಾ ಬರುತ್ತದೆ. ಸುಮಾರು ೧೨೮ ಕಿ.ಮೀ. ಮುಂದೆ, ಕರ್ನೂಲ್ ಹತ್ತಿರ, ತುಂಗಭದ್ರಾ ಕೃಷ್ಣಾ ನದಿಯನ್ನು ಸೇರುತ್ತದೆ. ಭೀಮಾ ಮತ್ತು ತುಂಗಭದ್ರಾ ನದಿಗಳೆರಡೂ ತಮ್ಮದೇ ಆದ ವಿಶಾಲ ಕಣಿವೆಯನ್ನು ಪಶ್ಚಿಮ ಘಟ್ಟಗಳಲ್ಲಿ ಹೊಂದಿದ್ದು ಇವೆರಡೂ ಸ್ವತಂತ್ರ ನದಿಗಳೇ ಆಗಿವೆ.

**ಘಟಪ್ರಭಾ ನದಿ:** ಘಟಪ್ರಭಾ ನದಿಯು ಪಶ್ಚಿಮಘಟ್ಟದಲ್ಲಿ ೮೮೪ ಮೀಟರ್ ಎತ್ತರದಲ್ಲಿ ಹುಟ್ಟಿ ಕೃಷ್ಣಾ ನದಿಯನ್ನು ಕೂಡುವ ಮೊದಲು ೨೮೩ ಕಿಲೋ ಮೀಟರು ಪೂರ್ವ ದಿಕ್ಕಿನಲ್ಲಿ ಹರಿಯುತ್ತದೆ. ಈ ನದಿಯು ಮಹಾರಾಷ್ಟ್ರದ ರತ್ನಗಿರಿ ಮತ್ತು ಕೊಲ್ಲಾಪುರ ಜಿಲ್ಲೆಗಳಲ್ಲಿ ಸುಮಾರು ೫೯ ಕಿ.ಮೀ. ಹರಿದು ಅನಂತರ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯನ್ನು ಸೇರುತ್ತದೆ. ಇದರ ಉಪನದಿಗಳಾದ ಹಿರಣ್ಯಕೇಶಿ ಮತ್ತು ಮಾರ್ಕಂಡೇಯಗಳೂ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಮೂಲಕ ಹರಿಯುತ್ತವೆ. ಇದು ಗಿರಿ ಕಂದರಗಳಿಂದ ಹೊರಗೆ ಬರುತ್ತ ಬೆಳಗಾವಿ ಜಿಲ್ಲೆಯ ಸುಂದರ ತಾಣವಾದ ಗೋಕಾಕ ಜಲಪಾತದಲ್ಲಿ ೫೩ ಮೀಟರ್ ಎತ್ತರದಿಂದ (ಗೋಕಾಕ್ ನಿಂದ ೧೦ ಕಿ.ಮೀ. ದೂರ) ಧುಮುಕುತ್ತದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದಲ್ಲಿರುವ ಈ ನದಿಯ ಮತ್ತು ಅದರ ಉಪನದಿಗಳ ಒಟ್ಟು ಜಲಾನಯನ ಪ್ರದೇಶ ೮,೮೨೯ ಚ.ಕಿ.ಮೀ. ಆದರೆ ಅವುಗಳ ಪ್ರಧಾನ ಜಲಮೂಲವು ೬೪ ಕಿ.ಮೀ. ಉದ್ದದ ಪಶ್ಚಿಮ ಘಟ್ಟಗಳಲ್ಲಿನ ಪ್ರದೇಶ.

**ಮಲಪ್ರಭಾ ನದಿ:** ಮಲಪ್ರಭಾ ನದಿಯು ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿರುವ ಜಾಂಬೋಟ ಎಂಬಲ್ಲಿಂದ ೧೬ಕಿ.ಮೀ ಪಶ್ಚಿಮದಲ್ಲಿರುವ ಪಶ್ಚಿಮ ಘಟ್ಟಗಳಲ್ಲಿ ೭೯೨.೪೮ ಮೀಟರ್ ಎತ್ತರದಲ್ಲಿ ಜನ್ಮತಾಳುತ್ತದೆ. ಈ ನದಿ ಮೊದಲು ಪೂರ್ವದಿಕ್ಕಿಗೆ ಹರಿದು ಮತ್ತೆ ಈಶಾನ್ಯದ ಕಡೆಗೆ ಗಮಿಸಿ, ಸುಮಾರು ೪೮೮ ಮೀ. ಎತ್ತರದ ಪ್ರದೇಶವಾದ ಕೂಡಲ ಸಂಗಮದ ಬಳಿ, ಅದರ ಉಗಮ ಸ್ಥಾನದಿಂದ ೩೦೬ ಕಿ.ಮೀ. ದೂರದಲ್ಲಿ ಕೃಷ್ಣಾ ನದಿಯನ್ನು ಸಂಧಿಸುತ್ತದೆ. ಇದು ಸವದತ್ತಿಯ ಬಳಿ ನವಿಲು ತೀರ್ಥ ಎಂದು ಕರೆಯಲ್ಪಟ್ಟ ಆಳವಾದ ಕಂದರದ ಮೂಲಕ ಬಣ್ಣ ಬಣ್ಣದ ಮರಳುಗಲ್ಲುಗಳನ್ನು ಹಾದು ಹೋಗುತ್ತದೆ. ಬೆಣ್ಣೇಹಳ್ಳ, ಹಿರೇಹಳ್ಳ ಮತ್ತು ತಾಸ್ ನದಿಗಳು ಇದರ ಪ್ರಮುಖ ಉಪನದಿಗಳು. ಇವುಗಳ ಹರಿವಿನ ಪ್ರದೇಶದಲ್ಲಿ ಸಾಮಾನ್ಯವಾಗಿ ಮಳೆ ತೀರ ಕಡಿಮೆ. ಮಲಪ್ರಭಾ ಮತ್ತು ಇತರ ಉಪನದಿಗಳ ೧೧,೫೪೯ ಚ.ಕಿ.ಮೀ. ವಿಸ್ತೀರ್ಣದ ಜಲಾನಯನ ಭೂಮಿ ಪೂರ್ತಿಯಾಗಿ ಕರ್ನಾಟಕದಲ್ಲಿದೆ. ಇದಕ್ಕೆ ಪ್ರಮುಖವಾಗಿ ನೀರನ್ನು ಒದಗಿಸುವುದು ಸುಮಾರು ೩೨ ಕಿ.ಮೀ. ಉದ್ದದ ಪಶ್ಚಿಮ ಘಟ್ಟಗಳು ಮತ್ತು ಇದರ ಪೂರ್ವದಿಕ್ಕಿನಲ್ಲಿರುವ ಸ್ವಲ್ಪ ಪ್ರದೇಶದ ನೀರನ್ನು, ಮಲಪ್ರಭಾ ನದಿಯೇ ಪಡೆಯುತ್ತದೆ.

**ಭೀಮಾ ನದಿ:** ಭೀಮಾ ನದಿಯು ಪಶ್ಚಿಮ ಘಟ್ಟಗಳಲ್ಲಿ ಸುಮಾರು ೯೪೫ ಮೀಟರ್ ಎತ್ತರದಲ್ಲಿ ಆರಂಭವಾಗಿ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮೂಲಕ ಆಗ್ನೇಯದ ಕಡೆಗೆ ಹರಿಯುತ್ತದೆ.

ರಾಯಚೂರಿನ ಉತ್ತರಭಾಗದಲ್ಲಿ ಸುಮಾರು ೨೬ ಕಿ.ಮೀ. ದೂರದಲ್ಲಿ, ಸುಮಾರು ೩೪೩ ಮೀಟರ್ ಎತ್ತರದ ಪ್ರದೇಶದಲ್ಲಿ ಕೃಷ್ಣಾ ನದಿಯನ್ನು ಸೇರುವ ಭೀಮಾ ನದಿಯ ಒಟ್ಟು ಉದ್ದ ೮೬೧ ಕಿ.ಮೀ. ಮೂಲಸ್ಥಾನದಿಂದ ಸುಮಾರು ೧೩೬ ಕಿ.ಮೀ. ದೂರದಲ್ಲಿ ಪುಣೆಯಿಂದ ಬರುವ ಮುಳಾ ಮತ್ತು ಮುತಾ ನದಿಗಳ ಸಂಯೋಜಿತ ನೀರು, ಭೀಮಾ ನದಿಯನ್ನು ಬಲದಂಡೆಯಿಂದ ಸೇರಿಕೊಳ್ಳುತ್ತದೆ. ಸುಮಾರು ೨೯ ಕಿ.ಮೀ. ಕೆಳಗೆ, ಎಡದಂಡೆಯಿಂದ ಘೋಡನದಿ ಬಂದು ಸೇರುತ್ತದೆ. ಈ ಜಾಗದಲ್ಲಿ ಭೀಮಾ ಸುಮಾರು ೫೧೩.೬ ಮೀಟರ್ ಎತ್ತರದಲ್ಲಿ ಹರಿದು, ಅತಿ ಹೆಚ್ಚು ಮಳೆ ಬೀಳುವ ಪಶ್ಚಿಮ ಘಟ್ಟಗಳ ಪ್ರದೇಶವನ್ನು ಬಿಟ್ಟು ಹೋಗುತ್ತದೆ. ಇಲ್ಲಿಂದ ಕೆಳಗೆ, ಪಶ್ಚಿಮ ಘಟ್ಟಗಳಲ್ಲೇ ಹುಟ್ಟುವ ನೀರಾ ನದಿ ಬಲದಂಡೆಯಿಂದ ಬಂದು ಸೇರುತ್ತದೆ. ಮುಂದೆ ಮಾನ್ ನದಿ ಅದನ್ನು ಸಂಧಿಸುತ್ತದೆ. ಭೀಮಾ ನದಿಯು ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಯಲ್ಲಿ ೮೩ ಕಿ.ಮೀ.ಉದ್ದ ಪ್ರವಹಿಸುತ್ತದೆ. ಈ ಸ್ಥಳದಲ್ಲಿ ಅಹಮದ್‌ನಗರದ ಹತ್ತಿರ ಉದಯಿಸುವ ಸಿನಾ ನದಿಯು ಇದನ್ನು ಸೇರುತ್ತದೆ. ಭೀಮಾ ನದಿಯ ಉಳಿದ ೨೯೮ ಕಿ.ಮೀ. ಉದ್ದದ ಹರಿವು ಕರ್ನಾಟಕದಲ್ಲಿದೆ. ಈ ಜಾಗದಲ್ಲಿ ಯಾವ ಪ್ರಮುಖ ನದಿಯೂ, ಭೀಮ ನದಿಯನ್ನು ಸೇರುವುದಿಲ್ಲ. ಭೀಮಾ ನದಿಯಿಂದ ನೀರುಣ್ಣುವ ಪ್ರದೇಶದ ಒಟ್ಟು ಕ್ಷೇತ್ರ ೭೦,೬೧೪ ಚ.ಕಿ.ಮೀ.ನಲ್ಲಿ ೧೮,೩೧೫ ಚ.ಕಿ.ಮೀ. ನಷ್ಟು ಪ್ರದೇಶ ಕರ್ನಾಟಕದಲ್ಲಿದೆ.

**ತುಂಗಭದ್ರಾ ನದಿ:** ಪಶ್ಚಿಮ ಘಟ್ಟಗಳ ಗಂಗಾ ಮೂಲದಲ್ಲಿ ಸುಮಾರು ೧,೧೯೮ ಮೀಟರ್ ಎತ್ತರದಲ್ಲಿ ಜೊತೆಯಾಗಿ ಹುಟ್ಟುವ ತುಂಗಾ ಮತ್ತು ಭದ್ರಾ ಅವಳಿ ನದಿಗಳು ಶಿವಮೊಗ್ಗದ ಉತ್ತರದಲ್ಲಿ, ಸುಮಾರು ೬೧೦ ಮೀಟರ್ ಎತ್ತರದ ಪ್ರದೇಶದಲ್ಲಿ ಸಂಧಿಸಿ ತುಂಗಭದ್ರಾ ಎನಿಸುತ್ತದೆ. ಕೃಷ್ಣಾ ನದಿಯ ಬಹು ಮುಖ್ಯ ಉಪನದಿ ತುಂಗಭದ್ರಾ. ತುಂಗಭದ್ರಾ ಮುಂದೆ ಈಶಾನ್ಯದ ಕಡೆ ೫೩೧ ಕಿ.ಮೀ.ವರೆಗೂ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿದು, ಸುಮಾರು ೨೬೪ ಮೀಟರ್ ಎತ್ತರದ ಪ್ರದೇಶದಲ್ಲಿ ಕರ್ನೂಲ್‌ನಿಂದ ಮುಂದೆ, ಕೃಷ್ಣಾ ನದಿಯನ್ನು ಸೇರುತ್ತದೆ. ತುಂಗಭದ್ರಾದ ಉಪನದಿಗಳಲ್ಲಿ ಒಂದಾದ ವರದಾ ನದಿ, ಪಶ್ಚಿಮ ಘಟ್ಟಗಳ ಬಹು ಹೆಚ್ಚು ವಿಸ್ತೀರ್ಣದ ಪ್ರದೇಶಗಳಲ್ಲಿ ಹರಿದು ಸುಮಾರು ೫೧೯ ಮೀಟರ್ ಎತ್ತರದ ಪ್ರದೇಶದಲ್ಲಿ, ತುಂಗಾ ಮತ್ತು ಭದ್ರಾಗಳ ಸಂಗಮದಿಂದ ಸುಮಾರು ೧೬೦ ಕಿ.ಮೀ. ಕೆಳಗೆ ತುಂಗಭದ್ರಾವನ್ನು ಕೂಡುತ್ತದೆ. ಮತ್ತೊಂದು ಮುಖ್ಯವಾದ ಉಪನದಿ ಹಗರಿ ಅಥವಾ ವೇದಾವತಿ(ಇದು ಮೇಲ್ಕಣಿವೆಯಲ್ಲಿನ ಹೆಸರು) ತುಂಗಭದ್ರಾ ಕೃಷ್ಣಾ ನದಿಯನ್ನು ಸಂಧಿಸುವುದಕ್ಕೆ ಸುಮಾರು ೧೬೮ ಕಿ.ಮೀ. ಹಿಂದೆ, ತುಂಗಭದ್ರಾವನ್ನು ಸೇರುತ್ತದೆ. ತುಂಗಭದ್ರಾದ ಒಟ್ಟು ನೀರುಣ್ಣುವ ಪ್ರದೇಶವು ೭೧,೪೧೭ ಚ.ಕಿ.ಮೀ; ಅದರಲ್ಲಿ ೫೭,೬೭೧ ಚ.ಕಿ.ಮೀ. ಪ್ರದೇಶ ನಮ್ಮ ರಾಜ್ಯದಲ್ಲಿದೆ. ಭೀಮಾ ನದಿಯಂತೆ ಇದೂ ಸಹ, ಪಶ್ಚಿಮ ಘಟ್ಟಗಳಲ್ಲಿ ಸುಮಾರು ೨೦೬ ಕಿ.ಮೀ. ಉದ್ದದಷ್ಟು ಹರಿವನ್ನು ಹೊಂದಿದೆ.

**ವೇದಾವತಿ:** ಹಗರಿ ಎಂದು ಕೆಳಕಣಿವೆಯಲ್ಲಿ ಪರಿಚಿತವಾಗಿರುವ ವೇದಾವತಿ ನದಿಯು ಪಶ್ಚಿಮ ಘಟ್ಟಗಳ ಮುಳ್ಳಯ್ಯನ ಗಿರಿಯ ತಳಭಾಗದಲ್ಲಿ ಜನಿಸುತ್ತದೆ. ಇದು ಕರ್ನಾಟಕದ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ಮತ್ತು ಆಂಧ್ರಪ್ರದೇಶದ ಆನಂತಪುರ ಜಿಲ್ಲೆಯಲ್ಲಿಯೂ ಹರಿಯುತ್ತಿದ್ದು, ಒಟ್ಟು ೨೩,೪೯೮ ಚ.ಕಿ.ಮೀ. ವಿಸ್ತೀರ್ಣದಷ್ಟು ಜಲಾನಯನ ಪ್ರದೇಶವನ್ನೊಳಗೊಂಡಿದೆ. ಇದರ ಒಟ್ಟು ಉದ್ದ ೫೯೧ ಕಿ.ಮೀ. ಅದರಲ್ಲಿ ೨೯೩ಕಿ.ಮೀ. ಉದ್ದ ಕರ್ನಾಟಕ ರಾಜ್ಯದಲ್ಲಿದ್ದು ೨೬ಕಿ.ಮೀ. ಉದ್ದಕ್ಕೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಗಡೀ ರೇಖೆಯಾಗಿಯೂ ಅದು ಹರಿಯುತ್ತದೆ.

**ಕಾವೇರಿ ನದಿ ಕೊಳ್ಳ:** ಕಾವೇರಿ ನದಿಯು ಒಂದು ಅಂತರರಾಜ್ಯ ನದಿಯಾಗಿದ್ದು ಭಾರತದ ದಕ್ಷಿಣ ಪ್ರಸ್ಥಭೂಮಿಯಯಲ್ಲಿ ಹರಿದು ಬಂಗಾಳ ಕೊಲ್ಲಿಗೆ ಸೇರುವ ಐದು ನದಿಗಳಲ್ಲಿ ಒಂದಾಗಿದೆ. ಕಾವೇರಿ ನದಿ ಕೊಳ್ಳದ ವಿಸ್ತೀರ್ಣ ೮೧,೧೫೫ ಚದರ ಕಿಲೋ ಮೀಟರು. ಇದರಲ್ಲಿ ಶೇ. ೫೪.೦೬ ಭಾಗ(೪೩,೮೬೮

ಚ.ಕಿ.ಮೀ) ತಮಿಳುನಾಡು ರಾಜ್ಯದಲ್ಲೂ,ಶೇ. ೪೨.೨೩ ಭಾಗ(೩೪,೨೭೨ ಚ.ಕಿ.ಮೀ) ಕರ್ನಾಟಕದಲ್ಲೂ, ಶೇ. ೩.೫೩ ಭಾಗ(೨,೮೬೬ ಚ.ಕಿ.ಮೀ) ಕೇರಳ ರಾಜ್ಯದಲ್ಲೂ ಮತ್ತು ಶೇ. ೦.೧೮(೧೪೮ ಚ.ಕಿ.ಮೀ) ಭಾಗ ಪುದುಚೆರಿಯಲ್ಲಿಯೂ ಹರಡಿದೆ. ಕಾವೇರಿಕೊಳ್ಳದ ಪ್ರದೇಶವು ರಾಜ್ಯದ ಶೇ.೧೮ ಭಾಗ ಪ್ರದೇಶವನ್ನು ಆವರಿಸಿದೆ.

**ಕಾವೇರಿ ನದಿ:** ಕಾವೇರಿ ನದಿಯು ಪವಿತ್ರತೆ, ವ್ಯಾಪಕತೆ, ರಮಣೀಯತೆ ಮತ್ತು ವ್ಯವಸಾಯ ಹಾಗೂ ಇತರೆ ಉಪಯುಕ್ತತೆಗಳ ಸಮಗ್ರ ದೃಷ್ಟಿಯಿಂದ "ದಕ್ಷಿಣ ಗಂಗೆ" ಎಂದು ಖ್ಯಾತಿ ಪಡೆದಿದೆ; ಇದರ ಹರಿವಿನ ಪ್ರದೇಶವೆಲ್ಲ ಪುಣ್ಯಭೂಮಿಯೆಂದು ಪರಿಗಣಿಸಲ್ಪಟ್ಟಿದೆ. ಕಾವೇರಿ ನದಿಯು ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿ ಪರ್ವತ ಶ್ರೇಣಿಯಲ್ಲಿರುವ ತಲಕಾವೇರಿಯಲ್ಲಿ ಸಮುದ್ರ ಮಟ್ಟದಿಂದ ೧,೩೪೧ ಮೀ ಎತ್ತರದಲ್ಲಿ ಉಗಮಿಸುತ್ತದೆ. ಇದು ಬಂಗಾಳಕೊಲ್ಲಿಯನ್ನು ಸೇರುವ ಮೊದಲು ೮೦೪ ಕಿ.ಮೀ. ದೂರ ಕರ್ನಾಟಕ ರಾಜ್ಯ ಮತ್ತು ತಮಿಳುನಾಡಿನಲ್ಲಿ ಹರಿಯುತ್ತದೆ. ಕೊಡಗಿನಲ್ಲಿ ಕಾವೇರಿಯ ಪ್ರವಾಹವು ವಕ್ರವಕ್ರವಾಗಿದ್ದು, ತಳಭಾಗವೆಲ್ಲಾ ಕಲ್ಲು ಬಂಡೆಗಳಿಂದಲೂ, ದಡಗಳು ಎತ್ತರವಾಗಿ, ಸೊಂಪಾಗಿ ಬೆಳೆದು ನಿಂತಿರುವ ಸಸ್ಯ ಸಮೃದ್ಧಿಯಿಂದಲೂ ಕೂಡಿವೆ. ಬೇಸಿಗೆಯಲ್ಲಿ ಎಲ್ಲಿಂದಲಾದರೂ ದಾಟಬಹುದಾದಷ್ಟು ನೀರು ಕಮ್ಮಿಯಾಗಿದ್ದು ಮಳೆಗಾಲದಲ್ಲಿ ಆರರಿಂದ ಒಂಭತ್ತು ಮೀಟರ್ ಆಳದಷ್ಟು ನೀರು ತುಂಬಿ ರಭಸದಿಂದ ಹರಿಯುತ್ತದೆ. ಪಶ್ಚಿಮ ಘಟ್ಟಗಳಲ್ಲೇ ಹುಟ್ಟುವ ಪ್ರಮುಖ ಉಪನದಿಯಾದ ಕಬಿನಿಯನ್ನು ಸೇರುವ ಮೊದಲು, ಅದರ ಪಾತ್ರ ಸರಾಸರಿ ೩೦೦ ಮೀ. ನಿಂದ ೪೦೦ ಮೀಟರ್‌ವರೆಗೂ ಅಗಲವಾಗುತ್ತದೆ. ಈ ಜಾಗದಲ್ಲಿ ಅದು ಇನ್ನೂ ವಿಶಾಲವಾಗಿ ಹರಿಯುತ್ತದೆ. ಇದರ ತಳ ಕಲ್ಲುಬಂಡೆಗಳಿಂದಲೇ ಕೂಡಿರುತ್ತದೆ. ಈ ನದಿಯು ೬೪ ಕಿ.ಮೀ. ಉದ್ದದವರೆಗೂ ಈ ಎರಡೂ ರಾಜ್ಯಗಳ ಗಡಿ ರೇಖೆಯಾಗಿ ಹರಿಯುತ್ತದೆ. ಕರ್ನಾಟಕ ರಾಜ್ಯದಲ್ಲಿ ಇದು ಒಟ್ಟು ೩೨೦ ಕಿ.ಮೀ. ಉದ್ದಕ್ಕೆ ಹರಿಯುತ್ತದೆ. ಕರ್ನಾಟಕದಲ್ಲಿ ಇದರ ಪ್ರಮುಖ ಉಪನದಿಗಳೆಂದರೆ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಕಬಿನಿ, ಸುವರ್ಣಾವತಿ, ಲೋಕಪಾವನಿ, ಶಿಂಷಾ ಮತ್ತು ಅರ್ಕಾವತಿ. ಕಬಿನಿ ಉಪನದಿ ಹೊರತುಪಡಿಸಿ ಉಳಿದ ಎಲ್ಲಾ ಉಪನದಿಗಳು ರಾಜ್ಯದಲ್ಲೇ ಉಗಮಿಸಿ ಕಾವೇರಿ ನದಿಯನ್ನು ಸೇರುತ್ತವೆ.

ಈ ನದಿಯ ಹರಿವಿನಲ್ಲಿ ಅನೇಕ ಜಲಪಾತಗಳಿವೆ ಮತ್ತು ಮೂರು ಪ್ರಖ್ಯಾತವಾದ ದ್ವೀಪಗಳಿವೆ. ಅವೆಂದರೆ ಶ್ರೀರಂಗಪಟ್ಟಣ, ಶಿವನಸಮುದ್ರ ಮತ್ತು ಶ್ರೀರಂಗ. ಮೊದಲನೆಯ ಎರಡು ಕರ್ನಾಟಕದಲ್ಲಿಯೂ ಮೂರನೆಯದು ತಿರುಚಿನಾಪಳ್ಳಿಯ ಬಳಿ ನದಿ ಮುಖಜ ಭೂಮಿಯ ಶಿರೋಭಾಗದಲ್ಲಿಯೂ ಇವೆ. ದೇಶದಲ್ಲೇ ಪ್ರಪ್ರಥಮವಾಗಿ ಜಲವಿದ್ಯುತ್ ಉತ್ಪಾದನೆಯಾದದ್ದು (ಭಾರತದ ಗ್ಯಾಸೆಟಿಯರ್‌ನಲ್ಲಿ ದಾಖಲಾಗಿರುವಂತೆ ಡಾರ್ಜಿಲಿಂಗ್‌ನಲ್ಲಿ ಆಗಿರದೆ) ಬೆಳಗಾವಿ ಜಿಲ್ಲೆಯ ಗೋಕಾಕ್ ಫಾಲ್ಸ್‌ನಲ್ಲಿ ೧೮೮೭ರಲ್ಲಿ, ಶಿವನಸಮುದ್ರದಲ್ಲಿ ನಿರ್ಮಿತಗೊಂಡ ಮತ್ತು ಜಲವಿದ್ಯುಜ್ಜನಕ ಯೋಜನೆ (೧೯೦೨) ಏಷ್ಯಾದಲ್ಲಿಯೇ ಮೊದಲನೆಯವುಗಳಲ್ಲಿ ಒಂದಾಗಿದೆ. ಶ್ರೀರಂಗಪಟ್ಟಣಕ್ಕೆ ಬಹಳ ಹತ್ತಿರದಲ್ಲಿ, ಅದಕ್ಕೂ ಮೊದಲು ಕಾವೇರಿ ನದಿಗೆ ಅಡ್ಡಕಟ್ಟೆ ಕಟ್ಟಿದೆ. ಇದೇ ಕನ್ನಂಬಾಡಿ ಅಥವಾ ಕೃಷ್ಣರಾಜಸಾಗರ ಅಣೆಕಟ್ಟು (೧೯೩೧). ಇದರ ಕೆಳಭಾಗದಲ್ಲಿ ಸುಂದರವಾದ ಬೃಂದಾವನ ಉದ್ಯಾನವಿದೆ. ಶಿವನಸಮುದ್ರ ವಿದ್ಯುದಾಗಾರದಿಂದ ೫೦ ಕಿ.ಮೀ. ಕೆಳಭಾಗದಿಂದ ಕಾವೇರಿ ನದಿಯು ಕರ್ನಾಟಕ ಮತ್ತು ತಮಿಳುನಾಡಿನ ಗಡಿಯಾಗಿ ೬೪ ಕಿ.ಮೀ. ಉದ್ದಕ್ಕೆ ಸಾಗಿ ಕೊನೆಗೆ ತಮಿಳುನಾಡನ್ನು ಸೇರುತ್ತದೆ; ಅಲ್ಲಿಂದ ಮುಂದೆ ಮೆಟ್ಟೂರು ಎಂಬಲ್ಲಿ ಜಲಾಶಯವಿದೆ (೧೯೩೪). ಕಾವೇರಿಯ ಹರಿವಿನಲ್ಲಿ ಇರುವ ಜಲಪಾತಗಳಲ್ಲಿ ಚುಂಚನಕಟ್ಟೆ, ಶಿವನಸಮುದ್ರ ಮತ್ತು ಹೊಗೇನಕಲ್ ಮುಖ್ಯವಾದುವುಗಳು. ಚುಂಚನಕಟ್ಟೆ ಜಲಪಾತವು (ಎತ್ತರ ಸುಮಾರು ೨೦ ಮೀ.) ಕೃಷ್ಣರಾಜಸಾಗರದಿಂದ ೬೦ ಕಿ.ಮೀ. ಹಿಂದೆ ಇದೆ. ನದಿಯು ಶಿವನಸಮುದ್ರದ ಬಳಿ ಎರಡು ಭಾಗವಾಗಿ, ಪ್ರತಿಯೊಂದು ಜಲಪಾತವೂ ಸುಮಾರು ೧೦೦ ಮೀಟರ್ ಎತ್ತರದಿಂದ ಧುಮುಕುತ್ತವೆ. ಪಶ್ಚಿಮದತ್ತ ಇರುವ ಜಲಪಾತವು ಗಗನಚುಕ್ಕಿ ಎಂದೂ

ಪೂರ್ವದತ್ತ ಇರುವ ಜಲಪಾತವು ಭರಚುಕ್ಕಿ ಎಂದು ಪ್ರಖ್ಯಾತವಾಗಿದೆ. ಎರಡೂ ಶಾಖೆಗಳೂ ಒಟ್ಟಿಗೆ ಸೇರಿ ಸ್ವಲ್ಪ ದೂರ ಸಾಗಿ, ಮುಂದೆ ಮೇಕೆದಾಟು ಎಂಬ ಕಂದರದ ಮೂಲಕ ಪ್ರವಹಿಸುತ್ತಾ, ಕರ್ನಾಟಕ ಮತ್ತು ತಮಿಳುನಾಡಿನ ಗಡಿಯಾಗಿ ಹರಿಯುತ್ತವೆ. ಈ ಸ್ಥಳದಲ್ಲಿ ಮೆಟ್ಟೂರು ಅಣೆಕಟ್ಟೆಯಿಂದ ೬೦ ಕಿ.ಮೀ. ಹಿಂದಕ್ಕೆ ಹೊಗೇನಕಲ್ ಜಲಪಾತ (ಎತ್ತರ ಸುಮಾರು ೨೫ಮೀ.) ಇದೆ.

**ಹೇಮಾವತಿ ನದಿ:** ಹೇಮಾವತಿ ಕಾವೇರಿಯ ಪ್ರಮುಖ ಉಪನದಿಗಳಲ್ಲಿ ಒಂದು. ಇದು ಪಶ್ಚಿಮಘಟ್ಟಗಳಲ್ಲಿ ಬಲ್ಲಾಳರಾಯನದುರ್ಗದ ಬಳಿ ೧,೨೧೯ ಮೀ. ಎತ್ತರದಲ್ಲಿ ಹುಟ್ಟಿ ಆಗ್ನೇಯದ ಕಡೆ ಹರಿಯುತ್ತದೆ. ಆಮೇಲೆ ಪಶ್ಚಿಮದ ಕಡೆಯಿಂದ ಬರುವ ಕೆಲವು ಹೊಳೆಗಳನ್ನು ಸೇರಿಸಿಕೊಂಡು ಅದು ಪೂರ್ವಕ್ಕೆ ತಿರುಗುತ್ತದೆ. ಅಲ್ಲಿ ಉತ್ತರದ ಕಡೆಯಿಂದ ಯಗಚಿ ನದಿಯನ್ನು ಸೇರಿಸಿಕೊಂಡು, ಹೊಳೇನರಸೀಪುರವನ್ನು ಸುತ್ತಿ, ದಕ್ಷಿಣಕ್ಕೆ ಪ್ರವಹಿಸಿ, ಕೃಷ್ಣರಾಜನಗರದ ಬಳಿ ಕಾವೇರಿಯನ್ನು ಸಂಧಿಸುತ್ತದೆ. ಇದರ ಜಲಾನಯನ ಪ್ರದೇಶವು ಸುಮಾರು ೫,೪೧೦ ಚ.ಕಿ.ಮೀ. ನದಿಯ ಉದ್ದ ಸಾಧಾರಣವಾಗಿ ೨೪೫ ಕಿ.ಮೀ.

**ಕಪಿಲಾ(ಕಬಿನಿ) ನದಿ:** ಕಬಿನಿ ನದಿಯು ಅಂತರರಾಜ್ಯ ನದಿಯಾಗಿದ್ದು ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪ್ರವಹಿಸುತ್ತದೆ. ಕಾವೇರಿಯ ಉಪನದಿಯಾದ ಕಬಿನಿ ನದಿಯು, ಉತ್ತರ ವೈನಾಡಿನ ಪಶ್ಚಿಮಘಟ್ಟಗಳಲ್ಲಿ ೨,೧೪೦ ಮೀ. ಎತ್ತರದಲ್ಲಿ ಜನ್ಮ ತಾಳುವ ಮಾನಂತವಾಡಿ ಪುಳಾ ಮತ್ತು ಪಾನಮ್ರ ಪುಳಾ ಎಂಬ ಎರಡು ಹೊಳೆಗಳಿಂದುಂಟಾಗಿದೆ. ಈ ನದಿಗಳು ಸಂಗಮವಾಗುವುದಕ್ಕೆ ೧೬ ಕಿ.ಮೀ. ಗೆ ಹಿಂದೆ, ೧೨ ಕಿ.ಮೀ. ಉದ್ದಕ್ಕೆ ಕೇರಳ ಮತ್ತು ಕರ್ನಾಟಕ ರಾಜ್ಯಗಳ ಗಡಿಯಾಗಿ ಹರಿದು ನಂತರ ಕಬಿನಿಯು ಕರ್ನಾಟಕವನ್ನು ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ, ಕಾಕನಕೋಟೆಯ ಮೇಲ್ಭಾಗದಲ್ಲಿ ನುಗು ನದಿಯನ್ನೂ ಮುಂದೆ ನಂಜನಗೂಡಿನ ಬಳಿ ಗುಂಡ್ಲು ಹೊಳೆಯನ್ನೂ ಸೇರಿಕೊಳ್ಳುತ್ತದೆ. ಈ ಎರಡೂ ನದಿಗಳೂ ದಕ್ಷಿಣದಿಂದ ಸೇರುತ್ತವೆ. ತಾರಕ ಮತ್ತು ಹೆಬ್ಬಳ್ಳ ಉಪನದಿಗಳು ಕಬಿನಿಯನ್ನು ಸೇರುತ್ತವೆ. ಕಬಿನಿಯು ತಿರುಮಕೂಡಲು ನರಸೀಪುರದ ಬಳಿ ಕಾವೇರಿಯನ್ನು ಸೇರುತ್ತದೆ. ಈ ಸಂಗಮ ಸ್ಥಳವು ಪವಿತ್ರಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ೧೩೭ಮೀ. ನಿಂದ ೧೮೩ ಮೀ. ಅಗಲವೂ, ಒಟ್ಟು ೨೩೦ ಕಿ.ಮೀ. ಉದ್ದವೂ ಇರುವ ಕಬಿನಿ ಸರ್ವಋತು ನದಿಯಾಗಿದೆ. ಇದರ ಜಲಾನಯನ ಪ್ರದೇಶ ಸುಮಾರು ೭,೦೪೦ ಚ.ಕಿ.ಮೀ. ಆಗಿದೆ.

**ಅರ್ಕಾವತಿ:** ಅರ್ಕಾವತಿ ನದಿಯು, ನಂದೀದುರ್ಗದ ಬೆಟ್ಟಗಳಲ್ಲಿ ೧,೪೮೦ ಮೀ. ಎತ್ತರದಲ್ಲಿ ಉದ್ಭವಿಸಿ, ೧೬೧ ಕಿ.ಮೀ. ದೂರ ಹರಿದು ಕಾವೇರಿಯನ್ನು ಸೇರುತ್ತದೆ. ಇದಕ್ಕೆ ಅಡ್ಡಲಾಗಿ ಚಾಮರಾಜಸಾಗರ ಜಲಾಶಯವನ್ನು ನಿರ್ಮಿಸಿ ಬೆಂಗಳೂರು ನಗರದ ಕೆಲವು ಭಾಗಕ್ಕೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಇದರ ಹರಿವಿನ ಪ್ರದೇಶ ೪,೩೫೧ ಚ.ಕಿ.ಮೀ. ಇದೆ. ಕುಮುದ್ವತಿ, ವೃಷಭಾವತಿ ಈ ನದಿಯ ಉಪನದಿಗಳಾಗಿವೆ.

**ಶಿಂಷಾ:** ಶಿಂಷಾ ನದಿಯು ತುಮಕೂರು ಜಿಲ್ಲೆಯಲ್ಲಿರುವ ತಿಪಟೂರು ತಾಲೂಕಿನಲ್ಲಿ ೯೧೪ ಮೀ. ಎತ್ತರದಲ್ಲಿ ಹುಟ್ಟುತ್ತದೆ. ಕಾವೇರಿಯ ಉಪನದಿಯಾದ ಇದು ೨೨೧ ಕಿ.ಮೀ. ಉದ್ದ ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹರಿದು ಎಡಗಡೆಯಲ್ಲಿ ಕಾವೇರಿಯನ್ನು ಸೇರುತ್ತದೆ. ಇದನ್ನು ಮದ್ದೂರು ಹೊಳೆ ಎಂದೂ ಕರೆಯುತ್ತಾರೆ. ಇದರ ಹರಿವಿನ ಪ್ರದೇಶವು ೮,೪೭೦ ಚ.ಕಿ.ಮೀ. ಇದೆ.ವೀರವೈಷ್ಣವಿ, ಕಣಿಹಳ್ಳ, ಚಿಕ್ಕಹೊಳೆ, ಹೆಬ್ಬಹಳ್ಳ, ಮುಲ್ಲಹಳ್ಳ ಮತ್ತು ಕಣ್ವ ನದಿಗಳು ಈ ನದಿಯ ಉಪನದಿಗಳು. ಶಿಂಷಾ ನದಿಯು ಕಾವೇರಿ ನದಿಯನ್ನು ಸೇರುವ ಮೊದಲು ೯೪ ಮೀ. ಎತ್ತರದಿಂದ ಧುಮುಕಿ ಜಲಪಾತವಾಗಿದೆ.

**ಸುವರ್ಣಾವತಿ:** ಕಾವೇರಿ ನದಿಯ ಉಪನದಿಯಾದ ಸುವರ್ಣಾವತಿ ನದಿಯು ಹೊನ್ನುಹೊಳೆ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿದೆ. ಮೈಸೂರು ಜಿಲ್ಲೆಯ ಆಗ್ನೇಯ ಭಾಗದ ಗಜಹಟ್ಟಿ ಕಣಿವೆಯ ಬಳಿ ಉಗಮಿಸಿ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳ ಮೂಲಕ ೮೮ ಕಿ.ಮೀ ದೂರ ಹರಿದು ತಲಕಾಡಿನ ಸಮೀಪದ ಕಕ್ಕೂರು ಬಳಿ ಕಾವೇರಿ ನದಿಯೋದಿಗೆ ಸಂಗಮವಾಗುವುದು. ಇದರ ಹರಿವಿನ ಪ್ರದೇಶ ೧,೭೮೭ ಚ.ಕಿ.ಮೀ. ಆಗಿದ್ದು ಕರ್ನಾಟಕ ಮತ್ತು ತಮಿಳುನಾಡು ರಾಜ್ಯದ ಪ್ರದೇಶವನ್ನು ಒಳಗೊಂಡಿದೆ.

**ಲಕ್ಷ್ಮಣತೀರ್ಥ:** ಕಾವೇರಿ ನದಿಗೆ ಅದರ ಬಲದಂಡೆಯಲ್ಲಿ ಬಂದು ಸೇರುವ ಲಕ್ಷ್ಮಣತೀರ್ಥ ನದಿಯು ಕೊಡಗು ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಬ್ರಹ್ಮಗಿರಿಯ ದೇವಸಿ ಬೆಟ್ಟದಲ್ಲಿ ಸಮುದ್ರ ಮಟ್ಟದಿಂದ ೧,೯೫೦ ಮೀ ಎತ್ತರದಲ್ಲಿ ಉಗಮಿಸಿ ಸುಮಾರು ೧೩೧ ಕಿ.ಮೀ ದೂರ ಹರಿಯುತ್ತದೆ. ರಾಮತೀರ್ಥ ಮತ್ತು ಕೆರೆಹೊಳೆ ನದಿಗಳು ಈ ನದಿಯ ಉಪನದಿಗಳು. ಇರ್ಪು ಎಂಬ ಸ್ಥಳದಲ್ಲಿ ಈ ನದಿಯು ಜಲಪಾತವನ್ನು ಉಂಟುಮಾಡುತ್ತದೆ. ಹುಣಸೂರು, ಕೃಷ್ಣರಾಜನಗರ ತಾಲೂಕುಗಳ ಮೂಲಕ ಹರಿದು ಕಾವೇರಿ ನದಿಯನ್ನು ಸೇರುತ್ತದೆ.

**ಗೋದಾವರಿ ಜಲಾನಯನ ಪ್ರದೇಶ:** ಗೋದಾವರಿ ನದಿಯು ಮಹಾರಾಷ್ಟ್ರ ರಾಜ್ಯದ ನಾಸಿಕ ಜಿಲ್ಲೆಯಲ್ಲಿ ಸಮುದ್ರ ಮಟ್ಟದಿಂದ ೧,೦೬೭ ಮೀ ಎತ್ತರದಲ್ಲಿ ಉಗಮಿಸಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ೧,೪೬೫ ಕಿ.ಮೀ ದೂರ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಗೋದಾವರಿ ನದಿಯು ಒಟ್ಟು ೩,೧೨,೮೧೩ ಚ.ಕಿ.ಮೀ ಜಲಾನಯನ ಪ್ರದೇಶವನ್ನು ಮಹಾರಾಷ್ಟ್ರ(ಶೇ. ೪೮.೬೫), ಮಧ್ಯಪ್ರದೇಶ(ಶೇ. ೮.೩೭), ಚತ್ತೀಸಗಢ(ಶೇ. ೧೨.೫), ಕರ್ನಾಟಕ, ಆಂಧ್ರಪ್ರದೇಶ(ಶೇ. ೨೩.೪) ಮತ್ತು ಒರಿಸ್ಸಾ(ಶೇ. ೫.೬೭) ರಾಜ್ಯಗಳಲ್ಲಿ ಹೊಂದಿದೆ. ರಾಜ್ಯದಲ್ಲಿ ಬಿದರೆ ಜಿಲ್ಲೆಯ ಬಹು ಭಾಗವು ಗೋದಾವರಿ ಉಪನದಿಯಾದ ಮಂಜ್ರಾ ನದಿಯ ಜಲಾನಯನ ಪ್ರದೇಶದಲ್ಲಿದೆ. ಕರ್ನಾಟಕದಲ್ಲಿ ಇದರ ಜಲಾನಯನ ಕ್ಷೇತ್ರ ೪,೪೦೬ ಚ.ಕಿ.ಮೀ.(ಶೇ. ೧.೪೧). ಕೃಷ್ಣಾ ನದಿಯಂತೆ ಗೋದಾವರಿಗೂ ಪಶ್ಚಿಮಘಟ್ಟಗಳಲ್ಲಿ ಧಾರಾಳ ಮಳೆ ದೊರಕುತ್ತದೆ. ಆದರೆ ಗೋದಾವರಿಯ ಹರಿವಿನ ಸ್ವಲ್ಪಭಾಗ ಕರ್ನಾಟಕದ ಬಿದರೆ ಜಿಲ್ಲೆಯಲ್ಲಿರುವ ಮಂಜ್ರಾ ನದಿಯ ಕಣಿವೆಯ ಪ್ರದೇಶದಲ್ಲಿದೆ.

**ಮಂಜ್ರಾ:** ಮಂಜ್ರಾ ನದಿಯು, ಗೋದಾವರಿ ನದಿಯ ಪ್ರಮುಖ ಉಪನದಿಗಳಲ್ಲಿ ಒಂದು. ಇದು ನೆರೆಯ ಮಹಾರಾಷ್ಟ್ರ ರಾಜ್ಯದ ಬೀಡ್ ಜಿಲ್ಲೆಯ ಬಾಲಾಘಾಟ್ ಬೆಟ್ಟಗಳ ಸಾಲಿನಲ್ಲಿ ೮೨೩ ಮೀ. ಎತ್ತರದಲ್ಲಿ ಉಗಮವಾಗುತ್ತದೆ. ಈ ನದಿಯು ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ಹರಿಯುತ್ತದೆ. ಈ ನದಿಯ ಜನ್ಮ ಸ್ಥಾನದಿಂದ ೩೨೩ ಮೀ. ಎತ್ತರ ಪ್ರದೇಶದಲ್ಲಿ ಗೋದಾವರಿಯಲ್ಲಿ ಸಂಗಮವಾಗುವವರೆಗಿನ ಒಟ್ಟು ೭೨೩ ಕಿ.ಮೀ. ಉದ್ದದಲ್ಲಿ ೧೫೫ ಕಿ.ಮೀ. ಉದ್ದ ಕರ್ನಾಟಕದ ಬಿದರೆ ಜಿಲ್ಲೆಯಲ್ಲಿದೆ. ಮಂಜ್ರಾ ನದಿಯ ಒಟ್ಟು ೩೦,೪೬೪ ಚ.ಕಿ.ಮೀ. ಜಲಾನಯನ ಪ್ರದೇಶದಲ್ಲಿ ೪,೪೦೬ ಚ.ಕಿ.ಮೀ.ನಷ್ಟು ಭಾಗ ಕರ್ನಾಟಕದಲ್ಲಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ೧೫,೬೬೭ ಚ.ಕಿ.ಮೀ ಮತ್ತು ಆಂಧ್ರಪ್ರದೇಶ ರಾಜ್ಯದಲ್ಲಿ ೧೦,೭೭೨ ಚ.ಕಿ.ಮೀ ಜಲಾನಯನ ಪ್ರದೇಶವನ್ನು ಹೊಂದಿದೆ.

**ಕಾರಂಜಾ:** ಬಿದರೆ ಜಿಲ್ಲೆಯಲ್ಲಿ ಹರಿಯುವ ಕಾರಂಜಾ ನದಿಯು ಮಂಜ್ರಾದ ಮುಖ್ಯ ಉಪನದಿಗಳಲ್ಲಿ ಒಂದು. ಇದು ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ಖೀರಹಳ್ಳಿಯ ಬಳಿ ಸುಮಾರು ೬೭೦ ಮೀ. ಎತ್ತರದಲ್ಲಿ ಜನಿಸುತ್ತದೆ. ಆಂಧ್ರಪ್ರದೇಶದಲ್ಲಿ ಪ್ರವಹಿಸಿದ ಮೇಲೆ, ಸುಮಾರು ೧೬ ಕಿ.ಮೀ. ಉದ್ದಕ್ಕೂ ಆಂಧ್ರಪ್ರದೇಶ ಮತ್ತು ಕರ್ನಾಟಕದ ಗಡಿಯಾಗಿ ಹರಿಯುತ್ತದೆ. ಮುಂದೆ ಕರ್ನಾಟಕದಲ್ಲಿ ಹರಿದು ನಾರದ ಸಂಗಮದ ಬಳಿ ಮಂಜ್ರಾವನ್ನು ಸೇರುತ್ತದೆ. ಇದರ ಹರಿವಿನ ಪ್ರದೇಶದ ವಿಸ್ತೀರ್ಣ ಸುಮಾರು ೨,೮೯೯

ಚ.ಕಿ.ಮೀ. ತನ್ನ ಉಗಮ ಸ್ಥಳದಿಂದ ಮಂಜ್ರಾದಲ್ಲಿ ಸಂಗಮವಾಗುವವರೆಗಿನ ಇದರ ಒಟ್ಟು ೧೧೭ಕಿ.ಮೀ. ನದಿಯ ಉದ್ದದಲ್ಲಿ ೭೪ ಕಿ.ಮೀ. ಕರ್ನಾಟಕದಲ್ಲಿದೆ.

**ಪೆನ್ನಾರ್ ಮತ್ತು ಪಾಲಾರ್ ಕಣಿವೆಗಳು:** ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್ ಮತ್ತ ಪಾಲಾರ್ ನದಿಗಳು, ತುಮಕೂರು ಜಿಲ್ಲೆಯ ಸುಮಾರು ಐದನೇ ಒಂದು ಭಾಗದಷ್ಟು, ಬೆಂಗಳೂರು ಜಿಲ್ಲೆಯ ಸುಮಾರು ಮೂರನೇ ಒಂದು ಭಾಗದಷ್ಟು ಮತ್ತು ಕೋಲಾರ ಜಿಲ್ಲೆಯ ಪೂರ್ತಿ ಭಾಗದಲ್ಲಿ ಹರಿವನ್ನು ಪಡೆದಿವೆ.

**ಉತ್ತರ ಪಿನಾಕಿನಿ:** ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿಯುವ ಅಂತರರಾಜ್ಯದ ನದಿಯಾದ ಉತ್ತರ ಪಿನಾಕಿನಿ, ಕರ್ನಾಟಕದ ನಂದೀದುರ್ಗ ಶ್ರೇಣಿಯಲ್ಲಿನ ಚನ್ನಕೇಶವ ಬೆಟ್ಟಗಳಲ್ಲಿ ಜನಿಸುತ್ತದೆ. ಮುಂದೆ ಪೆನ್ನಾರ್ ಎಂಬ ಹೆಸರಿನಿಂದ ಮುಂದುವರಿಯುವ ಈ ನದಿ ಪರ್ಯಾಯ ದ್ವೀಪದ ನಾಲ್ಕನೆಯ ದೊಡ್ಡ ನದಿ ಮತ್ತು ಕಾವೇರಿಯ ನಂತರ ಎರಡನೆಯದು. ಇದು ವಾಯವ್ಯ ದಿಕ್ಕಿನಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಮಾರ್ಗವಾಗಿ ೪೮ ಕಿ.ಮೀ. ದೂರ ಹರಿದು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ಮತ್ತು ಪೆನುಗೊಂಡ ತಾಲೂಕುಗಳಲ್ಲಿ ೬೭ ಕಿ.ಮೀ. ದೂರ ಹರಿದು ಮತ್ತೆ ಕರ್ನಾಟಕಕ್ಕೆ ಬಂದು, ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಮಧ್ಯದಲ್ಲಿ ೧೩ ಕಿ.ಮೀ. ದೂರ ಹರಿದು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲೂಕಿಗೆ ಹೋಗುತ್ತದೆ. ಈ ನದಿ ಉಗಮ ಸ್ಥಳದಿಂದ ಅದು ಬಂಗಾಳ ಕೊಲ್ಲಿಯನ್ನು ಸೇರುವವರೆಗಿನ ಅದರ ಉದ್ದ ೫೯೭ ಕಿ.ಮೀ. ಅದರಲ್ಲಿ ೬೧ ಕಿ.ಮೀ. ಕರ್ನಾಟಕದಲ್ಲಿದೆ. ಕರ್ನಾಟಕದಲ್ಲಿ ಇದರ ಪ್ರಮುಖ ಉಪನದಿಗಳು ತುಮಕೂರು ಜಿಲ್ಲೆಯಲ್ಲಿನ ಜಯಮಂಗಲಿ, ಕೋಲಾರ ಜಿಲ್ಲೆಯಲ್ಲಿನ ಚಿತ್ರಾವತಿ ಮತ್ತು ಪಾಪಾಘ್ನಿ. ಇವುಗಳ ಒಟ್ಟು ೫೫,೨೧೩ ಚ.ಕಿ.ಮೀ. ಹರಿವಿನ ಕ್ಷೇತ್ರದಲ್ಲಿ ೬,೯೩೭ ಚ.ಕಿ.ಮೀ. ನಷ್ಟು ಕ್ಷೇತ್ರ ಕರ್ನಾಟಕದಲ್ಲಿದೆ.

**ದಕ್ಷಿಣ ಪಿನಾಕಿನಿ:** ಮತ್ತೊಂದು ಅಂತರ ರಾಜ್ಯ ನದಿಯಾದ ದಕ್ಷಿಣ ಪಿನಾಕಿನಿಯು ಕೋಲಾರ ಜಿಲ್ಲೆಯ ಹಾರ್ವಶೆಟ್ಟ ಹಳ್ಳಿಯ ಬಳಿ, ನಂದೀದುರ್ಗದ ಬೆಟ್ಟಗಳ ಸಾಲಿನಲ್ಲಿ ೯೦೦ ಮೀ. ಎತ್ತರದಲ್ಲಿ ಹುಟ್ಟಿ ಕರ್ನಾಟಕ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೆರಿಗಳಲ್ಲಿ ಹರಿಯುತ್ತದೆ. ಕೋಲಾರ, ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ೭೯ ಕಿ.ಮೀ. ದೂರದವರೆಗೆ ಪ್ರವಹಿಸಿ ಮುಂದೆ ತಮಿಳುನಾಡನ್ನು ಹೊಕ್ಕು 'ಪೊನ್ನೈಯಾರ್' ಎಂಬ ಹೆಸರಿನಿಂದ ಪರಿಚಿತವಾಗಿದೆ. ಕಡಲೂರು ಬಳಿ ಅದು ಬಂಗಾಳಕೊಲ್ಲಿಯನ್ನು ಸೇರುತ್ತದೆ.

**ಪಾಲಾರ್:** ಕೋಲಾರ ಜಿಲ್ಲೆಯ ತಳಗವಾರ ಹಳ್ಳಿಯ ಆಚೆಗಿನ ನಂದೀದುರ್ಗ ಬೆಟ್ಟಗಳ ಸಾಲಿನಲ್ಲಿ ೯೦೦ ಮೀ. ಎತ್ತರದಲ್ಲಿ ಜನಿಸುವ ಪಾಲಾರ್ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಹರಿಯುತ್ತದೆ. ಸಾಮಾನ್ಯವಾಗಿ ಆಗ್ನೇಯ ದಿಕ್ಕಿನ ಕಡೆ ಹರಿಯುತ್ತ ಕೋಲಾರ ಜಿಲ್ಲೆಯಲ್ಲಿ ೯೩ ಕಿ.ಮೀ. ಉದ್ದದಷ್ಟು ಹರಿದ ಮೇಲೆ ಆಂಧ್ರಪ್ರದೇಶವನ್ನು ಸೇರಿ, ತಮಿಳುನಾಡಿನ ಮದ್ರಾಸ್(ಚೆನ್ನೈ) ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ.

**ಪಶ್ಚಿಮವಾಹಿ ನದಿಗಳು:** ರಾಜ್ಯದಲ್ಲಿ ಅನೇಕ ನದಿಗಳು ಪಶ್ಚಿಮಘಟ್ಟದಲ್ಲಿ ಹುಟ್ಟಿ ಪಶ್ಚಿಮವಾಹಿಯಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಸಾಮಾನ್ಯವಾಗಿ ಸಮುದ್ರಮಟ್ಟದಿಂದ ೪೦೦ರಿಂದ ೧,೬೦೦ ಮೀ ಎತ್ತರದಲ್ಲಿ ಈ ನದಿಗಳು ಹುಟ್ಟಿ ಅರಬ್ಬೀ ಸಮುದ್ರವನ್ನು ಸೇರುವ ಮೊದಲು ೫೦ರಿಂದ ೩೦೦ ಕಿ.ಮೀ ದೂರದವರೆಗೂ ಪ್ರವಹಿಸುತ್ತವೆ. ಎಲ್ಲ ಪಶ್ಚಿಮಗಾಮೀ ನದಿಗಳ ಒಟ್ಟು ಜಲಾನಯನ ಕ್ಷೇತ್ರವು ೨೬,೨೧೪ ಚ.ಕಿ.ಮೀ. ಮತ್ತು ಅವುಗಳ ಸರಾಸರಿ ವರ್ಷದಲ್ಲಿ ಹರಿವು ೫,೭೦೦ ಕೋಟಿ ಘ.ಮೀ.ಗಳು.

**ನೇತ್ರಾವತಿ:** ನೇತ್ರಾವತಿಯು ದಕ್ಷಿಣ ಕನ್ನಡ ಜಿಲ್ಲೆಯ ಅತಿ ದೊಡ್ಡ ನದಿ. ಈ ನದಿಯು ದಕ್ಷಿಣ ಕನ್ನಡದ ಬಲ್ಲಾಳರಾಯನ ದುರ್ಗದಲ್ಲಿ ಸಮುದ್ರ ಮಟ್ಟದಿಂದ ೧,೦೦೦ ಮೀ ಎತ್ತರದಲ್ಲಿ ಹುಟ್ಟಿ ಒಟ್ಟು ೧೦೩ ಕಿ.ಮೀ. ದೂರ ಪ್ರವಹಿಸುತ್ತದೆ. ಇದರ ಜಲಾನಯನ ಪ್ರದೇಶ ೩,೨೨೨ ಚ.ಕಿ.ಮೀ. ಆಗಿದೆ. ಇದು ಚಾರ್ಮಾಡಿ ಬೆಟ್ಟಗಳ ಸಾಲಿನಲ್ಲಿ ಸಂಸ್ಥೆಯ ಬಳಿ ಹುಟ್ಟಿದರೂ, ವಿಷ್ಣುವಿನ ಅವತಾರವಾದ ವರಾಹ ಪರ್ವತದಲ್ಲಿನ ವರಾಹದ ನೇತ್ರದಿಂದ ಹರಿದು ಬರುವುದರಿಂದ ಈ ಹೆಸರು ಬಂದಿತೆಂದು ಐತಿಹ್ಯವಿದೆ. ನೇತ್ರಾವತಿಯ ಪ್ರಮುಖ ಉಪನದಿಗಳು ನೆರಿಯ ಹೊಳೆ, ಕುಮಾರಧಾರಾ, ಬೆಳ್ತಂಗಡಿಹೊಳೆ ಮತ್ತು ಶಿಶಿಲಹೊಳೆ. ಇದು ಮಂಗಳೂರಿಗೆ ಸಮೀಪದಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ.

**ಕಾಳೀನದಿ:** ಬಹುಮುಖ್ಯವೂ ಪಶ್ಚಿಮಗಾಮಿಯೂ ಆದ ಕಾಳೀ ನದಿಯು ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟಗಳಲ್ಲಿ ಸಮುದ್ರಮಟ್ಟದಿಂದ ೬೦೦ ಮೀ ಎತ್ತರದಲ್ಲಿ ಹುಟ್ಟಿ ೪,೧೮೮ ಚ.ಕಿ.ಮಿ. ಜಲಾನಯನ ಪ್ರದೇಶ ವಿಸ್ತೀರ್ಣವುಳ್ಳದ್ದಾಗಿದೆ. ಒಟ್ಟು ೧೫೩ಕಿ.ಮೀ. ಉದ್ದದಷ್ಟು ಹರಿದು ಕಾರವಾರದ ಬಳಿ, ಅರಬ್ಬೀಸಮುದ್ರವನ್ನು ಅದು ಸೇರುತ್ತದೆ. ಈ ನದಿಯು ಕಪ್ಪು ಬಂಡೆಗಳ ಮೂಲಕ ಹರಿಯುವುದರಿಂದ ಅದು ಕಪ್ಪಾಗಿ ಕಾಣಿಸುತ್ತದೆ; ಆದ್ದರಿಂದ ಇದಕ್ಕೆ ಕಾಳೀ (ಕಪ್ಪು) ಎಂದ ಹೆಸರು ಅನ್ವರ್ಥವಾಯಿತು. ಈ ನದಿಯ ಮುಖ್ಯ ಉಪನದಿಗಳು ಪಾಂಡರಿ, ತಟ್ಟಹಳ್ಳಿ, ಕಾನೇರಿ ಮತ್ತು ವಾಕಿ. ಕಾಳೀ ಮತ್ತು ಅದರ ಉಪನದಿಗಳಲ್ಲಿ ಜಲವಿದ್ಯುತ್ ಉತ್ಪಾದನೆಯ ಬೃಹತ್ ಸಂಕೀರ್ಣವನ್ನು ಕಟ್ಟಲಾಗುತ್ತಿದೆ.

**ಶರಾವತಿ:** ಶರಾವತಿ ನದಿಯು, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಪಶ್ಚಿಮಘಟ್ಟಗಳಲ್ಲಿ ಅಂಬುತೀರ್ಥದ ಬಳಿ ಸಮುದ್ರ ಮಟ್ಟದಿಂದ ೭೦೦ ಮೀ ಎತ್ತರದಲ್ಲಿ ಜನಿಸುತ್ತದೆ. ಶ್ರೀರಾಮನು ಶರ(ಬಾಣ)ವನ್ನು ಹೊಡೆದು ನಾಟಿದ ಜಾಗದಿಂದ ಹುಟ್ಟಿದುದರಿಂದ ಅದಕ್ಕೆ ಶರಾವತಿ ಎಂದು ಹೆಸರಾಯಿತೆಂದು ಪೌರಾಣಿಕ ಹಿನ್ನೆಲೆಯೊಂದಿದೆ. ಇದರ ಉದ್ದ ಸುಮಾರು ೧೨೨ ಕಿ.ಮೀ. ಮತ್ತು ಅದರ ಹರಿವಿನ ಪ್ರದೇಶ ೩,೫೯೨ ಚ.ಕಿ.ಮೀ. ಜೋಗ್ ಬಳಿ ೨೫೩ ಮೀ. ಎತ್ತರದಿಂದ ಬೀಳುವ ಈ ನದಿಯ ಜಲಪಾತವು ಜಗತ್ಪ್ರಸಿದ್ಧವಾಗಿದೆ. ಶರಾವತಿಯ ಜಲವಿದ್ಯುತ್ ಕೇಂದ್ರ ಕರ್ನಾಟಕಕ್ಕೆ ಬಹು ಮುಖ್ಯವಾದ ವಿದ್ಯುತ್ ಉತ್ಪಾದನಾ ಕೊಡುಗೆಯಾಗಿದೆ. ಇದು ಉತ್ತರ ಕನ್ನಡದ ಹೊನ್ನಾವರದ ಬಳಿ ಅರಬ್ಬೀಸಮುದ್ರವನ್ನು ಸಂಧಿಸುತ್ತದೆ.

**ಬೇಡ್ತಿ:** ಗಂಗಾವಳಿ ಎಂದು ಹೆಸರಾದ ಬೇಡ್ತಿ ನದಿಯು, ಧಾರವಾಡ–ಹುಬ್ಬಳ್ಳಿ ಸುತ್ತಮುತ್ತಲಿನ ಬೆಟ್ಟಗಳ ಸಾಲಿನ ತಪ್ಪಲಿನಲ್ಲಿ, ಸಮುದ್ರ ಮಟ್ಟದಿಂದ ೭೦೦ಮೀ. ಎತ್ತರದಲ್ಲಿ ಉದ್ಭವಿಸುತ್ತದೆ. ಈ ನದಿಯ ಉದ್ದ ಸುಮಾರು ೧೫೨ ಕಿ.ಮೀ. ಮತ್ತು ಅದರ ಹರಿವಿನ ಕ್ಷೇತ್ರ ೩,೫೭೪ ಚ.ಕಿ.ಮೀ. ಇದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಗಂಗಾವಳಿ ಹಳ್ಳಿಯ ಬಲಿ ಅರಬ್ಬೀಸಮುದ್ರವನ್ನು ಸೇರುತ್ತದೆ. ಈ ನದಿಯು ತನ್ನ ಜನ್ಮಸ್ಥಳದಿಂದ ಸುಮಾರು ೭೨ ಕಿ.ಮೀ. ದೂರದಲ್ಲಿ ಮಾಗೋಡ್ ಬಳಿ ೧೩೭ ಮೀ ಎತ್ತರದಿಂದ ಧುಮುಕುತ್ತದೆ. ಆದುದರಿಂದ ಇದಕ್ಕೆ ಮಾಗೋಡ್ ಜಲಪಾತವೆಂದು ಹೆಸರಾಗಿದೆ.

**ಮಹಾದಾಯಿ:** ಮಹಾದಾಯಿ ನದಿಯು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ದೇಗಾಂವೆ ಹಳ್ಳಿಯ ಬಳಿ ಹುಟ್ಟುತ್ತದೆ. ಇದು ಕರ್ನಾಟಕ ಮತ್ತು ಗೋವಾಗಳಲ್ಲಿ ಹರಿಯುವ ಅಂತರ ರಾಜ್ಯದ ನದಿ. ಇದರ ಉದ್ದದಲ್ಲಿ ೩೫ ಕಿ.ಮೀ. ಕರ್ನಾಟಕದಲ್ಲಿಯೂ, ೪೫ ಕಿ.ಮೀ. ಉದ್ದ ಗೋವಾದಲ್ಲಿಯೂ ಇದೆ. ಈ ನದಿಯ ಒಟ್ಟು ೨,೦೦೮ ಚ.ಕಿ.ಮೀ. ಜಲಾನಯನ ಕ್ಷೇತ್ರದಲ್ಲಿ ೪೫೫ ಚ.ಕಿ.ಮೀ. ಕರ್ನಾಟಕದಲ್ಲಿಯೂ ಮತ್ತು ೧,೫೫೩ ಚ.ಕಿ.ಮೀ. ಗೋವಾದಲ್ಲಿಯೂ ಇದೆ. ಗೋವಾದ ಪಣಜಿ ಬಳಿ ಅರಬ್ಬೀಸಮುದ್ರಕ್ಕೆ ಸೇರುವ ಈ ನದಿಗೆ ಅಲ್ಲಿ ಮಂಡೋವಿ ಎಂದು ಕರೆಯುತ್ತಾರೆ.

**ಅಘನಾಶಿನಿ(ತದಡಿ):** ಅಘನಾಶಿನಿ (ಪಾಪನಾಶಿನಿ ಎಂದು ಅರ್ಥ) ನದಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿ ಸಮುದ್ರ ಮಟ್ಟದಿಂದ ೫೦೦ ಮೀ. ಎತ್ತರದಲ್ಲಿ ಹುಟ್ಟುತ್ತದೆ. ಇದು ಕರ್ನಾಟಕದಲ್ಲಿ ೧೨೧ ಕಿ.ಮೀ. ಉದ್ದ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ಇದರ ಜಲಾನಯನ ಕ್ಷೇತ್ರ ೧,೩೩೦ ಚ.ಕಿ.ಮೀ.

**ವಾರಾಹಿ(ಹಾಲಾಡಿ):** ಕೆಳಕಣಿವೆಯಲ್ಲಿ ಹಾಲಾಡಿ ನದಿ ಎಂದು ಕರೆಯಲ್ಪಡುವ ವಾರಾಹಿ ನದಿಯು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಗುಡ್ಡೆಕೊಪ್ಪದ ಬಳಿ ಸಮುದ್ರ ಮಟ್ಟದಿಂದ ೬೦೦ ಮೀ. ಎತ್ತರದಲ್ಲಿ ಜನ್ಮ ತಾಳುತ್ತದೆ. ಸ್ವಲ್ಪ ದೂರದಲ್ಲೇ ನದಿಯ ತಳದ ಮಟ್ಟ ಥಟ್ಟನೆ ಕುಸಿಯುತ್ತದೆ. ಇದಕ್ಕೆ ಕುಂಚಿಕಲ್ ಜಲಪಾತವೆಂದು ಹೆಸರು. ಈ ನದಿಯು ಸುಮಾರು ೬೬ ಕಿ.ಮೀ ದೂರ ಹರಿದು ಉಡುಪಿ ಜಿಲ್ಲೆಯ ಕುಂದಾಪುರದ ಹತ್ತಿರ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಇದರ ಜಲಾನಯನ ಕ್ಷೇತ್ರ ೭೫೯ ಚ.ಕಿ.ಮೀ. ಆಗಿದೆ.

**ಬರಪೊಳೆ(ವಾಲಪಟ್ಟಣಂ):** ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಸಮುದ್ರ ಮಟ್ಟದಿಂದ ೯೦೦ ಮೀ ಎತ್ತರದಲ್ಲಿ ಹುಟ್ಟುವ ಬರಪೊಳೆ ನದಿ ಕರ್ನಾಟಕ ಮತ್ತು ಕೇರಳ ರಾಜ್ಯಗಳ ಅಂತರ ರಾಜ್ಯದ ನದಿ. ಬರಪೊಳೆ ಎಂಬ ಹೆಸರಿನ ವ್ಯುತ್ಪತ್ತಿ 'ಬರ' ಎಂದರೆ ಕಡಿದಾದ ಮತ್ತು 'ಪೊಳೆ' ಎಂದರೆ ನದಿ ಎಂಬುದರಿಂದ ಆಗಿದೆ. ಈ ನದಿಯು, ಕಡಿದಾದ, ಸಾಮಾನ್ಯವಾಗಿ ನೇರವಾಗುವ ಪ್ರಪಾತಗಳ ದಡದಿಂದ ಕೂಡಿದ ಆಳವಾದ ಕಂದರದಲ್ಲಿ ಹರಿಯುತ್ತದೆ. ಒಟ್ಟು ಸುಮಾರು ೧೧೫ ಕಿ.ಮೀ. ಉದ್ದವಿರುವ ಈ ನದಿ, ಸುಮಾರು ೩೧ ಕಿ.ಮೀ. ಉದ್ದದಷ್ಟು ಕರ್ನಾಟಕದಲ್ಲಿಯೂ, ೬೪ ಕಿ.ಮೀ. ಕೇರಳದಲ್ಲಿಯೂ ಮತ್ತು ಉಳಿದ ೧೦ ಕಿ.ಮೀ. ದೂರ ಎರಡೂ ರಾಜ್ಯಗಳ ಗಡಿಯಾಗಿಯೂ ಹರಿಯುತ್ತದೆ. (೬೦೮ ಚ.ಕಿ.ಮೀ. ಕರ್ನಾಟಕದಲ್ಲಿ ಮತ್ತು ೧,೨೯೭ ಚ.ಕಿ.ಮೀ. ಕೇರಳದಲ್ಲಿ).

**ಚಕ್ರಾ ನದಿ:** ಪಶ್ಚಿಮಗಾಮಿಯಾದ ಚಕ್ರಾ ನದಿ ಉಡುಪಿ ಜಿಲ್ಲೆಯ ಮಾರ್ಗವಾಗಿ ಹರಿದು ಕುಂದಾಪುರದ ಬಳಿ ಅರಬ್ಬೀ ಸಮುದ್ರಕ್ಕೆ ಬೀಳುತ್ತದೆ. ಈ ನದಿಯ ಉದ್ದ ೫೨ ಕಿ.ಮೀ. ಲಿಂಗನಮಕ್ಕಿ ಜಲಾಶಯದ ನೀರನ್ನು ಹೆಚ್ಚಿಸಲು ಈ ನದಿಯ ನೀರನ್ನು ಶರಾವತಿ ಕಣಿವೆಯ ಕಡೆಗೆ ತಿರುಗಿಸಲಾಗುತ್ತಿದೆ. ಇದರ ಜಲಾನಯನ ಕ್ಷೇತ್ರ ೩೩೬ ಚ.ಕಿ.ಮೀ. ಆಗಿದೆ.

ಮೇಲೆ ವಿವರಿಸಿರುವ ಪ್ರಮುಖ ನದಿ ಕಣಿವೆಗಳ ಜೊತೆಗೆ ಕೆಲವು ಸ್ವತಂತ್ರ ನದಿ ಕಣಿವೆಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳು ಹೀಗಿವೆ.

**೧. ಶರಾವತಿ ಮತ್ತು ಚಕ್ರಾ ನದಿಗಳ ಮಧ್ಯೆ ಇರುವ ಜಲಾನಯನ ಪ್ರದೇಶ:** ಈ ಪ್ರದೇಶದಲ್ಲಿ ಹಲವಾರು ಸಣ್ಣ ಹೊಳೆಗಳು ಹರಿದು ಅರಬೀ ಸಮುದ್ರವನ್ನು ಸೇರುತ್ತವೆ. ಕೊಲ್ಲೂರು ನದಿ, ಘಂಟಿಹೊಳೆ, ವೆಂಕಟಾಪುರ ಹೊಳೆ, ಬೈಂದೂರು ಹೊಳೆ, ಶಂಕರಗುಂಡಿ ಹೊಳೆ, ಕುಂಬಾರಹೊಳೆ ಮತ್ತು ಎಡ ಮಾವಿನ ಹೊಳೆ ಪ್ರಮುಖವಾಗಿವೆ.ಇವುಗಳ ಪೂರ್ಣ ಜಲಾನಯನ ಪ್ರದೇಶ ರಾಜ್ಯದಲ್ಲಿದೆ.

**೨. ವಾರಾಹಿ ಮತ್ತು ನೇತ್ರಾವತಿ ನದಿಗಳ ಮಧ್ಯೆ ಇರುವ ಪ್ರದೇಶ:** ಈ ಪ್ರದೇಶದಲ್ಲಿ ಮುಲ್ಕಿ ನದಿ, ಸ್ವರ್ಣ ನದಿ, ಸೀತಾ ನದಿ, ಪಾವಂಜೆ, ನಡಿಸಾಲು, ಗುರುಪುರ, ಎಣ್ಣೆಹೊಳೆ ಮತ್ತು ಮಡಿಸಾಲ್ ಹೊಳೆ ಪ್ರಮುಖ ಹೊಳೆಗಳಾಗಿವೆ. ಇವುಗಳ ಪೂರ್ಣ ಜಲಾನಯನ ಪ್ರದೇಶ ರಾಜ್ಯದಲ್ಲಿದೆ.

**೩. ನೇತ್ರಾವತಿ ಮತ್ತು ಚಂದ್ರಗಿರಿ(ಪಯಸ್ವಿನಿ) ನದಿಗಳ ಮಧ್ಯೆ ಇರುವ ಪ್ರದೇಶ:** ಈ ಪ್ರದೇಶದಲ್ಲಿ ಚಂದ್ರಗಿರಿ ಮತ್ತು ಶರಿಯ ನದಿಗಳು ಹರಿಯುತ್ತವೆ. ಕೊಡಗು ಜಿಲ್ಲೆಯ ಮಡಿಕೇರಿಯ ಪಶ್ಚಿಮದಲ್ಲಿ ಸಮುದ್ರ ಮಟ್ಟದಿಂದ ೬೦೦ ಮೀ ಎತ್ತರದಲ್ಲಿ ಉಗಮಿಸುತ್ತದೆ. ಪಯಸ್ವಿನಿ ನದಿಯು ಕೊಡಗು ಜಿಲ್ಲೆಯ ಮಚಿಪಣ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ ೧,೩೫೦ ಮೀ ಎತ್ತರದಲ್ಲಿ ಜನಿಸುತ್ತದೆ.

ನಂತರ ಇವೆರಡೂ ನದಿಗಳು ಮಚಿಪಣದ ಬಳಿ ಒಟ್ಟ ಸೇರಿ ಕಾಸರಗೋಡು ಬಳಿ ಅರಬೀಸಮುದ್ರವನ್ನು ಸೇರುತ್ತವೆ. ಒಟ್ಟು ೧,೪೦೬ ಚ.ಕಿ.ಮೀ ಜಲಾನಯನ ಪ್ರದೇಶದಲ್ಲಿ ೮೩೬ ಚ.ಕಿ.ಮೀ ಪ್ರದೇಶ ಕರ್ನಾಟಕ ರಾಜ್ಯದಲ್ಲಿದೆ. ಉಳಿದ ಪ್ರದೇಶ ಕೇರಳ ರಾಜ್ಯದಲ್ಲಿದೆ.

**ಮೇಲ್ಮೈ ಜಲಸಂಪನ್ಮೂಲಗಳು:** ರಾಜ್ಯದಲ್ಲಿ ಅಂದಾಜುಪಡಿಸಿರುವ ವರ್ಷದ ಸರಾಸರಿ ನೀರಿನ ಹರಿವು ೧೦,೦೦೦ ಕೋಟಿ ಘನ ಮೀ.ಗಳು. ಇದರಲ್ಲಿ ೪,೦೦೦ ಕೋಟಿ ಘ.ಮೀ. ಅಂದರೆ ಶೇಕಡ ೪೦ ಭಾಗ ಪೂರ್ವಾಭಿಮುಖವಾಗಿ ಹರಿಯುವ ನದಿಗಳಿಂದಲೂ, ಉಳಿದ ಶೇಕಡ ೬೦ ಭಾಗ ಅಂದರೆ ೬,೦೦೦ ಕೋಟಿ ಘ.ಮೀ.ನಷ್ಟು ಕರಾವಳೀ ತೀರ ಪ್ರದೇಶದಿಂದ ಪಶ್ಚಿಮಗಾಮೀ ನದಿಗಳಿಂದಾಗಿ ಅರಬ್ಬೀ ಸಮುದ್ರಕ್ಕೆ ಸೇರುತ್ತದೆ. ದೇಶದಲ್ಲಿನ ಎಲ್ಲಾ ನದೀವ್ಯೂಹಗಳಿಂದ ವರ್ಷದಲ್ಲಿ ಹರಿಯುವ ನೀರು ೧,೭೦,೦೦೦ ಕೋಟಿ ಘ.ಮೀ. ಗಳಷ್ಟಾಗುತ್ತದೆ. ರಾಷ್ಟ್ರದ ಜಲೋತ್ಪತ್ತಿಯಲ್ಲಿ ಶೇಕಡ ಆರು ಭಾಗ ಕರ್ನಾಟಕದ ಪಾಲಿನದು. ಕರ್ನಾಟಕದ ಮೇಲ್ಮೈ ನೀರಿನ ಉತ್ಪತ್ತಿ ನೆರೆಯ ರಾಜ್ಯಗಳಿಗಿಂತ ಉತ್ತಮವಾಗಿದೆ. ಭಾರೀ, ಮಧ್ಯಮ ಮತ್ತು ಸಣ್ಣ ನೀರಾವರಿ ಸೇರಿದಂತೆ(ಮೇಲ್ಮೈ ಜಲ) ಸಂಚಿತ ನೀರಾವರಿ ಸಾಮರ್ಥ್ಯ ೨೦೦೮-೦೯ ರಲ್ಲಿದ್ದ ೩೪.೦೯ ಲಕ್ಷ ಹೆಕ್ಟೇರ್ ಗಿಂತ ೨೦೦೯-೨೦೧೦ ರ ಅಂತ್ಯಕ್ಕೆ ೩೪.೮೪ ಲಕ್ಷ ಹೆಕ್ಟೇರುಗಳಿಗೆ(ಅಂತರ್ಜಲ ಹೊರತುಪಡಿಸಿ) ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಈವರೆಗೆ ೪೭ ಪೂರ್ಣಗೊಂಡ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಒಟ್ಟು ೮.೯೬ ಲಕ್ಷ ಹೆಕ್ಟೇರುಗಳ ನೀರಾವರಿ ಕ್ಷೇತ್ರವನ್ನು ಸೃಷ್ಟಿಸಲಾಗಿದೆ. ಯೋಜನೆಯನ್ವಯ ೨೫ ಭಾರೀ ನೀರಾವರಿ ಮತ್ತು ೫೩ ಮಧ್ಯಮ ನೀರಾವರಿ ಯೋಜನೆಗಳು ಕಾರ್ಯಗತವಾಗುತ್ತಿವೆ. ಈ ಯೋಜನೆಗಳಿಂದ ಈವರೆಗೆ ೧೫.೩೨ ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

**ಅಂತರ್ಜಲ ಸಂಪನ್ಮೂಲಗಳು:** ಕರ್ನಾಟಕದಲ್ಲಿ ಅಂತರ್ಜಲವನ್ನು ತಲತಲಾಂತರದಿಂದ ತೆರೆದ ಬಾವಿಗಳನ್ನು ತಿಥಿಲೀಕೃತ ಪದರದಲ್ಲಿ ತೋಡಿ ಬಳಸಿಕೊಳ್ಳಲಾಗುತ್ತದೆ. ಮುಂದೆ ಶೀಘ್ರವಾಗಿ ಕೊರೆಯುವ ಬೈರಿಗೆ ಯಂತ್ರಗಳು ಬಳಕೆಗೆ ಬಂದಮೇಲೆ ಕೊಳವೆ ಬಾವಿಗಳನ್ನು ವ್ಯಾಪಕವಾಗಿ ಕೊರೆದು ಆಳ ವಲಯಗಳಲ್ಲಿ ಬಿರುಕು, ಛಿದ್ರಗಳಲ್ಲಿ ಸಂಗ್ರಹವಾದ ನೀರನ್ನು ಮೇಲೆತ್ತಲಾಗಿದೆ. ಅಂತರ್ಜಲ ಭಂಡಾರ ರೂಪಿತವಾಗುವುದು ಮಳೆ ನೀರಿನ ಮೂಲದಿಂದಲೇ. ಬಿದ್ದ ಮಳೆ ಮೇಲ್ಮೈನಿಂದ ಭೂಮಿಯ ಆಳಕ್ಕೆ ಜಿನುಗಿ ಮುಂದೆ ಅದು ಬಿರುಕು, ಛಿದ್ರಗಳಲ್ಲಿ ಶೇಖರಣೆಯಾಗಿ ಅಂತರ್ಜಲ ಭಂಡಾರವಾಗುತ್ತದೆ. ಭೂಮಿಯ ಆಳ ಭಾಗದಲ್ಲಿ ಶಿಥಿಲೀಕೃತವಾಗದ ಗಟ್ಟಿ ಶಿಲೆಗಳಿದ್ದು, ಶಿಥಿಲೀಕೃತ ಭಾಗದಲ್ಲಿ ಶೇಖರವಾದ ನೀರು ಕೆಳಗಿನ ಶಿಲೆಗಳ ಇಳಿಜಾರು ಅನುಸರಿಸಿ ಆ ದಿಕ್ಕಿನಲ್ಲಿ ಹರಿಯುತ್ತದೆ. ಬೆಟ್ಟದ ಏಣುಗಳಿಂದ ಹರಿದುಬಂದು ಕಣಿವೆಗಳಲ್ಲಿ ಅಂತರ್ಜಲ ಶೇಖರಣೆಯಾಗುತ್ತದೆ. ಅಂತರ್ಜಲವನ್ನು ಅದು ಮರುಪೂರಣವಾಗುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಎಳೆದರೆ ಅದನ್ನು ಮೀರೆಳೆತ ಎನ್ನುತ್ತಾರೆ. ನಿರಂತರವಾಗಿ ಅಂತರ್ಜಲ ಭಂಡಾರವನ್ನು ಮೇಲೆತ್ತಿದರೆ ಬಹುಕಾಲ ಅದು ಬಾಳಿಕೆಗೆ ಬರಲಾರದು.

ನಮ್ಮ ದೇಶದ ಅಂತರ್ಜಲ ಸಂಪನ್ಮೂಲದ (೨.೭ ಲಕ್ಷ ಮಿಲಿಯನ್ ಘನಮೀಟರು) ಶೇ.೪.೪ ಭಾಗ ಕರ್ನಾಟಕದಲ್ಲಿದೆ. ರಾಜ್ಯದಲ್ಲಿ ವಾರ್ಷಿಕ ಮರುಪೂರಣದ ಪ್ರಮಾಣ ೧೭,೯೯,೫೯೧ ಹೆಕ್ಟೇರು ಮೀಟರು ಎಂದು ಅಂದಾಜು ಮಾಡಲಾಗಿದೆ. ೩೧,೩,೯೯೧ರಲ್ಲಿದ್ದಂತೆ ಒಟ್ಟಾರೆ ವಾರ್ಷಿಕ ಅಂತರ್ಜಲದ ಬಳಕೆಯ ಪ್ರಮಾಣ ೫,೭೬,೨೧ ಹೆಕ್ಟೇರು ಮೀಟರು ಎಂದು ಅಂದಾಜು. ಮಲೆನಾಡು ಪ್ರಾಂತ್ಯದಲ್ಲಿ ವಾರ್ಷಿಕ ಮರುಪೂರಣದ ಪ್ರಮಾಣ ಅಲ್ಲಿನ ವಾರ್ಷಿಕ ಮಳೆ ಪ್ರಮಾಣದ ಶೇ. ೧೦ ಭಾಗ. ಯಾವ ಪ್ರಾಂತ್ಯದಲ್ಲಿ ವಾರ್ಷಿಕ ಮಳೆಯ ಪ್ರಮಾಣ ೭೦೦ ಮಿಲಿ ಮೀಟರಿಗಿಂತ ಕಡಿಮೆಯಿದೆಯೋ ಅಂಥ ಕಡೆ ಬಾಷ್ಪೀಕರಣದ ದರವೂ ಹೆಚ್ಚು, ಮರುಪೂರಣದ ಪ್ರಮಾಣ ಶೇ.೫ಕ್ಕಿಂತ ಕಡಿಮೆ. ರಾಜ್ಯದ ಬೇರೆ ಭಾಗಗಳಲ್ಲಿ ಮರುಪೂರಣದ ಪ್ರಮಾಣ ಶೇ. ೫ರಿಂದ ೧೦ ಎಂದು ಅಂದಾಜು ಮಾಡಲಾಗಿದೆ. ಕಿರು ನೀರಾವರಿ

ಗಣತಿ ೧೯೮೬-೮೭ರ ಪ್ರಕಾರ ರಾಜ್ಯದಲ್ಲಿ ೩.೫ ಲಕ್ಷಕ್ಕಿಂತ ಹೆಚ್ಚು ತೆರೆದ ತೋಡು ಬಾವಿಗಳಿದ್ದವು. ಇಂಥ ಬಾವಿಗಳಲ್ಲಿ ಮೇಲ್ಮೈನಿಂದ ನೀರಿನ ಆಳ ಕಣಿವೆಗಳಲ್ಲಿ ೨ರಿಂದ ೩.೫ ಮೀಟರು; ಇನ್ನು ಕೆಲವೆಡೆ ೧೮ ಮೀಟರುವರೆಗೂ ಇರುವುದು ಕಂಡುಬಂದಿದೆ. ಈ ಬಗೆಯ ಬಹುತೇಕ ಬಾವಿಗಳು ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಇವುಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಬಾವಿಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿಲ್ಲ. ಮೇಲಿನ ಗಣತಿಯಂತೆ ೩೮,೮೯ ಕಡಿಮೆ ಆಳದ ಬಾವಿಗಳು, ೬,೬೭೩ ಆಳ ಕೊಳವೆ ಬಾವಿಗಳಿದ್ದವು. ಇತ್ತೀಚಿನ ವರ್ಷಗಳಲ್ಲಿ ಕೊಳವೆ ಬಾವಿಗಳ ಪ್ರಾಮುಖ್ಯ ಹೆಚ್ಚುತ್ತಿದೆ. ಸಾಮಾನ್ಯವಾಗಿ ಇಂಥ ಕೊಳವೆ ಬಾವಿಗಳ ವ್ಯಾಸ ೧೫೦ ಮಿಲಿ ಮೀಟರುಗಳಷ್ಟಿದ್ದು, ೩೦ರಿಂದ ೬೦ ಮೀಟರ್ ಆಳದವರೆಗೆ ಕೊರೆಯಲಾಗಿರುತ್ತದೆ. ಕೋಲಾರ, ಬಾಗಲಕೋಟೆ ಬಿಜಾಪುರ ಜಿಲ್ಲೆಗಳಲ್ಲಿ ಅಧಿಕವಾಗಿ ಲಭ್ಯವಿರುವ ಎಲ್ಲ ಅಂತರ್ಜಲ ಭಂಡಾರವನ್ನು ಬಳಸಿಕೊಳ್ಳಲಾಗಿದೆ. ೧೯೯೩-೯೪ರಲ್ಲಿ ೧,೬೯೪,೭೨೮ ಕೊಳವೆ ಬಾವಿಗಳನ್ನು, ೪,೭೦,೯೮೧ ಬಾವಿಗಳನ್ನೂ ನೀರಾವರಿಗಾಗಿ ಬಳಸಿಕೊಳ್ಳಲಾಗಿತ್ತು. ೩,೦೩,೬೯೮ ಬಾವಿಗಳನ್ನು ಗೃಹ ಬಳಕೆಗೆ ಉಪಯೋಗಿಸಿಕೊಳ್ಳಲಾಗಿತ್ತು. ೭೪,೭೩೦ ಬಾವಿಗಳು ನಿರುಪಯುಕ್ತವಾಗಿದ್ದವು.

## ವಾಯುಗುಣ

ರಾಜ್ಯದಲ್ಲಿ ಮೂರು ಮುಖ್ಯ ವಿಧವಾದ ವಾಯಗುಣದ ವೈವಿಧ್ಯತೆಯನ್ನು ಕಾಣಬಹುದು. ಪವನ ವೈಜ್ಞಾನಿಕ ಉದ್ದೇಶಗಳಿಗಾಗಿ ಇಡೀ ರಾಜ್ಯವನ್ನು ಮೂರು ಉಪ ವಿಭಾಗಗಳಾಗಿ ವಿಂಗಡಿಸಿದೆ. ಅವೆಂದರೆ

ಅ. ಕಡಲತೀರದ ಕರ್ನಾಟಕ (ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು)

ಆ. ಉತ್ತರ ಒಳನಾಡ ಕರ್ನಾಟಕ (ಬೆಳಗಾವಿ, ಬೀದರ್, ಬಿಜಾಪುರ, ಬಾಗಲಕೋಟೆ, ಧಾರವಾದ. ಗದಗ,. ಹಾವೇರಿ, ಗುಲ್ಬರ್ಗ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು)

ಇ. ದಕ್ಷಿಣ ಒಳನಾಡ ಕರ್ನಾಟಕ (ಉಳಿದ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೊಡಗು, ಹಾಸನ, ಕೋಲಾರ, ಮೈಸೂರು, ಚಾಮರಾಜನಗರ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳು)

ಉಷ್ಣವಲಯದ ಮಾನ್ಸೂನ್ ಹವಾಗುಣ ಇಡೀ ಕಡಲ ತೀರ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳನ್ನು ಒಳಗೊಳ್ಳುತ್ತದೆ. ಈ ಪ್ರಾಂತ್ಯದ ಹವಾಗುಣ ಅತ್ಯಂತ ಶಾಖದಿಂದ ಕೂಡಿರುತ್ತದೆ. ಮಾನ್ಸೂನ್ ಕಾಲದಲ್ಲಿ ಅಂದರೆ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಅಧಿಕ ಮಳೆಬೀಳುತ್ತದೆ. ಮಾನ್ಸೂನ್ ಕಾಲದಲ್ಲಿ ರಾಜ್ಯದ ದಕ್ಷಿಣಾರ್ಧ ಭಾಗ ಬಿಸಿಯಾಗಿರುತ್ತದೆ. ಋತುಮಾನಕ್ಕನುಗುಣವಾಗಿ ಶುಷ್ಕ ಉಷ್ಣ ಪ್ರದೇಶದ ಸವನ್ನಾ ಹವಾಗುಣವನ್ನು ಅನುಭವಿಸುತ್ತದೆ. ಇದೇ ಕಾಲಕ್ಕೆ ಉತ್ತರಾರ್ಧ ಭಾಗ ಬಿಸಿಯಾಗಿ ಅರೆಶುಷ್ಕ, ಉಷ್ಣಪ್ರದೇಶದ ಸ್ಟೆಪೆ ವಿಧದ ಹವಾಗುಣವನ್ನು ಅನುಭವಿಸುತ್ತದೆ. ರಾಜ್ಯದ ಹವಾಗುಣ ಋತುಮಾನಕ್ಕನುಗುಣವಾಗಿ ವ್ಯತ್ಯಯವಾಗುತ್ತದೆ. ಜನವರಿಯಿಂದ ಫೆಬ್ರವರಿ ತಿಂಗಳವರೆಗೆ ಚಳಿಗಾಲ, ಇದರ ಹಿಂದೆಯೆ ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಕಾಲ ಅನುಸರಿಸಿ ಬರುತ್ತದೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಮಾನ್ಸೂನ್ ನಂತರದ ಋತುಮಾನವಿರುತ್ತದೆ. ಅಕ್ಟೋಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ರಾಜ್ಯದ ಅಗ್ನೇಯ ಭಾಗದಲ್ಲಿ ಈಶಾನ್ಯ ಮಾನ್ಸೂನ್‌ಗೆ ಸಂಬಂಧಿಸಿದಂತೆ ಕೆಲವೊಮ್ಮೆ ಬೀಳುವ ಮಳೆಯನ್ನು ಹೊರತುಪಡಿಸಿದರೆ ಅಕ್ಟೋಬರ್ ತಿಂಗಳಿನಿಂದ ಮಾರ್ಚ್ ತಿಂಗಳವರೆಗಿನ ಅವಧಿ ಅಂದರೆ ಮಾನ್ಸೂನ್ ನಂತರದ ಮತ್ತು ಚಳಿಗಾಲದ ಋತು ಸೇರಿದಂತೆ ಈ ಅವಧಿ ರಾಜ್ಯಾದ್ಯಂತ ಹಿತಕರವಾದ ಹವಾಗುಣದಿಂದ ಕೂಡಿರುತ್ತದೆ. ಏಪ್ರಿಲ್

ಮತ್ತು ಮೇ ತಿಂಗಳಿನಲ್ಲಿ ಬಿಸಿಲು ಹೆಚ್ಚು. ಶುಷ್ಕ ವಾತಾವರಣವಿದ್ದು ಸಾಮಾನ್ಯವಾಗಿ ಅಹಿತಕರವಾಗಿರುತ್ತದೆ. ಅಧಿಕ ಆರ್ದ್ರತೆ ಮತ್ತು ಉಷ್ಣತೆಯಿಂದಾಗಿ ಜೂನ್ ತಿಂಗಳಿನಲ್ಲಿ ಹವಾಗುಣ ಬಿರುಸಾಗಿರುತ್ತದೆ. ಮುಂದಿನ ಮೂರು ತಿಂಗಳು (ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್) ಇದ್ದುದರಲ್ಲಿ ಹಿತಕರವಾಗಿರುತ್ತದೆ. ಏಕೆಂದರೆ ಈ ಅವಧಿಯಲ್ಲಿ ದಿನದ ಉಷ್ಣತೆ ಇಳಿದಿರುತ್ತದೆ, ಆದರೆ ಆರ್ದ್ರತೆ ಹೆಚ್ಚಿನ ಪ್ರಮಾಣದಲ್ಲೇ ಇರುತ್ತದೆ

## ಉಷ್ಣತೆ

ತೀರ ಪ್ರದೇಶ ಮತ್ತು ಉನ್ನತ ಪ್ರಸ್ಥಭೂಮಿಯನ್ನು ಹೊರತುಪಡಿಸಿದರೆ ರಾಜ್ಯಾದ್ಯಂತ ಹಗಲಿನ ಮತ್ತು ಇರುಳಿನ ಉಷ್ಣತೆ ಹೆಚ್ಚೂ ಕಡಿಮೆ ಏಕಪ್ರಕಾರವಾಗಿರುತ್ತದೆ. ರಾಜ್ಯದ ಆಗ್ನೇಯದ ಕಡೆಗೆ ಸಾಮಾನ್ಯವಾಗಿ ಇಳಿಮುಖವಾಗಿರುತ್ತದೆ. ಏಕೆಂದರೆ ಆ ಭಾಗ ಉನ್ನತ ಪ್ರದೇಶವಾಗಿದೆ, ಹಾಗೆಯೇ ಉನ್ನತ ಮಟ್ಟದ ನೆಲೆಗಳಲ್ಲಿ ಉಷ್ಣತೆ ಇನ್ನೂ ಕೆಳಗಿಳಿಯುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳು ಹೆಚ್ಚು ಬಿಸಿಯಾಗಿರುತ್ತವೆ. ಮೇ ತಿಂಗಳಲ್ಲಿ ಮಾಧ್ಯ (ಮೀನ್) ಉಷ್ಣತೆ, ರಾಜ್ಯದ ಈಶಾನ್ಯ ಮೂಲೆಗಳಲ್ಲಿ ೪೦ ಡಿಗ್ರಿ ಸೆಂ. ವರೆಗೆ ಏರುತ್ತದೆ. ಆಗ್ನೇಯ ಭಾಗದಲ್ಲಿ ಪಶ್ಚಿಮಘಟ್ಟ ಮತ್ತು ತೀರ ಪ್ರದೇಶಗಳೆಡೆಯಲ್ಲಿ ಇಳಿಮುಖವಾಗುತ್ತದೆ. ೧೯೨೮ರ ಮೇ ತಿಂಗಳ ೨೩ರಂದು ರಾಯಚೂರಿನಲ್ಲಿ ದಾಖಲಾದ ಉಷ್ಣತೆ ೪೫.೬ ಡಿಗ್ರಿ ಸೆಂ. ಇದು ಯಾವುದೇ ಬಿಡಿ ಕೇಂದ್ರಗಳಲ್ಲಿ ದಾಖಲಿಸಿದ ಅತ್ಯುನ್ನತ ಉಷ್ಣತೆ. ಅತ್ಯಚ್ಚ ಉಷ್ಣತಾ ತಿಂಗಳುಗಳಲ್ಲಿ ದಾಖಲೆಯಾಗಿರುವ ಸಾಧಾರಣ ಉಷ್ಣತೆಗಿಂತ ಇದು ೬ ಡಿಗ್ರಿ ಸೆಂ. ಹೆಚ್ಚು. ಡಿಸೆಂಬರ್ ಮತ್ತು ಜನವರಿ ತಿಂಗಳು ಶೈತ್ಯದ ತಿಂಗಳುಗಳಾಗಿವೆ. ಬೀದರ್‌ನಲ್ಲಿ ೧೯೧೮ರಲ್ಲಿ ದಾಖಲಿಸಿದ ೨.೮ ಸೆಂ. ಉಷ್ಣತೆಯೇ ಬಿಡಿ ಕೇಂದ್ರದಲ್ಲಿ ದಾಖಲಾದ ಕನಿಷ್ಠ ಉಷ್ಣತೆ.

**ಕೆಲವು ಆಯ್ದ ಕೇಂದ್ರಗಳಲ್ಲಿ ದಾಖಲಿಸಿದ ಉಷ್ಣತೆಯನ್ನು ಮುಂದೆ ಕೋಷ್ಟಕದಲ್ಲಿ ನೀಡಲಾಗಿದೆ.**

| ಉಪವಿಭಾಗ | ಮಾಧ್ಯಮ ದಿನವಹಿ ಉಷ್ಣತೆ ಡಿಗ್ರಿ ಸೆಂ. | |
|---|---|---|
| | ಗರಿಷ್ಠ | ಕನಿಷ್ಠ |
| **ಕರ್ನಾಟಕದ ಒಳನಾಡು** | | |
| ಅ. ಉತ್ತರ | ೩೨.೦ | ೨೯.೭ |
| ಆ. ದಕ್ಷಿಣ | ೨೦.೪ | ೧೯.೨ |
| **ಕರ್ನಾಟಕದ ಕರಾವಳಿ** | ೩೦.೭ | ೨೩.೩ |

## ಮಳೆ

ರಾಜ್ಯದ ವಾರ್ಷಿಕ ಮಳೆ ಪ್ರಮಾಣ ಸುಮಾರು ೫೦ ರಿಂದ ೩,೫೦೦ ಸೆಂ.ಮೀ. ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಗುಲಬರ್ಗಾದ ದಕ್ಷಿಣಾರ್ಧ ಭಾಗದಲ್ಲಿ ಅತಿ ಕನಿಷ್ಠ ಅಂದರೆ ೫೦ ರಿಂದ ೬೦ ಸೆಂ, ಮೀಟರ್ ಮಳೆಯಾಗುತ್ತದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಗಣನೀಯ ಪ್ರಮಾಣದ ಮಳೆಬೀಳುತ್ತದೆ. ತೀರ ಪ್ರದೇಶದಲ್ಲಿ ಅದು ಗರಿಷ್ಠ ಮಟ್ಟ ಮುಟ್ಟುತ್ತದೆ. ನೈಋತ್ಯ ಮಾನ್ಸೂನ್ ರಾಜ್ಯಕ್ಕೆ ಮಳೆ ತರುವ ಪ್ರಧಾನ ಮಾನ್ಸೂನ್ ಆಗಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಶೇ. ೮೦ರಷ್ಟು ಮಳೆಯಾಗುತ್ತದೆ. ಚಳಿಗಾಲದಲ್ಲಿ (ಜನವರಿಯಿಂದ ಫೆಬ್ರವರಿವರೆಗೆ) ರಾಜ್ಯದಲ್ಲಿ ವಾರ್ಷಿಕ ಮಳೆ ಬೀಳುವ ಒಟ್ಟು ಪ್ರಮಾಣದ ಶೇ.೧ರಷ್ಟು ಮಳೆಯಾಗುತ್ತದೆ. ಬೇಸಗೆಯಲ್ಲಿ (ಮಾರ್ಚ್ ತಿಂಗಳಿಂದ ಮೇ ತಿಂಗಳವರೆಗೆ) ಶೇ.೭ ಭಾಗ ಮಳೆಬೀಳುತ್ತದೆ. ಮಾನ್ಸೂನ್ ನಂತರದಲ್ಲಿ ಶೇ.೧೨ ಭಾಗದಷ್ಟು ಮಳೆಬೀಳುತ್ತದೆ.

## ರಾಜ್ಯದ ಕೆಲವು ಆಯ್ದ ಕೇಂದ್ರಗಳಲ್ಲಿ ದಾಖಲಿಸಿದ ಉಷ್ಣತೆ ( ಡಿಗ್ರಿಸೆಲ್ಸಿಯಸ್ ಗಳಲ್ಲಿ)

| ಕ್ರ. ಸಂ. | ವೀಕ್ಷಣಾಲಯದ ನೆಲೆ | ೨೦೦೨ | | ೨೦೦೩ | | ೨೦೦೪ | |
|---|---|---|---|---|---|---|---|
| | | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ೧ | ಬೆಂಗಳೂರು ಸಿ.ಓ | ೩೬.೫ | ೧೨.೫ | ೩೮.೧ | ೧೩.೦ | ೩೭.೦ | ೧೩.೦ |
| ೨ | ಬೆಂಗಳೂರು ಎಚ್.ಎ.ಎಲ್ | ೩೭.೧ | ೧೦.೦ | ೩೭.೩ | ೧೨.೦ | ೩೬.೧ | ೧೧.೬ |
| ೩ | ಯಲಹಂಕ, ಐ.ಎ.ಎಫ್ | – | – | – | – | – | – |
| ೪ | ಬೆಳಗಾವಿ ನಗರ | ೩೯.೪ | ೧೧.೬ | ೩೮.೯ | ೧೨.೪ | ೩೯.೯ | ೧೩.೨ |
| ೫ | ಸಾಂಬ್ರೆ(ಬೆಳಗಾವಿ) | ೪೦.೦ | ೮.೯ | ೩೮.೦ | ೯.೫ | ೩೯.೪ | ೯.೨ |
| ೬ | ಬಳ್ಳಾರಿ | ೪೨.೬ | ೧೩.೦ | ೪೩.೦ | ೧೩.೯ | ೪೩.೦ | ೧೦.೬ |
| ೭ | ಬೀದರ್ | ೪೮.೮* | ೧೧.೨* | ೪೨.೮ | ೧೨.೪ | ೪೧.೪ | ೧೧.೬ |
| ೮ | ಬೀದರ್, ಐ.ಎ.ಎಫ್ | – | – | – | – | – | – |
| ೯ | ಬಿಜಾಪುರ | ೪೧.೬ | ೧೨.೮ | ೪೨.೪ | ೧೩.೮ | ೪೨.೨ | ೧೪.೦ |
| ೧೦ | ಬಾಗಲಕೋಟೆ | ೧.೦೧ | ೧.೦ | ೦.೬ | ೧೧.೮ | ೪೦.೩ | ೧೧.೦ |
| ೧೧ | ಬಾಳೇಹೊನ್ನೂರು | ೩೫.೨ | ೧.೦೦ | ೩೪.೭ | ೧೧.೦ | ೩೭.೦ | ೧೧.೦ |
| ೧೨ | ಚಿಕ್ಕಮಗಳೂರು | ೩೬.೦ | ೧೧.೬ | ೩೬.೨ | ೧೨.೬ | ೩೫.೫ | ೧೨.೧ |
| ೧೩ | ಚಿತ್ರದುರ್ಗ | ೩೮.೯ | ೧೨.೬ | ೩೯.೩ | ೧೨.೬ | ೩೯.೪ | ೧೯.೧ |
| ೧೪ | ಬಜ್ಪೆ | ೮.೨ | ೧೮.೨ | ೭.೨ | ೧೭.೬ | ೩೭.೮ | ೧೮.೬ |
| ೧೫ | ಪಣಂಬೂರು, ಎಂ.ಎಚ್.ಪಿ | ೩೭.೨ | ೧೮.೨ | ೩೫.೮ | ೧೮.೨ | ೩೫.೯ | ೧೮.೦ |
| ೧೬ | ಗದಗ | ೩೯.೬ | ೧೨.೦* | ೩೯.೮ | ೧೨.೪ | ೪೦.೪ | ೧೧.೪ |
| ೧೭ | ಗುಲಬರ್ಗಾ | ೪೪.೦ | ೧೦.೦ | ೪೪.೪ | ೯.೮ | ೪೨.೮ | ೯.೪ |
| ೧೮ | ಹಾಸನ | ೩೫.೮ | ೧೦.೪ | ೩೫.೨ | ೧೧.೬ | ೩೫.೦ | ೧೧.೬ |
| ೧೯ | ಮಡಿಕೇರಿ | ೩೩.೦ | ೫.೮ | ೩೭.೧ | ೫.೫ | ೩೪.೦ | ೭.೩ |
| ೨೦ | ಕೆ.ಜಿ.ಎಫ್ | – | – | – | – | – | – |
| ೨೧ | ಮಂಡ್ಯ | ೩೭.೩ | ೧೦.೫ | ೩೯.೧ | ೧೨.೮ | ೩೮.೨ | ೧೨.೨ |
| ೨೨ | ಮೈಸೂರು | ೩೫.೬ | ೧೩.೨ | ೩೭.೬ | ೧೪.೦ | ೩೬.೮ | ೧೨.೮ |
| ೨೩ | ರಾಯಚೂರು | ೪೩.೨ | ೧೫.೦ | ೪೪.೦ | ೧೧.೪ | ೪೩.೫ | ೧೩.೦ |
| ೨೪ | ಆಗುಂಬೆ | ೩೫.೪ | ೪.೦ | ೩೪.೫ | ೫.೦ | ೩೪.೮ | ೪.೪ |
| ೨೫ | ಶಿವಮೊಗ್ಗ | ೪೪.೦* | ೧೩.೦ | ೩೯.೪ | ೧೨.೨ | ೩೯.೧ | ೧೨.೧ |
| ೨೬ | ತುಮಕೂರು | – | – | – | – | – | – |
| ೨೭ | ಹೊನ್ನಾವರ | ೩೬.೦ | ೧೬.೪ | ೩೬.೫ | ೧೬.೨ | ೩೮.೫ | ೧೭.೦ |
| ೨೮ | ಕಾರವಾರ | ೩೬.೮ | ೧೬.೩ | ೩೫.೬ | ೧೬.೨ | ೩೮.೪ | ೧೬.೭ |
| ೨೯ | ಶಿರಾಳಿ | ೩೬.೯ | ೧೮.೫ | ೩೬.೫ | ೧೮.೦ | ೩೬.೦ | ೧೮.೦ |

ಮೂಲ: ಭಾರತೀಯ ಪವಮಾನ ಇಲಾಖೆ

ನೈಋತ್ಯ ಮಾನ್ಸೂನ್ ಜೂನ್ ೧ರ ಹೊತ್ತಿಗೆ ಸಾಮಾನ್ಯವಾಗಿ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಣಿಸಿಕೊಂಡು ಜೂನ್ ೧೦ರ ಹೊತ್ತಿಗೆ ಇಡೀ ರಾಜ್ಯವನ್ನೇ ಆವರಿಸುತ್ತದೆ. ಜುಲೈ ಮತ್ತು ಆಗಸ್ಟ್ ತಿಂಗಳುಗಳು ಮಳೆ ತಿಂಗಳುಗಳು. ಕ್ರಮೇಣ ಶೇ. ೩೦ ಮತ್ತು ಶೇ. ೧೮ ಭಾಗ ಮಳೆ ತರುತ್ತದೆ. ಈ ಪ್ರತಿಯೊಂದು ತಿಂಗಳೂ ಕರಾವಳಿ ಕರ್ನಾಟಕದಲ್ಲಿ ೨೬ ಮಳೆ ದಿನಗಳಿದ್ದು (ದಿನವಹಿ ಕನಿಷ್ಠ ೨.೫ ಮಿಲಿ ಮೀಟರಿನಷ್ಟು ಮಳೆ), ಒಳನಾಡಿನಲ್ಲಿ ೮ರಿಂದ ೧೧ ಮಳೆ ದಿನಗಳಿರುತ್ತವೆ.ನೈಋತ್ಯ ಮಾನ್ಸೂನ್ ಉತ್ತರ ಭಾಗದಿಂದ ಅಕ್ಟೋಬರ್ ಎರಡನೇ ವಾರ ಹಿಂದೆ ಸರಿಯಲು ಪ್ರಾರಂಭಿಸಿ ಅಕ್ಟೋಬರ್ ೧೫ರ ಹೊತ್ತಿಗೆ ಇಡೀ ರಾಜ್ಯದಿಂದ ಅದು ಸಂಪೂರ್ಣವಾಗಿ ನಿಷ್ಕ್ರಮಿಸುತ್ತದೆ.

ಮಾನ್ಸೂನ್ ಮಳೆಯ ಸೆಳೆತದ ಹಿನ್ಸರಿತ ಅಂದರೆ ಈಶಾನ್ಯ ಮಾನ್ಸೂನ್ (ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ) ಇಡೀ ದಕ್ಷಿಣ ಕರ್ನಾಟಕದ ಒಳಭಾಗದ ಮೇಲೆ ಪ್ರಭಾವ ಬೀರುತ್ತದೆ. ಈ ಪ್ರಾಂತ್ಯದಲ್ಲಿ ಈ ಅವಧಿಯಲ್ಲಿ ಬೀಳುವ ಒಟ್ಟು ಪ್ರಮಾಣದ ಶೇ. ೩೦ಭಾಗ ಮಳೆ ಇದರಿಂದಲೇ ಆಗುತ್ತದೆ. ಭಾರತದಲ್ಲಿ ಸ್ಥಾಪಿಸಿರುವ ಹದಿನಾಲ್ಕು ಬೃಹತ್ ಮಳೆಮಾಪನ ಕೇಂದ್ರಗಳ ಪೈಕಿ ಅಂದರೆ ವಾರ್ಷಿಕ ೫೦೦ ಸೆಂ. ಮೀ. ಗೂ ಹೆಚ್ಚು ಮಳೆಬೀಳುವ ಜಾಗದಲ್ಲಿ ಕರ್ನಾಟಕದಲ್ಲೇ ನಾಲ್ಕು ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವೆಂದರೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಆಗುಂಬೆ (ವಾರ್ಷಿಕ ಮಳೆ ೮೨೮ ಸೆಂ.ಮೀ), ಕೊಡಗು ಜಿಲ್ಲೆಯ ಭಾಗಮಂಡಲ (೬೦೩ ಸೆಂ.ಮೀ), ಪುಲ್ಲಿಂಗೋತ್ (೫೯೪ ಸೆಂ.ಮೀ) ಮತ್ತು ಮಾಕುಟ್ಟ (೫೦೫ ಸೆಂ.ಮೀ). ಆಗುಂಬೆಯನ್ನು ದಕ್ಷಿಣ ಭಾರತದ ಚಿರಾಪುಂಜಿ ಎಂದೇ ಕರೆಯಲಾಗುತ್ತದೆ. ಜಿಲ್ಲಾವಾರು ಮಾಸಿಕ, ಋತುಮಾನ ಮತ್ತು ವಾರ್ಷಿಕ ಮಳೆಬೀಳುವ (ಮಿಲಿಮೀಟರ್), ತಾಲೂಕು ಮುಖ್ಯ ಕೇಂದ್ರಗಳ (೧೯೦೧–೧೯೭೦) ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ)

### ಸಾಮಾನ್ಯ ಮತ್ತು ನೈಜ ಸರಾಸರಿ ಮಳೆ ಬೀಳುವ ಪ್ರಮಾಣ

(ಮಿ.ಮೀ. ಗಳಲ್ಲಿ)

| ಋತುಮಾನ | | | | | |
|---|---|---|---|---|---|
| ವರ್ಷ | ಚಳಿಗಾಲ (ಜನವರಿ–ಫೆಬ್ರವರಿ) | ಬೇಸಿಗೆಗಾಲ (ಮಾರ್ಚ್–ಮೇ) | ನೈಋತ್ಯ ಮಾನ್ಸೂನ್ (ಜೂನ್–ಸೆಪ್ಟೆಂಬರ್) | ಈಶಾನ್ಯ ಮಾನ್ಸೂನ್ (ಅಕ್ಟೋಬರ್–ಡಿಸೆಂಬರ್) | ಒಟ್ಟು |
| ಸಾಧಾರಣ ಮಳೆ (೧೯೦೧–೭೦) | ೫ | ೧೩೮ | ೮೪೬ | ೨೦೦ | ೧,೧೮೯ |
| ನೈಜ ಸರಾಸರಿ | | | | | |
| ೧೯೯೭ | ೪ | ೮೫ | ೧,೧೪೭ | ೨೫೪ | ೧,೪೯೦ |
| ೧೯೯೮ | – | ೮೦ | ೯೫೩ | ೨೫೨ | ೧,೨೬೫ |
| ೧೯೯೯ | ೪ | ೧೭೦ | ೯೯೦ | ೨೬೭ | ೧,೪೩೦ |
| ೨೦೦೦ | ೧೨ | ೧೦೩ | ೧೧೨೦ | ೧೮೬ | ೧,೪೨೦ |
| ೨೦೦೧ | ೨ | ೧೦೬ | ೯೨೭ | ೧೮೯ | ೧,೧೯೪ |
| ೨೦೦೨ | ೧೨ | ೯೭ | ೭೨೫ | ೧೯೯ | ೧,೦೩೩ |
| ೨೦೦೩ | ೩ | ೫೮ | ೮೦೮ | ೧೬೭ | ೧,೦೩೬ |
| ೨೦೦೪ | ೧ | ೨೨೯ | ೯೨೯ | ೧೧೧ | ೧,೨೭೧ |
| ೨೦೦೫ | ೭ | ೧೨೭ | ೨೧೬ | ೨೩೪ | ೧,೫೮೪ |

ಕರ್ನಾಟಕದಲ್ಲಿ ವನ್ಯಜೀವಿಗಳು ಸಮೃದ್ಧವಾಗಿವೆ. ನೈಸರ್ಗಿಕ ಜೀವಿ ಪರಂಪರೆಗಳೆನ್ನಬಹುದಾದ ಸಂಪನ್ಮೂಲವನ್ನು ಹೊಂದಿರುವ ಕರ್ನಾಟಕದ ಏಕೈಕ ತಾಣವೆಂದರೆ ಪಶ್ಚಿಮಘಟ್ಟಗಳ ಬೆಟ್ಟಸರಣಿ. ಸ್ಥಳೀಯ ಪ್ರಾಣಿವರ್ಗದ ಆಶ್ರಯದ ಕಟ್ಟಕಡೆಯ ತಾಣ ಇಂದು ತಲೆ ಎತ್ತುತ್ತಿರುವ ಅನೇಕ ಜಲವಿದ್ಯುತ್ ಮತ್ತು ನೀರಾವರಿ

ಯೋಜನೆಗಳಿಂದ, ಗಣಿಗಾರಿಕೆಯಿಂದಾಗಿ, ತೀವ್ರವಾಗಿ ಹೆಚ್ಚುತ್ತಿರುವ ಅರಣ್ಯನಾಶ, ತೋಟ ಬೆಳೆಯಲು ಮತ್ತು ಕೃಷಿ ಮಾಡಲು ತೋರುತ್ತಿರುವ ನೆಲದಾಹದಿಂದಾಗಿ ತ್ವರಿತಗತಿಯಲ್ಲಿ ಬಲಿಯಾಗುತ್ತಿದೆ.

## ವನ್ಯಪ್ರಾಣಿ ಸಂಪತ್ತು

ಕರ್ನಾಟಕದಲ್ಲಿ ಕಂಡುಬರುವ ವನ್ಯಜೀವಿಗಳೆಂದರೆ ಆನೆ, ಹುಲಿ, ಚಿರತೆ, ಕಾಟಿ, ಸಾಂಬಾರ್ ಜಿಂಕೆ, ಜಿಂಕೆ ಅಥವಾ ಚುಕ್ಕೆ ಜಿಂಕೆ, ಎರಳೆ, ಮಕ್ಯಾಕ್ ಕೋತಿ, ಪುನುಗು ಬೆಕ್ಕು, ಸಾಮಾನ್ಯ ಕಾಡುಪಾಪ, ನೀಳ ಕಾಡುಪಾಪ, ಕರಡಿ, ಕೆನ್ನಾಯಿಗಳು, ಪಟ್ಟೆ ಕಿರುಬ, ಹೊಂಬಣ್ಣದ ಗುಳ್ಳೆನರಿ. ಪಕ್ಷಿಗಳು: ಇಲ್ಲಿ ಕಂಡುಬಂದಿರುವ ಕೆಲವು ಪಕ್ಷಿಗಳೆಂದರೆ ದೊಡ್ಡ ಮಂಗಟ್ಟೆ ಹಕ್ಕಿ, ದಾಸಮಂಗಟ್ಟೆ ಹಕ್ಕಿ, ಶ್ರೀಲಂಕ ಮಂಡೂಕಮುಖ, ಬಕ, ಬಾತು, ಹದ್ದು ಸೆಳೆವ, ಲಾವುಗೆ, ಕೌಜುಗ, ಟಿಟ್ಟಿಭ, ಮರಳುಪೀಪಿ, ಪಾರಿವಾಳ, ಕಪೋತ, ಗಿಳಿ, ಕುಕ್ಕು, ಗೂಬೆ, ನತ್ತಿಂಗ, ವೇಗಿ. ಮಿಂಚುಳ್ಳಿ, ಜೇನುಕುಟುರ, ರಾಟವಾಳಗಲು ಇತ್ಯಾದಿ.

**ವೃಕ್ಷಗಳು:** ಕ್ಯಾಲೋಫಿಲಂ ಟೊಮೆಂಟೋಸ (ಸಿರುಪೊನ್ನೆ, ಪೊನ್ನೆ), ಕ್ಯಾಲೋಫಿಲಂ ವಿಟಿಯೇನಂ (ಹೊಳೆಹೊನ್ನೆ). ಗಾರ್ಸಿನಾ ಕಾಂಬೋಜಿಯ (ಮುರುಗ), ಗಾರ್ಸಿನಾ ಮೊರೆಲ್ಲ (ಅರಸಿನ ಗುರ್ಗಿ), ಆಲ್ಸ್ಟೋನಿಯ ಸ್ಕೊಲಾರಿಸ್ (ಮದ್ದಾಲೆ), ಫ್ಲಾಕೋರ್ಟಿಯ ಮಾಂಟಾನ (ಹಣ್ಣು ಸಂಪಿಗೆ), ಆರ್ಟೋ ಕಾರ್ಪಸ್ ಹಿರ್ಸುಟಸ್ (ಹೆಬ್ಬಲಸು), ಆರ್ಟೋ ಕಾರ್ಪಸ್ ಲಕೂಷ (ವಾಟೆಹುಳಿ), ಸಿನಮೋಮಮ್ ಝ್ಯುಲಾನಿಕಮ್ (ದಾಲ್ಚಿನ್ನಿ), ಗ್ರೇವಿಯ ಟಿಲೆಪೋಲಿಯ (ದಡಸಾಲ), ಸಂಟಾಲಮ್ ಆಲ್ಬಮ್ (ಶ್ರೀಗಂಧ), ಷೋರಿಯ ಟಲೂರ (ಜಾಲಗಿರಿ), ಎಂಬ್ಲಿಕ ಅಫಿಷಿನ್ಯಾಲಿಸ್ (ನೆಲ್ಲಿ), ವೈಟೆಕ್ಸ್ ಆಲ್ಟಿಸಿಮ (ನವಿಲಾಡೆ) ಮತ್ತು ರೈಟಿಯಾ ಟಿಂಗಟೋರಿಯ.ಆವಾಸನಾಶ, ಮನುಷ್ಯ–ವನ್ಯಜೀವಿ ಸಂಘರ್ಷ ಮತ್ತು ಮಾಲಿನ್ಯ ಹಾಗೂ ಕಳ್ಳಬೇಟೆಯಿಂದಾಗಿ ಕರ್ನಾಟಕದ ವನ್ಯಜೀವಿಗಳು ಅಪಾಯದ ಅಂಚಿನಲ್ಲಿವೆ.

ಕರ್ನಾಟಕದಲ್ಲಿ ಅರಣ್ಯದ ಒಟ್ಟು ಪ್ರದೇಶ ೩೮.೭೨ ಲಕ್ಷ ಹೆಕ್ಟೇರುಗಳು ಅಂದರೆ ರಾಜ್ಯದ ಒಟ್ಟು ವಿಸ್ತೀರ್ಣದ ಶೇ.೨೦. ಧಾರ್ಮಿಕ ನಂಬಿಕೆಯಿಂದಾಗಿ ರಾಜ್ಯಾದ್ಯಂತ ವ್ಯಾಪಕವಾಗಿ ಸಂರಕ್ಷಿತವಾಗಿರುವ ಬ್ಯಾನೆಟ್ ಕಪಿ ಹೊರತಾಗಿ ದೊಡ್ಡ ಕಾಡು ಸ್ತನಿಗಳು ಬಹುತೇಕ ಅರಣ್ಯ ಪ್ರದೇಶಗಳಿಗೆ ಸೀಮಿತವಾಗಿವೆ. ವನ್ಯಜೀವಿಗಳಿರುವ ಕರ್ನಾಟಕದರಣ್ಯವನ್ನು ಆರು ವಿಭಾಗಗಳಾಗಿ ವಿಭಜಿಸಲಾಗಿದೆ. ಅವೆಂದರೆ ಕಡಲಪ್ರದೇಶ, ಪಶ್ಚಿಮಘಟ್ಟಗಳ ನೆತ್ತಿ, ಮಲೆನಾಡು, ಹಳೆಯ ಮೈಸೂರು ಪ್ರಸ್ಥಭೂಮಿ, ಕೊಳ್ಳೆಗಾಲ ಬೆಟ್ಟಗಳು ಮತ್ತು ಮೈದಾನ. ಪ್ರಾಣಿಗಳ ನೈಸರ್ಗಿಕ ಹಂಚಿಕೆಯನ್ನು ಸಸ್ಯವರ್ಗವೇ ಬಹುತೇಕ ನಿರ್ಧರಿಸುತ್ತವೆ.

**ಪ್ರಾಂತ್ಯ ೧, ಕರಾವಳಿಪ್ರದೇಶ:** ಉತ್ತರ ಕನ್ನಡ ಜಿಲ್ಲೆ ಮತ್ತು ಬೆಳಗಾವಿಯ ಕೆಲವು ಭಾಗಗಳು ಅತಿ ಉತ್ತರ ವಿಭಾಗದ ಬೆಟ್ಟಗಳೆನ್ನಿಸಿವೆ. ಈ ಬೆಟ್ಟಸಾಲಿನಲ್ಲಿರುವ ಸಸ್ಯವರ್ಗ ನಿತ್ಯ ಹರಿದ್ವರ್ಣದಿಂದ ತೊಡಗಿ ಶುಷ್ಕ ಉದುರೆಲೆ ಕಾಡಿನವರೆಗೆ ವ್ಯಾಪಿಸಿದೆ. ಕಾಳಿ ನದಿಯ ಜಲವಿದ್ಯುತ್ ಯೋಜನೆ ಹಾಗೂ ಭಾರಿ ಪ್ರಮಾಣದ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಿಂದಾಗಿ ಸಸ್ಯದ ಆವಾಸ ಹೆಚ್ಚು ಛಿದ್ರಗೊಂಡು ಅತ್ಯಧಿಕವಾಗಿ ಕ್ಷೋಭೆಗೊಳಗಾಗಿದೆ. ಈಗಾಗಲೇ ವೀಕ್ಷಿಸಿದಂತೆ ಈ ಪ್ರಾಂತ್ಯದಲ್ಲಿ ಕಾಟಿಗಳು ಚದರಿಹೋಗಿವೆ, ಹಾಗೆಯೇ ಸಾಂಬಾರ್‌ಗಳು (ದೊಡ್ಡ ಜಿಂಕೆ) ವಿಶಾಲವಾದ ಪ್ರದೇಶದಲ್ಲಿ ಹರಡಿಕೊಂಡಿವೆ. ಇಷ್ಟಿದ್ದರೂ ಕಾಡುಹಂದಿಗಳು ಯಥೇಚ್ಛವಾಗಿವೆ. ಕೃಷ್ಣಮೃಗಗಳನ್ನು ಅನೇಕ ಪ್ರದೇಶಗಳಲ್ಲಿ ಕಾಣಬಹುದು. ಹಾಗೆಯೇ ಆನೆಗಳು ವಿಶಾಲ ಪ್ರಾಂತ್ಯದಲ್ಲಿ ಹಂಚಿಹೋಗಿವೆ. ಅಂತೆಯೇ ಮಾಂಸಾಹಾರಿಗಳಾದ ಹುಲಿ, ಚಿರತೆ ಹಾಗೂ ಸೀಳುನಾಯಿಗಳ ಸಂಖ್ಯೆ ಚಿಕ್ಕದಾಗಿದೆ. ಹಿಂದೊಮ್ಮೆ ಈ ಪ್ರಾಂತ್ಯದಲ್ಲಿ ವನ್ಯಜೀವಿಗಳು ಅದರಲ್ಲೂ ಹುಲಿ ಮತ್ತು ಕಾಟಿಗಳು ಯಥೇಚ್ಛವಾಗಿದ್ದವು.

**ಪ್ರಾಂತ್ಯ ೨, ಪಶ್ಚಿಮಘಟ್ಟಗಳ ಶಿಖರ ಪ್ರದೇಶ:** ಈ ಪ್ರಾಂತ್ಯ ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಕ್ಕಿದೆ. ಘಟ್ಟಗಳ ನೆತ್ತಿಯನ್ನು ಅನುಸರಿಸಿ ಕಿರಿದಾದ ಪಟ್ಟಿಯಲ್ಲಿ ಅರಣ್ಯವಿದೆ. ಇಲ್ಲಿನ ಸಸ್ಯವರ್ಗ ನಿತ್ಯ ಹರಿದ್ವರ್ಣದಿಂದ ತೊಡಗಿ ತೇವಭರಿತ ಉದುರೆಲೆ ಕಾಡಿನವರೆಗೆ ವ್ಯಾಪ್ತಿ ಗಳಿಸಿದೆ. ಈ ಪ್ರಾಂತ್ಯದಲ್ಲಿ ಮುಖ್ಯ ಪ್ರಾಣಿಗಳ ಬಹುಪಾಲನ್ನು ಕಾಣಬಹುದು. ಆದರೆ ಸಂಖ್ಯೆಯ ದೃಷ್ಟಿಯಿಂದ ಅದೇನೂ ದೊಡ್ಡದಲ್ಲ. ಅಲ್ಲಲ್ಲಿ ವಿರಳವಾಗಿ ಆನೆಗಳ ಗುಂಪನ್ನೂ ಕಾಣಬಹುದು. ಕಾಟಿ ಮತ್ತು ಸಾಂಬಾರ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಆದರೆ ಕೃಷ್ಣಮೃಗ ಎಲ್ಲೋ ಕೆಲವೆಡೆ ಮಾತ್ರ ಕಂಡುಬರುತ್ತದೆ. ಬೊಗಳುವ ಜಿಂಕೆ ಮತ್ತು ಕರಡಿಗಳಿವೆಯೆಂದು ವರದಿಯಾಗಿದೆ. ಕಾಡುಹಂದಿಗಳು ಸರ್ವಾಂತರ್ಯಾಮಿ ಎನ್ನಬಹುದು. ಮಾಂಸಾಹಾರಿಗಳಾದ ಹುಲಿ, ಚಿರತೆ, ಸೀಳುನಾಯಿಗಳು ಕಂಡುಬಂದರೂ ಅವುಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿಲ್ಲ. ಈ ಪ್ರಾಂತ್ಯ ಸಸ್ಯಾಹಾರಿ ದೊಡ್ಡ ಪ್ರಾಣಿಗಳಿಗೆ ಹಾಗೆಯೇ ಅವುಗಳ ಮೇಲೆ ಅವಲಂಬಿಸಿ ಬದುಕುವ ಮಾಂಸಾಹಾರಿಗಳಿಗೆ ಅಷ್ಟೇನೂ ಉತ್ತೇಜನಕಾರಿ ಆವಾಸವಲ್ಲ.

**ಪ್ರಾಂತ್ಯ ೩, ಮಲೆನಾಡು ಪ್ರದೇಶ:** ಶುಷ್ಕ ಮತ್ತು ತೇವಭರಿತ ಉದುರೆಲೆ ಕಾಡುಗಳಿರುವುದೇ ಈ ಪ್ರಾಂತ್ಯದ ಪ್ರಮುಖ ಲಕ್ಷಣ. ಬಾಬಾಬುಡನ್‌ಗಿರಿ ಶ್ರೇಣಿಗಳಂಥ ಪ್ರಮುಖ ಬೆಟ್ಟಗಳಿರುವುದು ಇದರ ಇನ್ನೊಂದು ಲಕ್ಷಣ. ರಾಜ್ಯದಲ್ಲಿ ಮೈಸೂರು ಪ್ರಸ್ಥಭೂಮಿಯನ್ನುಳಿದರೆ ಅತಿಹೆಚ್ಚು ವನ್ಯಜೀವಿ ದಟ್ಟಣೆಯಿರುವುದು ಇಲ್ಲಿಯೇ. ಇಲ್ಲಿ ಆನೆ, ಕಾಟಿ, ಸಾಂಬಾರ್, ಕೃಷ್ಣಮೃಗ, ಕಾಡುಹಂದಿ ಮುಂತಾದ ಜೀವಿಗಳಿಗೆ ಆಶ್ರಯವಿದೆ. ಮಾನವ ಮೂಲದ ಒತ್ತಡಗಳು ಇಲ್ಲಿ ಕಡಿಮೆ ಎಂದೇ ಹೇಳಬಹುದು. ಎಂದೇ ವನ್ಯಜೀವಿಗಳು ಇನ್ನೂ ಇಲ್ಲಿ ಉಳಿದುಕೊಂಡಿವೆ. ಸರ್ವಋತು ನದಿಗಳು, ಅಣೆಕಟ್ಟುಗಳು, ಧಾರಾಳವಾಗಿ ಲಭ್ಯವಿರುವ ಬಿದಿರು, ಹುಲ್ಲು ಹಾಗೂ ಗ್ರಾಸವಾಗಿ ಒದಗಿಬರುವ ಅನೇಕ ಸಸ್ಯಗಳು, ಸಾಧಾರಣವೆನ್ನಬಹುದಾದ ಮಳೆ ಎಲ್ಲವೂ ಸೇರಿಕೊಂಡು ಈ ಪ್ರಾಂತ್ಯ ಆನೆಗಳಿಗೆ ಯುಕ್ತವಾದ ತಾಣವಾಗಿ ಪರಿಣಮಿಸಿದೆ.

**ಪ್ರಾಂತ್ಯ ೪, ಮೈಸೂರು ಪ್ರಸ್ಥಭೂಮಿ:** ಮೈಸೂರು ಪ್ರಸ್ಥಭೂಮಿಯು ಪಶ್ಚಿಮದ ಅಂಚಿನ ಮೂರೂ ಕಡೆಗೆ ಹಬ್ಬಿರುವ ಸಹ್ಯಾದ್ರಿ ಶ್ರೇಣಿಯ ಅತ್ಯಂತ ದಕ್ಷಿಣದ ಭಾಗ. ನೀಲಗಿರಿ ಹಾಗೂ ಬಿಳಿಗಿರಿರಂಗನ ಬೆಟ್ಟ ಶ್ರೇಣಿಯ ಪೂರ್ವಚಾಚು ಎಲ್ಲವೂ ಸೇರಿಯೇ ಈ ಪ್ರಸ್ಥಭೂಮಿಯನ್ನು ವಿರಳಿತದ ಬಯಲಾಗಿಸಿದೆ. ಇಲ್ಲಿರುವ ಅರಣ್ಯಗಳು ಶುಷ್ಕ ಉದುರೆಲೆ ಅರಣ್ಯಕ್ಕೆ ಸೇರಿವೆ. ಇಡೀ ದಕ್ಷಿಣ ಭಾರತದಲ್ಲಿ ಅತಿ ಸಮೃದ್ಧ ವನ್ಯಜೀವಿಗಳು ಇಲ್ಲಿ ನೆಲೆಯಾಗಿವೆ. ಆನೆಗಳ ದೊಡ್ಡ ಹಿಂಡುಗಳಿವೆ, ಕೃಷ್ಣಮೃಗ, ಸೀಳುನಾಯಿ, ಕರಡಿ, ಕಾಟಿ, ಸಾಂಬಾರ್ ಹಾಗೂ ಆಗೊಮ್ಮೆ, ಈಗೊಮ್ಮೆ ಹುಲಿ ಮತ್ತು ಕಾಡುಬೆಕ್ಕುಗಳನ್ನು ಕಾಣಬಹುದು.

**ಪ್ರಾಂತ್ಯ ೫ ಕೊಳ್ಳೇಗಾಲ ಬೆಟ್ಟಗಳು:** :ಬೆಟ್ಟಗಳಿಂದಾದ ಈ ಪ್ರದೇಶವನ್ನು ಪಶ್ಚಿಮಘಟ್ಟಗಳ ಪೂರ್ವಚಾಚು ಎನ್ನಬಹುದು. ತೇವಭರಿತ ಉದುರೆಲೆ ಕಾಡು ಅಥವಾ ಅರೆ ನಿತ್ಯಹರಿದ್ವರ್ಣ ಕಾಡುಗಳಲ್ಲದೆ ಉಳಿದ ಬೆಟ್ಟ ಪ್ರದೇಶದ ತುಂಬ ಶುಷ್ಕ ಉದುರೆಲೆ ಕಾಡುಗಳನ್ನು ಕಾಣಬಹುದು. ಈಗ ಈ ಪ್ರದೇಶ ಬಹುತೇಕ ಕುರುಚಲು ಗಿಡಗಳಿರುವ ಕಾಡಾಗಿ ಅವನತಿ ಹೊಂದಿದೆ. ಆನೆ, ಸಾಂಬಾರ್, ಕೃಷ್ಣಮೃಗ, ಕಾಡುಹಂದಿಗಳನ್ನು ಇಡೀ ಪ್ರದೇಶದಾದ್ಯಂತ ಕಾಣಬಹುದು. ಸೀಳುನಾಯಿಗಳು ಹೆಚ್ಚು ಪ್ರದೇಶಗಳಲ್ಲಿ ಕಂಡುಬರುತ್ತವೆ. ಆದರೆ ಹುಲಿ, ಕಾಟಿ, ಚಿರತೆಗಳು ಸೀಮಿತ ಸಂಖ್ಯೆಯಲ್ಲಿವೆ.

**ಪ್ರಾಂತ್ಯ ೬ ಮೈದಾನ ಪ್ರದೇಶ:** ದಖನ್ ಪ್ರಸ್ಥಭೂಮಿಯ ಮೈದಾನ ಪ್ರದೇಶದಲ್ಲಿ ಅರಣ್ಯದ ಪ್ರಮಾಣ ತುಂಬ ಕಡಿಮೆ. ಉಳಿದಿದ್ದರೆ ಅದು ಸಾಕಷ್ಟು ಅವನತಿ ಹೊಂದಿರುವ ಪ್ರದೇಶ ಮಾತ್ರ. ರಾಣಿಬೆನ್ನೂರು ಕೃಷ್ಣಮೃಗಗಳಿಗೆ ಹೆಸರುವಾಸಿ. ಇಲ್ಲಿ ಅವುಗಳ ದೊಡ್ಡ ಹಿಂಡನ್ನೇ ಕಾಣಬಹುದು. ತೋಳಗಳು ಈಚೆಗೆ ಕಡಿಮೆಯಾಗುತ್ತಿದ್ದರೂ ಈ ಮೈದಾನದ ಅನೇಕ ಭಾಗಗಳಲ್ಲಿ ಇವು ಕಂಡುಬಂದಿವೆ ಎಂಬುದಾಗಿ ವರದಿಯಾಗಿವೆ.

## ಕರ್ನಾಟಕದಲ್ಲಿ ಮಾಸಿಕ ಮತ್ತು ಋತುಮಾನದ ಸಾಧಾರಣ ಮಳೆ ಪ್ರಮಾಣವನ್ನು

| ಜಿಲ್ಲೆಯ ಹೆಸರು | ತಾಲ್ಲೂಕು ಸಂಖ್ಯೆ | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಮಾನ್ಸೂನ್ ಮುಂಚೆ | ಜೂನ್ |
|---|---|---|---|---|---|---|---|---|
| ಬೆಂಗಳೂರು | ೩ | ೪.೭೦ | ೭.೭೦ | ೪೧.೯೦ | ೭.೫೦ | ೧೧೫.೯೦ | ೧೭೭.೯೦ | ೬೮.೯೦ |
| ಬೆಂಗಳೂರು (ಗ್ರಾ) | ೮ | ೪.೩೦ | ೬.೦೦ | ೪೨.೧೦ | ೮.೧೦ | ೧೦೭.೪೦ | ೧೬೭.೮೦ | ೬೮.೨೦ |
| ಚಿತ್ರದುರ್ಗ | ೬ | ೩.೨೦ | ೪.೧೦ | ೨೧.೩೦ | ೪.೬೦ | ೬೨.೭೦ | ೯೫.೯೦ | ೪೮.೫೦ |
| ದಾವಣಗೆರೆ | ೬ | ೨.೪೦ | ೩.೫೦ | ೩೪.೭೦ | ೮.೪೦ | ೭೮.೦೦ | ೧೨೭.೦೦ | ೬೫.೯೦ |
| ಕೋಲಾರ | ೧೧ | ೬.೯೦ | ೫.೮೦ | ೩೩.೩೦ | ೮.೯೦ | ೮೦.೧೦ | ೧೩೫.೧೦ | ೬೧.೧೦ |
| ಶಿವಮೊಗ್ಗ | ೭ | ೧.೬೦ | ೧.೭೦ | ೪೪.೦೦ | ೮.೨೦ | ೮೮.೮೦ | ೧೪೪.೩೦ | ೩೧೦.೫೦ |
| ತುಮಕೂರು | ೧೦ | ೩.೧೦ | ೪.೧೦ | **೨೯.೬೦** | ೬.೧೦ | ೮೦.೯೦ | ೧೨೩,೮೦ | ೬೦.೬೦ |
| **ಬೆಂಗಳೂರು ವಿಭಾಗ** | **೫೧** | **೩.೭೪** | **೪.೭೦** | **೩೫.೨೭** | **೭.೪೦** | **೮೭.೬೯** | **೧೩೮.೮೦** | **೯೭.೬೭** |
| ಬಾಗಲಕೋಟೆ | ೬ | ೨.೧೦ | ೨.೭೦ | ೨೩.೯೦ | ೫.೧೦ | ೪೮.೦೦ | ೮೧.೯೦ | ೬೫.೧೦ |
| ಬೆಳಗಾವಿ | ೧೦ | ೨.೦೦ | ೧.೬೦ | ೩೩.೨೦ | ೭.೬೦ | ೬೫.೦೦ | ೧೦೯.೪೦ | ೧೦೪.೬೦ |
| ಬಿಜಾಪುರ | ೫ | ೨.೯೦ | ೪.೦೦ | ೧೮.೭೦ | ೬.೧೦ | ೩೫.೮೦ | ೬೭.೫೦ | ೭೯.೪೦ |
| ಧಾರವಾಡ | ೫ | ೦.೮೦ | ೩.೨೦ | ೪೫.೨೦ | ೭.೦೦ | ೮೪.೮೦ | ೧೪೦.೯೦ | ೯೫.೩೦ |
| ಗದಗ | ೫ | ೧.೬೦ | ೨.೪೦ | ೩೪.೮೦ | ೪.೧೦ | ೭೧.೪೦ | ೧೧೪.೩೦ | ೬೯.೬೦ |
| ಹಾವೇರಿ | ೭ | ೧.೭೦ | ೧.೬೦ | ೩೯.೬೦ | ೪.೬೦ | ೭೭.೪೦ | ೧೨೪.೯೦ | ೯೫.೭೦ |
| ಉತ್ತರ ಕನ್ನಡ | ೧೧ | ೧.೨೦ | ೧.೧೦ | ೨೮.೨೦ | ೪.೧೦ | ೧೦೩.೧೦ | ೧೩೭.೬೦ | ೬೮೦.೩೦ |
| **ಬೆಳಗಾವಿ ವಿಭಾಗ** | **೪೯** | **೧.೭೬** | **೨.೩೭** | **೩೧.೯೪** | **೫.೫೧** | **೬೯.೩೬** | **೧೧೦.೯೩** | **೧೬೯.೯೯** |
| ಬಳ್ಳಾರಿ | ೭ | ೧.೮೦ | ೩.೨೦ | ೨೭.೪೦ | ೨೭.೪೦ | ೬೪.೬೦ | ೦೦.೭೦ | ೬೫.೭೦ |
| ಬೀದರ್ | ೫ | ೩.೩೦ | ೫.೫೦ | ೨೧.೮೦ | ೨೧.೮೦ | ೨೩.೬೦ | ೬೪.೮೦ | ೧೩೨.೩೦ |
| ಗುಲಬರ್ಗ | ೧೦ | ೨.೭೦ | ೩.೯೦ | ೧೮.೬೦ | ೧೮.೬೦ | ೩೩.೦೦ | ೬೭.೮೦ | ೧೦೮.೩೦ |
| ಕೊಪ್ಪಳ | ೪ | ೦.೯೦ | ೦.೪೦ | ೨೨.೯೦ | ೨೨.೯೦ | ೫೦.೩೦ | ೭೬.೩೦ | ೬೧.೬೦ |
| ರಾಯಚೂರು | ೫ | ೧.೦೦ | ೧.೭೦ | ೧೭.೨೦ | ೧೭.೨೦ | ೩೪.೪೦ | ೫೯.೯೦ | ೭೫.೫೦ |
| **ಗುಲಬರ್ಗಾವಿಭಾಗ** | **೩೧** | **೧.೯೪** | **೨.೯೪** | **೨೧.೫೮** | **೨೧.೫೮** | **೪೧.೧೮** | **೭೩.೯೦** | **೮೮.೬೮** |
| ಚಾಮರಾಜನಗರ | ೪ | ೪.೪೦ | ೪.೫೦ | ೧೧.೨೦ | ೬೬.೧೦ | ೧೩೯.೮೦ | ೨೨೫.೯೦ | ೪೭.೫೦ |
| ಚಿಕ್ಕಮಗಳೂರು | ೭ | ೩.೧೦ | ೩.೫೦ | ೯.೨೦ | ೫೫.೪೦ | ೧೦೨.೦೦ | ೧೭೩.೨೦ | ೩೦೦.೫೦ |
| ದಕ್ಷಿಣ ಕನ್ನಡ | ೫ | ೪.೮೦ | ೨.೫೦ | ೧೦.೪೦ | ೪೭.೨೦ | ೧೭೨.೨೦ | ೨೩೭.೧೦ | ೯೪೦.೪೦ |
| ಹಾಸನ | ೮ | ೩.೮೦ | ೪.೫೦ | ೮.೩೦ | ೫೭.೬೦ | ೧೧೨.೦೦ | ೧೮೬.೦೦ | ೧೧೯.೬೦ |
| ಕೊಡಗು | ೩ | ೫.೦೦ | ೫.೬೦ | ೧೪.೭೦ | ೭೩.೫೦ | ೧೪೬.೭೦ | ೨೪೫.೫೦ | ೪೮೬.೦೦ |
| ಮಂಡ್ಯ | ೭ | ೨.೨೦ | ೪.೫೦ | ೮.೦೦ | ೪೯.೨೦ | ೧೧೬.೧೦ | ೧೮೦.೦೦ | ೪೨.,೨೦ |
| ಮೈಸೂರು | ೭ | ೩.೫೦ | ೫.೫೦ | ೧೨.೫೦ | ೬೫.೯೦ | ೧೩೮.೭೦ | ೨೨೬.೨೦ | ೬೫.೨೦ |
| ಉಡುಪಿ | ೩ | ೩.೫೦ | ೧.೮೦ | ೫.೧೦ | ೩೭.೦೦ | ೧೬೯.೭೦ | ೨೧೭.೧೦ | ೧೦೫೫.೦೦ |
| **ಮೈಸೂರು ವಿಭಾಗ** | **೪೪** | **೩.೭೯** | **೪.೦೫** | **೯.೯೩** | **೫೬.೪೯** | **೧೩೭.೧೫** | **೨೧೧.೩೮** | **೩೮೨.೦೫** |
| ರಾಜ್ಯ | **೧೭೨** | ೨.೮೧ | ೩.೫೨ | ೭.೨೮ | ೩೬.೩೨ | ೮೩.೮೪ | ೧೩೩.೭೫ | ೧೮೪.೬೦ |

ಮಿಲಿ ಮೀಟರ್‌ಗಳಲ್ಲಿ ಕೊಟ್ಟಿದೆ. (೧೯೦೧-೧೯೭೦)

| ಜುಲೈ | ಆಗಸ್ಟ್ | ಸೆಪ್ಟೆಂಬರ್ | ನೈರುತ್ಯ ಮಾರುತ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಈಶಾನ್ಯ ಮಾರುತ | ವಾರ್ಷಿಕ |
|---|---|---|---|---|---|---|---|---|
| ೯೯,೪೦ | ೧೨೨.೭೦ | ೧೪೮.೭೦ | ೪೩೯.೬೦ | ೧೬೮.೨೦ | ೬೪.೩೦ | ೧೧೫.೯೦ | ೨೪೯.೪೦ | ೮೬೬.೮೦ |
| ೮೪.೦೦ | ೧೧೧.೯೦ | ೧೫೧.೨೦ | ೪೧೫.೩೦ | ೧೫೭.೫೦ | ೬೨.೬೦ | ೧೦೭.೪೦ | ೨೩೩.೫೦ | ೮೧೬.೬೦ |
| ೬೨.೯೦ | ೬೭.೬೦ | ೯೯.೪೦ | ೨೭೮.೩೦ | ೧೨೩.೯೦ | ೪೫.೮೦ | ೬೨.೭೦ | ೧೮೧.೫೦ | ೫೫.೭೦ |
| ೯೭.೫೦ | ೭೯.೯೦ | ೮೬.೭೦ | ೩೨೯.೯೦ | ೧೧೯.೯೦ | ೪೨.೪೦ | ೭೮.೦೦ | ೧೭೨.೩೦ | ೬೨೯.೧೦ |
| ೮೧.೦೦ | ೧೦೦.೦೦ | ೧೪೫.೬೦ | ೩೮೭.೮೦ | ೧೩೫.೮೦ | ೬೮.೨೦ | ೮೦.೧೦ | ೨೨೦.೬೦ | ೭೪೩.೫೦ |
| ೬೮೬.೪೦ | ೩೫೨.೬೦ | ೧೩೪.೩೦ | ೧೪೮೩.೮೦ | ೧೪೮.೪೦ | ೪೫.೧೦ | ೮೮.೮೦ | ೨೦೩.೬೦ | ೧೮೩೧.೭೦ |
| **೬೮.೯೦** | ೮೫.೦೦ | ೧೨೭.೭೦ | ೩೪೨.೨೦ | **೧೪೨.೦೦** | ೫೬.೦೦ | ೮೦.೯೦ | ೨೦೮.೧೦ | ೬೭೪.೨೦ |
| **೧೬೮.೫೯** | **೧೩೧.೩೯** | **೧೨೭.೬೬** | **೫೨೫.೨೭** | **೧೪೨.೨೪** | **೫೪.೯೧** | **೮೭.೬೯** | **೨೦೯.೮೬** | **೮೭೩.೯೪** |
| ೭೨.,೫೦ | ೬೭.೪೦ | ೧೪೦.೭೦ | ೩೪೫.೭೦ | ೯೨.೮೦ | ೩೩.೫೦ | ೪೮.೦೦ | ೧೩೪.೦೦ | ೫೬೧.೬೦ |
| ೨೦೬.೨೦ | ೧೨೧.೪೦ | ೧೦೯.೦೦ | ೫೪೧.೨೦ | ೧೧೧.೯೦ | ೩೮.೧೦ | ೬೫.೦೦ | ೧೫೮.೮೦ | ೮೦೯.೪೦ |
| ೭೯.೭೦ | ೭೮.೨೦ | ೧೬೨.೭೦ | ೪೦೦.೦೦ | ೮೩.೭೦ | ೩೦.೨೦ | ೩೫.೮೦ | ೧೨೨.೦೦ | ೫೮೯.೬೦ |
| ೧೫೧.೮೦ | ೯೯.೮೦ | ೧೧೨.೩೦ | ೪೫೯.೦೦ | ೧೧೯.೬೦ | ೪೨.೪೦ | ೮೪.೮೦ | ೧೭೧.೬೦ | ೭೭೧.೫೦ |
| ೬೮.೪೦ | ೬೯.೮೦ | ೧೨೮.೨೦ | ೩೩೬.೦೦ | ೧೧೬.೩೦ | ೩೬.೭೦ | ೭೧.೪೦ | ೧೬೨.೦೦ | ೬೧೨.೩೦ |
| ೧೭೨.೪೦ | ೧೦೩.೩೦ | ೮೫.೬೦ | ೪೫೭.೦೦೨ | ೧೨೨.೨೦ | ೩೮.೮೦ | ೭೭.೪೦ | ೧೭೧.೮೦ | ೭೫೩.೭೦ |
| **೧,೦೦೭.೬೦** | ೫೫೫.೪೦ | ೨೫೦.೨೦ | ೪೯೩.೪೦ | ೧೪೮.೦೦ | ೪೮.೮೦ | ೧೦೩.೧೦ | ೨೦೯.೦೦ | ೨೮೪೦.೦೦ |
| **೨೫೧.೨೩** | **೧೫೬.೪೭** | **೧೪೧.೨೪** | **೭೧೮.೯೦** | **೧೧೩.೫೦** | **೩೮.೩೩** | **೬೯.೩೬** | **೧೬೧.೩೧** | **೯೯೧.೧೬** |
| ೮೩.೧೦ | ೯೫.೨೦ | ೧೪೪೭೦ | ೩೮೮.೭೦ | ೧೦೩.೭೦ | ೩೨.೮೦ | ೬೪.೬೦ | ೧೪೪.೯೦ | ೬೩೪.೩೦ |
| ೧೮೨.೫೦ | ೧೮೦.೫೦ | ೧೯೪.೯೦ | ೬೯೦.೩೦ | ೭೦.೫೦ | ೧೮.೩೦ | ೨೩.೬೦ | ೯೩.೭೦೧ | ೮೪೮.೮೦ |
| ೧೬೧.೨೦ | ೧೪೪.೮೦ | ೧೯೨.೪೦ | ೬೦೬.೭೦ | ೮೦.೯೦ | ೧೬.೧೦ | ೩೩.೦೦ | ೦೨.೧೦ | ೭೭೬.೫೦ |
| ೮೨.೬೦ | ೮೭.೮೦ | ೧೩೫.೦೦ | ೩೬೭.೦೦ | ೧೦೦.೨೦ | ೧೯.೪೦ | ೫೦.೩೦ | ೧೨೬.೨೦ | ೫೬೯.೪೦ |
| **೧೦೮.೦೦** | ೧೧೨.೮೦ | ೧೫೨.೧೦ | ೪೪೮.೪೦ | ೮೪.೦೦ | ೨೨.೧೦ | ೩೪.೪೦ | ೧೧೨.೮೦ | ೬೨೧.೧೦ |
| **೧೨೩.೪೮** | **೧೨೪.೨೨** | **೧೬೩.೮೨** | **೫೦೦.೨೨** | **೮೭.೮೬** | **೨೧.೭೪** | **೪೧.೧೮** | **೧೧೫.೯೪** | **೬೯೦.೦೨** |
| ೫೨.೮೦ | ೬೭.೬೦ | ೯೯.೭೦ | ೨೬೭.೫೦ | ೧೬೨.೮೦ | ೭೫.೭೦ | ೧೩೯.೮೦ | ೨೫೭.೬೦ | ೭೫೧.೦೦ |
| ೬೭೩.೪೦ | ೩೮೨.೧೦ | ೧೫೯.೮೦ | ೧೫೧೫.೯೦ | ೧೬೩.೯೦ | ೫೯.೪೦ | ೧೦೨.೦೦ | ೨೩೯.೧೦ | ೧೯೨೮.೧೦ |
| ೧೩೦೧.೨೦ | ೮೦೬.೦೦ | ೩೨೧.೧೦ | ೩೩೬೮.೬೦ | ೯೮೦.೧೦ | ೬೨೯.೫೦ | ೧೭೨.೨೦ | ೩೬೯.೩೦ | ೩೯೭೪.೯೦ |
| ೨೪೬.೪೦ | ೧೪೦.೫೦ | ೧೦೩.೯೦ | ೬೧೦.೩೦ | ೧೫೮.೯೦ | ೬೭.೮೦ | ೧೧೨.೦೦ | ೨೪೨.೭೦ | ೧೦೩೯.೧೦ |
| ೯೩೮.೩೦ | ೫೨೯.೩೦ | ೨೧೮.೯೦ | ೨೧೭೨.೬೦ | ೨೦೧.೭೦ | ೭೯.೭೦ | ೧೪೬.೭೦ | ೩೦೦.೦೦ | ೨೭೧೮.೨೦ |
| ೪೫.೫೦ | ೬೨.೨೦ | ೧೧೫.೬೦ | ೨೬೫.೪೦ | ೧೬೧.೪೦ | ೬೦.೭೦ | ೧೧೬.೧೦ | ೨೩೫.೩೦ | ೬೮೦.೭೦ |
| ೯೯.೫೦ | ೭೬.೦೦ | ೮೯.೦೦ | ೩೨೯.೭೦ | ೧೫೧.೭೦ | ೬೧.೨೦ | ೧೩೮.೭೦ | ೨೨೬.೩೦ | ೭೮೨.೨೦ |
| **೧೩೪೧.೬೦** | ೮೦೦.೪೦ | ೩೮೩.೨೦ | ೩೫೮೦.೩೦ | ೨೨೪.೧೦ | ೭೮.೩೦ | ೧೬೯.೭೦ | ೩೨೧.೬೦ | ೪೧೧೯.೦೦ |
| **೫೮೭.೩೪** | **೩೫೮.೦೧** | **೧೮೬.೪೦** | **೧೫೧೩.೭೯** | **೨೭೫.೫೮** | **೧೩೯.೦೪** | **೧೩೭.೧೫** | **೨೭೩.೯೯** | **೧೯೯೯.೧೫** |
| ೨೮೨.೬೬ | **೧೯೭.೫೨** | ೧೫೪.೭೮ | ೮೧೪.೫೪ | ೧೫೪.೭೯ | ೬೩.೫೧ | ೮೩.೮೪ | ೧೯೦.೨೭ | ೧೧೩೮.೫೭ |

ಆಧಾರ: ಬರಪರಿಹಾರ ಉಸ್ತುವಾರಿ ಕೋಶ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು.

## ಸಸ್ಯಸಂಪತ್ತು

ಕರ್ನಾಟಕ ರಾಜ್ಯವು ಸಮೃದ್ಧ ಮತ್ತು ವೈವಿಧ್ಯಮಯ ಸಸ್ಯಗಳಿಗೆ ಹೆಸರುವಾಸಿ. ಇದಕ್ಕೆ ಮೂಲ ಕಾರಣವೆಂದರೆ ಹವಾಗುಣ, ಮಣ್ಣು, ಮೇಲ್ಮೈ ಸ್ವರೂಪಗಳನ್ನು ಆಧರಿಸಿ ಸಸ್ಯಗಳು ಅನೇಕ ಪಥಗಳನ್ನು ಅನುಸರಿಸಿರುವುದು. ಅನೇಕ ಪ್ರದೇಶಗಳಲ್ಲಿ ಜೈವಿಕ ಅಂಶಗಳ ಕಾರಣದಿಂದಾಗಿ ಶತಶತಮಾನಗಳಿಂದ ವಿಕಾಸವಾಗಿದ್ದ ಮೂಲ ಸಮೃದ್ಧ ಜೀವಾವಾಸ ಬದಲಾಗಿದೆ. ಮೇಲ್ಮೈ ಸ್ವರೂಪ, ಜೈವಿಕ-ಹವಾಗುಣ, ಮಣ್ಣು ಮುಂತಾದ ಅಂಶಗಳನ್ನು ಪರಿಗಣಿಸಿ ಕರ್ನಾಟಕದ ಸಸ್ಯ ವರ್ಗವನ್ನು ನಾಲ್ಕು ವಿಧಗಳಾಗಿ ವರ್ಗೀಕರಿಸಬಹುದು.

**೧. ಕರಾವಳಿ ಸಸ್ಯವರ್ಗ, ೨. ಪಶ್ಚಿಮ ಕರಾವಳಿಯ ಉಷ್ಣವಲಯದ ಸಸ್ಯವರ್ಗ, ೩. ಒಳಪ್ರದೇಶದ ಉದುರೆಲೆ ಸಸ್ಯವರ್ಗ, ೪. ದಕ್ಷಿಣದ ಉಷ್ಣವಲಯದ ಮಾಂಟೇನ್ ವಿಧದ ಸಸ್ಯವರ್ಗ.**

**ಕಡಲತೀರದ (ಲಿಟ್ಟೋರಲ್- Littoral) ಸಸ್ಯವರ್ಗ:** ಕರ್ನಾಟಕದಲ್ಲಿ ಎರಡು ಬಗೆಯ ಕರಾವಳಿ ಸಸ್ಯವರ್ಗಗಳಿವೆ. ಮೊದಲನೆಯದು ಮರಳ ದಿಬ್ಬಗಳ ಮೇಲೆ ಅಂದರೆ ನೆಲ ಆಧರಿಸಿ ಬೆಳೆಯುವ ಸಸ್ಯವರ್ಗ. ಎರಡನೆಯದು ಅಳಿವೆಗಳುದ್ದಕ್ಕೂ ಲವಣಯುಕ್ತ ನೆಲದಲ್ಲಿ ಬೆಳೆಯುವ ಸಸ್ಯವರ್ಗ. ಉರಿಬಿಸಿಲು, ಸ್ಥಾನಾಂತರವಾಗುವ ಮರಳು, ಲವಣಾಂಶ ಹೊತ್ತ ಗಾಳಿ ಮುಂತಾದ ಮಿತಿಗಳನ್ನು ಎದುರಿಸಿಯೂ ಸಾಮೋಫೈಟ್ ಎಂಬ ವಿಶೇಷ ಸಸ್ಯವರ್ಗಗಳು ಇಲ್ಲಿ ನೆಲೆಯೂರಿವೆ. ಅಲೆಗಳು ಏರುವ ಎತ್ತರಕ್ಕೂ ಮೀರಿ ನಿಂತ ಮರಳಿನ ಗುಡ್ಡಗಳು ಚಲಿಸದಂತೆ ಅನೇಕ ತಡೆಗಳೂ ಉಂಟು. ಸನ್‌ಡ್ಯೂಸ್, ಬ್ಯಾಡರ್‌ವರ್ಟ್‌ಗಳು ಬೀಚಿನ ಹಿಮ್ಮುಖದಲ್ಲಿ ಋತುಮಾನಗಳಿಗೆ ತಕ್ಕಂತೆ ತೇವಗೊಂಡ ಮರಳಿನ ಮೇಲೆ ಕಂಬಳಿ ಹಾಸಿದಂತಹ ದೃಶ್ಯಗಳನ್ನು ನಿರ್ಮಿಸಬಹುದು.

ಸಾಗರದೆಡೆ ಇಳುಕಲು ದಿಢೀರೆಂದು ಕಡಿದಾಗುವ ನದಿ ಅಳಿವೆಗಳಲ್ಲಿ ಸೀಮಿತ ಪ್ರಮಾಣದ ಕಾಂಡ್ಲಾ ಸಸ್ಯಗಳು ಬೆಳೆದಿರುವುದನ್ನು ಕಾಣಬಹುದು. ಈ ಬಗೆಯ ಸಸ್ಯಗಳಿಗೆ ಕುಂದಾಪುರ ಮತ್ತು ಗೋಕರ್ಣ ಉತ್ತಮ ಉದಾಹರಣೆಯಾಗಬಲ್ಲವು. ಇವು ಬಹುತೇಕ ರೈಸೋಫೋರ-ಅವಿಸೀನಿಯ-ಬೃಗೇರ ವಿಧದ ಸಸ್ಯಗಳು ಈ ವಾತಾವರಣದಲ್ಲಿ ಬೆಳೆಯುವ ವೃಕ್ಷಗಳು ಹಾಗೂ ಪೊದೆಗಳೂ ಲವಣಭರಿತ ಕೆಸರು ಒಡ್ಡುವ ಅನೇಕ ಸಮಸ್ಯೆಗಳನ್ನು ಎದುರಿಸಿಯೇ ಬೆಳೆಯಬೇಕು. ಇಲ್ಲಿ ಸಾಗರದ ಅಲೆಗಳು ಬಹು ದೊಡ್ಡ ಪ್ರಮಾಣದಲ್ಲಿರುತ್ತವೆ. ಆಗಾಗ ನೀರಿನ ಮಟ್ಟದಲ್ಲಿ ಏರುಪೇರಾಗುತ್ತದೆ. ಜೌಗು ತುಂಬಿದ ಮಣ್ಣಿನಲ್ಲಿ ಉಸಿರುಕಟ್ಟುವಂತಹ ಸ್ಥಿತಿ ಉಂಟಾಗುತ್ತದೆ. ಕಡಲತೀರದಲ್ಲಿ ಅಭಿವೃದ್ಧಿಯಾಗುವ ಈ ಬಗೆಯ ಸಸ್ಯಗಳಿಗೆ ನಿಸರ್ಗವನ್ನು ಸಮತೋಲದಲ್ಲಿಡುವ ಮಹತ್ತರ ಪರಿಸರದ ಹೊಣೆಗಾರಿಕೆ ಇರುತ್ತದೆ. ಉಸುಕು ಸಸ್ಯಗಳು ಬೀಚಿನಲ್ಲಿರುವ ಮರಳಕಣಗಳು, ಕೃಷಿಭೂಮಿಗೋ ಮಾನವ ವಸಾಹತುಗಳತ್ತಲೋ ತೂರಿಹೋಗದಂತೆ ತಡೆಹಿಡಿಯಲು ಸಹಕಾರಿ. ಅಲ್ಲದೆ ಮನರಂಜನೆಗಾಗಿ ಬೀಚ್‌ಗಳನ್ನು ಸುಸ್ಥಿತಿಯಲ್ಲಿಡಲು ಇವು ನೆರವಾಗುತ್ತವೆ. ನದಿದಡ ಕೊಚ್ಚಿಹೋಗದಂತೆ ಕಾಂಡ್ಲಾ ಸಸ್ಯಗಳು ತಡೆಯುತ್ತವೆ. ಅಲ್ಲದೆ ಅನೇಕ ಬಗೆಯ ಸಾಗರಮೀನು ಇತರ ಸಾಗರ ಜೀವಿಗಳ ಸಂತಾನಾಭಿವೃದ್ಧಿಗೂ ಇವು ಆಸರೆ ನೀಡುತ್ತವೆ.

**ತೇವಾಂಶಭರಿತ ಕಡಲತೀರದ ಉದುರೆಲೆ ಸಸ್ಯವರ್ಗ:** ತೀರಸಾಲಿಗೆ ಪೂರ್ವಕ್ಕೆ ಥಕ್ಕನೆ ಎದುರಾಗುವ ನೈಸರ್ಗಿಕ ಸಸ್ಯವರ್ಗವು ದ್ವಿತೀಯಕ ತೇವಾಂಶಭರಿತ ಉದುರೆಲೆ ವಿಧಕ್ಕೆ ಸೇರಿದೆ. ಈ ಬಗೆಯ ಸಸ್ಯ ವರ್ಗವನ್ನು ಉಚ್ಛ್ರಾಯ ನಿತ್ಯ ಹರಿದ್ವರ್ಣ ಸಸ್ಯವರ್ಗ ಅವನತಿಗೊಂಡುದುದರಿಂದ ಆಯಿತೆಂದು ಪರಿಗಣಿಸುವುದೂ ಉಂಟು. ದಕ್ಷಿಣ ಕನ್ನಡದ ತೀರ ಪ್ರದೇಶದ ಕೆಳಗಿರುವ ವಿಶಾಲವಾದ ಭೂಭಾಗಗಳಲ್ಲಿ ಹೋಪಿಯ (ಕಿರಿಬೋಗಿ-ಹಿರಿಬೋಗಿ) -ಸೈಜೈಸಿಯಂ(ನೇರಿಳೆ ಗುಂಪಿನ) -ಹೋಲಿಗಾಮ(ಮಲೆಗೇರು ಮುಂತಾದ) ಶ್ರೇಣಿಯ ವೃಕ್ಷಗಳು ಕಂಡುಬರುತ್ತವೆ. ಇವುಗಳ ಜೊತೆ ಸೊಂಪಾಗಿ ಬೆಳೆದ ಗ್ರೀವಿಯ(ದಡಸಾಲ ಇತ್ಯಾದಿ)

ಇಕ್ಸಾರ (ಗರಣಿ, ಎಲೆಗಾರ ಇತ್ಯಾದಿ), ಸೈಕೋಟ್ರಿಯ ಮುಂತಾದ ಕೆಳಮಟ್ಟದಲ್ಲೇ ವಿಸ್ತರಿಸುವ ಪೊದೆಗಳೂ ಕಂಡುಬರುತ್ತವೆ. ಲಿನಾಸ್‌ಗಳು (ಉಷ್ಣವಲಯದ ಮಳೆಕಾಡುಗಳಲ್ಲಿ ಬೆಳೆಯುವ ದಪ್ಪ ಕಾಂಡವಿರುವ ಬಳ್ಳಿ) ವಿಶೇಷವಾಗಿ ಹ್ಯಗೋನಿಯ ಮಿಸ್ಟಾಕ್ಸ್ ಮತ್ತು ಯುವೇರಿಯ ರಿಯೋರಮ್ ಬಳ್ಳಿಗಳು ಧಾರಾಳವಾಗಿ ಕಂಡುಬರುತ್ತವೆ. ಘಟ್ಟಗಳ ಪಾದದೆಡೆ ತೇವಾಂಶಭರಿತ ಉದುರೆಲೆ ಕಾಡುಗಳು ಉತ್ತಮ ರೀತಿಯಲ್ಲಿ ರಕ್ಷಣೆಯಾಗಿರುವುದನ್ನು ಕಾಣಬಹುದು. ತೀರ ಪ್ರದೇಶದ ನಗರ ಕೇಂದ್ರಗಳ ಆಸುಪಾಸಿನಲ್ಲಿ ಸಮೃದ್ಧವಾಗಿ ಕಂಡುಬರುವ ಜೈವಿಕಾಂಶಗಳು ಘಟ್ಟದೆಡೆಗೆ ಕಡಿಮೆಯಾಗುತ್ತ ಬರುತ್ತವೆ.

**ಪಶ್ಚಿಮ ತೀರದ ಉಷ್ಣವಲಯ ನಿತ್ಯ ಹರಿದ್ವರ್ಣ ಸಸ್ಯವರ್ಗ:** ಘಟ್ಟಗಳ ಕೆಳ ಇಳಿಜಾರು ಮತ್ತು ಕಣಿವೆಗಳು ಪಶ್ಚಿಮತೀರದ ಉಷ್ಣವಲಯ ನಿತ್ಯ ಹರಿದ್ವರ್ಣ ಕಾಡುಗಳಿಗೆ ಅತ್ಯುತ್ತಮ ನಿದರ್ಶನಗಳಾಗಿವೆ. ಗುಂಪಾಗಿರುವ ಈ ಮೇಲಾವರಣದ ಕಾಡುಗಳು ಮಳೆಗಾಲದ ಬಿರುಮಳೆಯಿಂದ ಪೋಷಿತವಾಗಿ ಪರಮೋಚ್ಚ ಸಸ್ಯವರ್ಗಗಳಿಗೆ ಎಡೆಯಾಗಿದೆ. ನೀಳ, ಸಪೂರಕಾಂಡದ ವೃಕ್ಷಗಳು ೨೦ ಮೀಟರಿಗೂ ಹೆಚ್ಚು ಎತ್ತರಕ್ಕೆ ಅವಿಭಜಿತವಾಗಿ ಸಾಗಿ ಉಚ್ಚ ಶೃಂಗದ ವೃಕ್ಷಗಳಾಗಿ ಸಾಲುಗಟ್ಟಿ ನಿಂತಿರುತ್ತವೆ. ಪ್ರಬಲ ಮೇಲಾವರಣದ ವೃಕ್ಷಗಳಲ್ಲೂ ಅನೇಕ ಬಗೆಯನ್ನು ಕಾಣಬಹುದು. ಈ ಪೈಕಿ ಜೋಡಿ ಜೋಡಿಯಾಗಿ ಕಂಡುಬರುವ ವೃಕ್ಷಗಳೆಂದರೆ ಯುಕ್ಟರೋ ಕಾರ್ಪಸ್, ಕಿಂಗಿಯೋ ಡೆಂಡ್ರಾನ್ ವೆಟೇರಿಯ ಇವು ಸಾಧಾರಣವಾಗಿ ಸಮುದ್ರ ಸರಾಸರಿ ಮಟ್ಟಕ್ಕಿಂತ ೭೦ ರಿಂದ ೬೦೦ ಮೀಟರ್ ಎತ್ತರದಲ್ಲಿ ಬೆಳೆಯುತ್ತವೆ. ಅಲ್ಲದೆ ಈ ಬಗೆಯ ಕಾಡುಗಳಲ್ಲಿ ಇನ್ನೂ ಅನೇಕ ವಿಧದ ಗಿಡ, ಮರಗಳಿವೆ. ಕಾಡಿನೊಳಗಿನ ಜೈವಿಕ ವೈವಿಧ್ಯ ಮತ್ತು ಪ್ರಾದೇಶಿಕ ವಿಂಗಡಣೆ, ಸೌರಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನೀರು ಮತ್ತು ಕಾರ್ಬನ್ ಡೈ ಆಕ್ಸೈಡನ್ನು ಜೀವಾವಶ್ಯಕ ಕಾರ್ಬನಿಕ್ ಸಂಯುಕ್ತವಾಗಿ ಪರಿವರ್ತಿಸುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.

**ಒಳನಾಡಿನ ತೇವಾಂಶಭರಿತ ಉದುರೆಲೆ ಸಸ್ಯವರ್ಗ:** ಗಾಳಿಗೆ ವಿಮುಖವಾದ ಪರ್ವತಗಳ ಭಾಗದಲ್ಲಿ ಮಳೆ ಪ್ರಮಾಣ ಕಡಿಮೆಯಾಗುವುದರಿಂದ ಅದು ಇನ್ನೊಂದು ಬಗೆಯ ಪರಮೋಚ್ಚ ಸಸ್ಯವರ್ಗಕ್ಕೆ ಅವಕಾಶ ನೀಡುತ್ತದೆ – ಅದೇ ಒಳನಾಡ ತೇವಾಂಶಭರಿತ ಉದುರೆಲೆ ಸಸ್ಯವರ್ಗ. ಎಲೆಯಿದ್ದಾಗ ಈ ಬಗೆಯ ಕಾಡುಗಳ ಮೇಲಾವರಣ ಸಾಂದ್ರವಾಗಿರುತ್ತದೆ. ಆದರೆ ಶುಷ್ಕ ತಿಂಗಳುಗಳು ಎದುರಾದಾಗ ಬಾಷ್ಪವಿಸರ್ಜನೆಯಿಂದ ನೀರು ನಷ್ಟವಾಗುವುದನ್ನು ತಪ್ಪಿಸಲು ಹ್ರಸ್ವಾವಧಿಗೆ ಎಲೆಗಳು ಉದುರುವುದುಂಟು. ಎಲೆರಹಿತ ಅವಧಿಯಲ್ಲಿ ಈ ಬಗೆಯ ವೃಕ್ಷಗಳು ಹೂ ಬಿಡುತ್ತವೆ. ಬೆಳಗಾವಿಯಿಂದ ಕೊಡಗಿನವರೆಗೆ ಹಬ್ಬಿರುವ ಈ ತೇವಾಂಶಭರಿತ ಉದುರೆಲೆ ಕಾಡಿನ ಜಾಡು ಟೆಕ್ಟೋನ–ಡಿಲೇನಿಯ – ಲ್ಯಾಗರ್ ಸ್ಟ್ರೋಮಿಯ – ಟರ್ಮಿಟನೇಲಿಯ ಶ್ರೇಣಿಯ ವೃಕ್ಷಗಳಿಗೆ ನೆಲೆಯಾಗಿದೆ. ಈ ಶ್ರೇಣಿಯಲ್ಲಿ, ತೇಗ, ಮತ್ತು ಕಣಗಲು, ನಂದಿ ವೃಕ್ಷಗಳು ಸೇರುತ್ತವೆ. ಇವೆಲ್ಲ ಸ್ಥಳೀಯ ನಾಮಗಳು. ಘಟ್ಟಗಳ ಪೂರ್ವದ ಅಂಚು ಹಿಂದೊಮ್ಮೆ ಬಿದಿರಿನ ಮೆಲೆಯಿಂದ ಸಮೃದ್ಧವಾಗಿ ಆವರಿಸಿತ್ತು.

**ಒಳನಾಡ ಶುಷ್ಕ ಉದುರೆಲೆ ಸಸ್ಯವರ್ಗ:** ಬಯಲುಸೀಮೆಯ ಪೂರ್ವಭಾಗದ ಜೈವಿಕ ಪರಿಸರ ಅನೇಕ ಸಂರಕ್ಷಿತ ಪ್ರದೇಶಗಳಲ್ಲಿ ಪರಮೋಚ್ಚ ಶುಷ್ಕ ಉದುರೆಲೆ ಸಸ್ಯವರ್ಗ ಬೆಳೆಯಲು ಅನುಮಾಡಿಕೊಡುತ್ತದೆ. ಇಲ್ಲಿನ ಕಾಡಿನ ಮೇಲಾವರಣ ತೆರೆದ ಬಗೆಯದು. ಬೇಸಿಗೆಯಲ್ಲಿ ಎಲೆ ಕಳೆದುಕೊಂಡು ಮರಗಳು ಬೋಳಾಗಿರುತ್ತವೆ. ಏಪ್ರಿಲ್ ಮೇ ತಿಂಗಳಿನಲ್ಲಿ ಎಂದಿನಂತೆ ಮೊದಲ ಮಳೆಯಾದಾಗ ಚಿಗುರೆಲೆ ಕಾಣಿಸಕೊಳ್ಳುವ ಮೊದಲೇ ಮರಗಳೂ ಹೂ ಬಿಡುವ ಮತ್ತು ಹಣ್ಣಾಗುವ ಪ್ರಕ್ರಿಯೆ ಮುಗಿದುಹೋಗಿರುತ್ತದೆ.

**ಒಳನಾಡ ಕಂಟಿ ಮತ್ತು ಕುರುಚಲು ಸಸ್ಯವರ್ಗ:** ಕರ್ನಾಟಕದ ಅನೇಕ ಭಾಗಗಳಲ್ಲಿ – ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಗುಲಬರ್ಗ, ಬೀದರ್ ಜಿಲ್ಲೆಗಳ ಅನೇಕ ಭಾಗಗಳಲ್ಲಿ

ದೊಡ್ಡೆಲೆಯ ಉದುರೆಲೆ ಕಾಡುಗಳು ಸಣ್ಣ ಎಲೆಯ ವಿಶಾಲವಾಗಿ ಹರಡಿದ ಮರಗಳಿಗೆ ಎಡೆಗೊಟ್ಟಿರುವ ಸನ್ನಿವೇಶಗಳನ್ನು ಕಾಣಬಹುದು. ಈ ಬಗೆಯ ಕಾಡಿನ ಕೆಲವು ಉಳಿಕೆಯ ಪ್ರದೇಶಗಳಲ್ಲಿ ಅಕೇಶಿಯ–ಆಲ್ಬೀಸಿಯ ಮತ್ತು ಹಾರ್ಡ್‌ವಿಕಿಯ (ಸ್ಥಳೀಯ ಹೆಸರು ಜಾಲಿ, ಬಿಲ್ವಾರ, ಎಣ್ಣೆಮರ) ವರ್ಗದ ವೃಕ್ಷಗಳು ಬೆಳೆಯುತ್ತವೆ. ಬಯಲು ಪ್ರದೇಶದಲ್ಲಿ ಅನೇಕ ನೀರಾವರಿ ಕೆರೆಗಳು ಅಲ್ಲಲ್ಲೇ ಚುಕ್ಕಿ ಇಟ್ಟಂತೆ ದಟ್ಟೈಸಿರುವುದನ್ನು ಕಾಣಬಹುದು. ಈ ಬಗೆಯ ಕೆರೆಗಳಲ್ಲಿ ವಿಶೇಷ ಬಗೆಯ ಜಲಸಸ್ಯಗಳೂ ಬೆಳೆದಿರುತ್ತವೆ.

**ದಕ್ಷಿಣ ಉಷ್ಣವಲಯದ ಮಾಂಟೇನ್ ಸಸ್ಯವರ್ಗ:** ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳಲ್ಲಿ, ವಿಶೇಷವಾಗಿ ಕುದುರೆಮುಖ, ಬಾಬಾಬುಡನ್‌ಗಿರಿ, ಬಿಳಿಗಿರಿರಂಗನ ಬೆಟ್ಟದಲ್ಲಿ ೧,೫೦೦ ಮೀಟರ್ ಎತ್ತರಕ್ಕಿಂತಲೂ ಮೇಲೆ ಔನ್ನತ್ಯಕ್ಕೆ ಸಂಬಂಧಿಸಿದಂತೆ ಸಸ್ಯ ವರ್ಗದಲ್ಲೂ ವ್ಯತ್ಯಯವನ್ನು ಕಾಣಬಹುದು. ಈ ಸಸ್ಯವರ್ಗ ಮೂಲತಃ ಹುಲ್ಲುಗಾವಲಿನ ಸಸ್ಯವರ್ಗಕ್ಕೆ ಸಂಬಂಧಿಸಿದ್ದು. ಇದರ ಜೊತೆಗೆ ಅಲ್ಲಲ್ಲೇ ತೇಪೆಹಾಕಿದಂತೆ ವೃಕ್ಷಗಳ ನೆಲೆಯನ್ನೂ ಕಾಣಬಹುದು. ದಕ್ಷಿಣ ಉಷ್ಣವಲಯದ ಮಾಂಟೇನ್ ಸಸ್ಯವರ್ಗ ಈ ಬಗೆಯ ದೃಶ್ಯವನ್ನು ನಿರ್ಮಿಸುತ್ತದೆ. ಹುಲ್ಲುಗಾವಲಿನ ಪರ್ವತಗಳಲ್ಲಿ ಅತ್ಯಂತ ತ್ವರಿತಗತಿಯಲ್ಲಿ ಗಿಡಗಳು ಬೆಳೆದು ಅಷ್ಟೇ ತ್ವರಿತವಾಗಿ ಅವು ಜೀವನಚಕ್ರ ಮುಗಿಸುವ ಗಿಡಗಳನ್ನೂ ನೋಡಬಹುದು. ಇಂಥ ತೇವಾಂಶವಿರುವ ಅರಣ್ಯಗಳ ಬಹುಭಾಗ ಈಗಾಗಲೇ ಜೈವಿಕ ಅಂಶಗಳಿಂದಾಗಿ ಸಾಕಷ್ಟು ಬದಲಾವಣೆಯಾಗಿದೆ. ಕರ್ನಾಟಕದಲ್ಲಿ ಸಸ್ಯ ವರ್ಗಗಳ ಚಟುವಟಿಕೆಗಳ ಸೂಚಿಯನ್ನು ಪರಿಶೀಲಿಸಿದಾಗ ಜೈವಿಕ ಅಂಶಗಳಿಂದಾಗಿ ವಿಶೇಷವಾಗಿ ಮಾನವ ಪ್ರವೇಶದಿಂದಾಗಿ ನೈಸರ್ಗಿಕ ಸಸ್ಯ ಸಂಪತ್ತು ಅನೇಕ ಬಗೆಯ ಬದಲಾವಣೆ ಹೊಂದಿರುವುದು ಸ್ಪಷ್ಟವಾಗುತ್ತದೆ. ಕಡಲತೀರದಲ್ಲಿ ಎಲ್ಲೆಲ್ಲಿ ಜನವಸತಿಗಳಿದೆಯೋ ಅಲ್ಲಿ ತೆಂಗಿನ ದಟ್ಟ ಮೇಲಾವರಣ ಎದ್ದು ಕಾಣುತ್ತದೆ. ಶುಷ್ಕ ವಿಧದ ಸಸ್ಯವರ್ಗದ ಪರಮೋಚ್ಚ ಬೆಳವಣಿಗೆ ಅವುಗಳ ವಿಶಿಷ್ಟ ಮೇಲಾವರಣ, ಇದರ ಕೆಳಗೆ ತಳಮಟ್ಟದಲ್ಲಿ ಬೆಳೆದ ಪೊದೆಗಳು, ಗಿಡಗೆಂಟೆಗಳೆಲ್ಲವೂ ತೀರ ಒಳಗೆ, ಕಣ್ಣಿಗೆ ಥಟ್ಟೆಂದು ಗೋಚರಿಸದ ಭಾಗಗಳಲ್ಲಿ ಅಥವಾ ಮೀಸಲು ಅರಣ್ಯಗಳಲ್ಲಿ ಅಲ್ಲಲ್ಲೇ ತೇಪೆಯಂತೆ ಕಾಣುತ್ತವೆ. ಉರುವಲಿಗಾಗಿ ಮರ ಕಡಿಯುವುದು, ಸಾಕುಪ್ರಾಣಿಗಳು ಅದರಲ್ಲೂ ವಿಶೇಷವಾಗಿ ಮೇಕೆಗಳು ಉಳಿದಿರುವ ಮೂಲ ಸಸ್ಯಾವರಣವನ್ನು ನಾಶಭೀತಿಗೆ ತಳ್ಳಿವೆ. ಅರಣ್ಯಗಳನ್ನು ಬೇಲಿ ಹಾಕಿ ಸಂರಕ್ಷಿಸದಿದ್ದಲ್ಲಿ ಸಾವಧಾನವಾಗಿ ಅವು ಹುಲ್ಲುಗಾವಲುಗಳಾಗಿ ಪರಿವರ್ತಿತವಾಗಿ ಅಂಥ ಭಾಗಗಳಲ್ಲಿ ವೃಕ್ಷಗಳು ಅಲ್ಲಲ್ಲೇ ಚದುರಿಹೋದಂತೆ ಬಿಡಿಬಿಡಿಯಾಗಿ ಬೆಳೆದಿರುತ್ತವೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಕಾಡು ಕಡಿದು ಬೋಳು ಮಾಡಲಾಗಿದೆ. ತೀರ ತಗ್ಗಾದ ಜಾಗಗಳನ್ನು ಬತ್ತದ ಗದ್ದೆಗಳಾಗಿ ಪರಿವರ್ತಿಸಲಾಗಿದೆ. ಬೆಟ್ಟ, ಗುಡ್ಡಗಳ ಪ್ರಾಂತ್ಯದಲ್ಲಿ ಕೆಲವೆಡೆ ನೆಡುತೋಪುಗಳನ್ನು ಎಬ್ಬಿಸಿರುವುದನ್ನೂ ಕಾಣಬಹುದು.

## ಅರಣ್ಯ

ಅರಣ್ಯ ಸರ್ವೇಕ್ಷಣ ಸಂಸ್ಥೆಯು (ಡೆಹ್ರಾಡೂನ್) ಪ್ರಕಟಿಸಿರುವ ಭಾರತ ಅರಣ್ಯ ಸ್ಥಿತಿಗತಿ ವರದಿ ೨೦೧೧ ರ ಪ್ರಕಾರ ಭಾರತದ ೩೨೮.೭೩ ದಶಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ ೬೯.೨೦ ದಶಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು, ಇದು ಶೇಕಡಾವಾರು ೨೧.೦೫ ಆಗಿರುತ್ತದೆ. ಇದರಲ್ಲಿ ೮.೩೫ ದಶಲಕ್ಷ ಹೆಕ್ಟೇರ್ ಅತಿ ಸಾಂದ್ರತೆ ಅರಣ್ಯ (ಚಂಡ ಸಾಂದ್ರತೆ ೭೦% ಹೆಚ್ಚು), ೩೨.೦೭ ದಶಲಕ್ಷ ಹೆಕ್ಟೇರ್ ಮಧ್ಯಮ ಸಾಂದ್ರತೆ ಅರಣ್ಯ (ಸಾಂದ್ರತೆ ೪೦ ರಿಂದ ೭೦%) ಹಾಗೂ ೨೮.೭೮ ದಶಲಕ್ಷ ಹೆಕ್ಟೇರ್ ಅರಣ್ಯ (ಸಾಂದ್ರತೆ ೧೦ ರಿಂದ ೪೦%) ಪ್ರದೇಶಗಳಾಗಿರುತ್ತವೆ. ಇವುಗಳಲ್ಲದೆ ೪.೨೨ ದಶಲಕ್ಷ ಹೆಕ್ಟೇರ್ ಕುರುಚಲು ಕಾಡುಗಳು (ಸಾಂದ್ರತೆ ೧೦% ಕಡಿಮೆ) ಇವೆ. ಅಲ್ಲದೆ ಅರಣ್ಯಗಳ ಹೊರಗೆ ಹೊದಿಕೆ ಇರುವ ಸುಮಾರು ೯.೦೮ ದಶಲಕ್ಷ ಹೆಕ್ಟೇರ್ ಪ್ರದೇಶವಿರುತ್ತದೆ. ಇವುಗಳೆಲ್ಲವನ್ನು ಒಟ್ಟುಗೂಡಿಸಿದರೆ ಭಾರತದಲ್ಲಿ ಒಟ್ಟು ೭೮.೨೮ ದಶ ಲಕ್ಷ ಅರಣ್ಯ ಭೂ ಪ್ರದೇಶವಿದ್ದು ಇದು ಭೌಗೋಳಿಕ ಪ್ರದೇಶದ ಶೇಕಡ ೨೩.೮೧ ಭಾಗವಾಗುತ್ತದೆ.

## ಭಾರತ ಮತ್ತು ಕರ್ನಾಟಕದಲ್ಲಿ ೨೦೦೮–೦೯ ರಲ್ಲಿದ್ದ ಅರಣ್ಯ ಹಾಗೂ ಅರಣ್ಯಗಳಾಚಿನ ವೃಕ್ಷಾವರಣ ಪ್ರದೇಶ ( ವಿಸ್ತೀರ್ಣ ದಶ ಲಕ್ಷ ಹೆಕ್ಟೇರುಗಳಲ್ಲಿ)

| ಕ್ರಮ ಸಂಖ್ಯೆ | ಅರಣ್ಯ ಹಾಗೂ ವೃಕ್ಷ ವರ್ಗಗಳು | ಭಾರತ | | ಕರ್ನಾಟಕ | |
|---|---|---|---|---|---|
| | | ವಿಸ್ತೀರ್ಣ | ಭೂಭಾಗಕ್ಕೆ % | ವಿಸ್ತೀರ್ಣ | ಭೂಭಾಗಕ್ಕೆ % |
| ೧ | ಒಟ್ಟು ಭೌಗೋಳಿಕ ಅರಣ್ಯ | ೩೨೮.೭೩ | ೧೦೦ | ೧೯.೧೮ | ೧೦೦ |
| ೨ | ದಟ್ಟ ಸಾಂದ್ರತೆ ಅರಣ್ಯ | ೮.೩೫ | ೨.೫೪ | ೦.೧೮ | ೦೦.೯೪ |
| ೩ | ಮಧ್ಯಮ ಸಾಂದ್ರತೆ ಅರಣ್ಯ | ೩೨.೦೭ | ೯.೭೬ | ೨.೦೨ | ೧೦.೫೩ |
| ೪ | ತೆರೆದ ಅರಣ್ಯ | ೨೮.೭೮ | ೮.೭೫ | ೧.೪೨ | ೦೭.೪೦ |
| ೫ | ಒಟ್ಟು ಅರಣ್ಯ ಪ್ರದೇಶ ( ೨+೩+೪) | ೬೯.೨೦ | ೨೧.೦೫ | ೩.೬೨ | ೧೮.೮೭ |
| ೬ | ಅರಣ್ಯಗಳಾಚೆಗಿನ ವೃಕ್ಷಾವರಣ | ೯.೦೮ | ೨.೭೬ | ೦.೫೭ | ೨.೯೮ |
| ೭ | ಅರಣ್ಯ +ವೃಕ್ಷ ಪ್ರದೇಶ (೫+೬) | ೭೮.೨೮ | ೨೩.೮೧ | ೪.೧೯ | ೨೧.೮೫ |
| ೮ | ಕುರುಚಲು ಅರಣ್ಯ | ೪.೨೨ | ೧.೨೮ | ೦.೩೨ | ೧.೬೭ |
| | ಕಾನೂನು ಬದ್ಧವಾಗಿ ವರ್ಗೀಕರಿಸಿ ದಾಖಲಿಸಿದ ಅರಣ್ಯ ಪ್ರದೇಶ (ದಶ ಲಕ್ಷ ಹೆಕ್ಟೇರ್) | | | | |
| ೧ | ಕಾಯ್ದಿಟ್ಟ ಅರಣ್ಯ | ೪೩.೦೬ | ೫೫.೯೭ | ೨.೮೭ | ೭೪.೯೪ |
| ೨ | ರಕ್ಷಿತ ಅರಣ್ಯ | ೨೦.೬೨ | ೨೬.೭೯ | ೦.೩೯ | ೧೦.೧೮ |
| ೩ | ಅವರ್ಗೀಯ ಅರಣ್ಯ | ೧೩.೨೭ | ೧೭.೨೪ | ೦.೫೭ | ೧೪.೮೮ |
| ೪ | ಒಟ್ಟು ಅರಣ್ಯ | ೭೬.೯೫ | ೧೦೦ | ೩.೮೩ | ೧೦೦ |

## ಭಾರತ ಮತ್ತು ಕರ್ನಾಟಕದ ವಿವಿಧ ಅರಣ್ಯ ವಿಧಗಳು– ಅರಣ್ಯ ಹೊದಿಕೆ (ಚಾಂಪಿಯನ್ ಮತ್ತು ಸೇಥ್ ವರ್ಗೀಕರಣ)

| ಕ್ರಮ ಸಂಖ್ಯೆ | ಅರಣ್ಯ ಗುಂಪು ಸಂಖ್ಯೆ | ವಿವಿಧ ಅರಣ್ಯ ವಿಧಗಳು | ಶೇಕಡಾವಾರು ಅರಣ್ಯ ಹೊದಿಕೆ | |
|---|---|---|---|---|
| | | | ಭಾರತ | ಕರ್ನಾಟಕ |
| ೧ | ೧ | ಉಷ್ಣವಲಯದ ಆರ್ದ್ರ ನಿತ್ಯ ಹರಿದ್ವರ್ಣ ಅರಣ್ಯಗಳು | ೦೨.೯೨ | ೧೬.೭೦ |
| ೨ | ೨ | ಉಷ್ಣವಲಯದ ಅರೆ ನಿತ್ಯ ಹರಿದ್ವರ್ಣ ಅರಣ್ಯಗಳು | ೧೩.೭೯ | ೧೩.೫೬ |
| ೩ | ೩ | ಉಷ್ಣವಲಯದ ಆರ್ದ್ರ ಉದುರೆಲೆ ಅರಣ್ಯಗಳು | ೧೯.೭೩ | ೨೪.೨೦ |
| ೪ | ೫ | ಉಷ್ಣವಲಯದ ಶುಷ್ಕ ಉದುರೆಲೆ ಅರಣ್ಯಗಳು | ೪೧.೮೭ | ೨೪.೩೪ |
| ೫ | ೬ | ಉಷ್ಣವಲಯದ ಕುರುಚಲು ಅರಣ್ಯಗಳು | ೨.೨೫ | ೧೧.೯೩ |
| ೬ | ೮ | ಉಷ್ಣವಲಯದ ಅಗಲ ಎಲೆಯ ಪರ್ವತಾರಣ್ಯಗಳು | ೨.೬೯ | ೧.೦೩ |
| ೭ | ೪,೭,೯ ರಿಂದ ೧೬ | ಪೈನ್ ಆಲ್ಪೈನ್, ಹಿಮಾಲಯನ್, ಹಾಗೂ ಇತರ ಅರಣ್ಯಗಳು | ೧೧.೬೮ | ೦.೦೦ |
| ೮ | – | ನೆಡುತೋಪುಗಳು/ಅರಣ್ಯದಾಚಿನ ಮರಗಳು | ೫.೦೭ | ೮.೨೪ |
| | | ಒಟ್ಟು | ೧೦೦ | ೧೦೦ |

## ೨೦೦೭-೦೮ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾವಾರು ಅರಣ್ಯ ಪ್ರದೇಶ

(ಪುನರ್ ರಚಿತ ತಜ್ಞ ಸಮಿತಿ-೧ ರ ವರದಿಯ ಮೇರೆಗೆ)

(ಚದರ ಕಿಲೋಮೀಟರ್‌ಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲೆಗಳು | ಭೂ ಪ್ರದೇಶ | ಅರಣ್ಯ ಪ್ರದೇಶ | ಪ್ರದೇಶದಲ್ಲಿ ಶೇಕಡಾವಾರು ಅರಣ್ಯ ಪ್ರದೇಶ |
|---|---|---|---|---|
| ೧ | ಬೆಂಗಳೂರು | ೨೧೯೦ | ೧೨೨.೨೫ | ೫.೫೦ |
| ೨ | ಬೆಂಗಳೂರು-ಗ್ರಾಮಾಂತರ | ೫೮೧೫ | ೧೧೬೪.೮೫ | ೨೦.೦೩ |
| ೩ | ರಾಮನಗರ | | | |
| ೪ | ಬೆಳಗಾವಿ | ೧೩೪೧೫ | ೨೦೬೩.೨ | ೧೫.೩೪ |
| ೫ | ಬಳ್ಳಾರಿ | ೮೪೫೦ | ೧೩೭೮.೫೨ | ೧೬.೩೭ |
| ೬ | ಬೀದರ್ | ೫೪೪೮ | ೪೫೬.೧೬ | ೮.೩೭ |
| ೭ | ಬಿಜಾಪುರ | ೧೦೪೯೪ | ೮೧.೧೧ | ೦.೭೭ |
| ೮ | ಬಾಗಲಕೋಟೆ | ೬೫೭೫ | ೮೩೮.೯೩ | ೧೨.೭೨ |
| ೯ | ಚಿಕ್ಕಮಗಳೂರು | ೭೨೦೧ | ೨೭೫೬.೫೧ | ೩೮.೨೮ |
| ೧೦ | ಚಿತ್ರದುರ್ಗ | ೮೪೪೦ | ೧೨೮೭.೧೮ | ೧೫.೩೫ |
| ೧೧ | ದಾವಣಗೆರೆ | ೫೯೨೪ | ೫೪೪.೩೪ | ೯.೦೫ |
| ೧೨ | ದಕ್ಷಿಣ ಕನ್ನಡ | ೪೫೬೦ | ೨೦೧೨.೧೮ | ೩೩.೪೪ |
| ೧೩ | ಉಡುಪಿ | ೩೮೮೦ | ೧೭೨೦.೫೭ | ೪೭.೮೨ |
| ೧೪ | ಧಾರವಾಡ | ೪೨೬೦ | ೪೬೮.೫೨ | ೧೧.೦೮ |
| ೧೫ | ಗದಗ್ | ೪೬೫೬ | ೩೩೩.೩೭ | ೭.೧೬ |
| ೧೬ | ಹಾವೇರಿ | ೪೮೨೩ | ೪೩೨.೮ | ೮.೯೨ |
| ೧೭ | ಗುಲಬರ್ಗಾ/ಯಾದಗಿರಿ | ೧೬೨೨೪ | ೯೯೭.೭೬ | ೬.೧೫ |
| ೧೮ | ಹಾಸನ | ೬೮೧೪ | ೮೭೯.೨೫ | ೧೨.೯೦ |
| ೧೯ | ಕೊಡಗು | ೪೧೦೨ | ೨೮೭೦.೯೯ | ೬೯.೧೦ |
| ೨೦ | ಕೋಲಾರ | ೮೨೨೩ | ೧೦೬೬.೨೨ | ೧೨.೯೭ |
| ೨೧ | ಚಿಕ್ಕಬಳ್ಳಾಪುರ | | | |
| ೨೨ | ಮಂಡ್ಯ | ೪೯೬೧ | ೬೬೪.೬೧ | ೧೩.೪೦ |
| ೨೩ | ಮೈಸೂರು | ೬೮೫೪ | ೧೪೪೯.೮೭ | ೨೩.೧೩ |
| ೨೪ | ಚಾಮರಾಜನಗರ | ೫೧೦೧ | ೨೭೯೧.೪೬ | ೪೯.೧೦ |
| ೨೫ | ರಾಯಚೂರು | ೬೮೨೭ | ೩೨೫.೫೭ | ೫.೮೬ |
| ೨೬ | ಕೊಪ್ಪಳ | ೭೧೮೯ | ೪೩೦.೬೬ | ೫.೦೯ |
| ೨೭ | ಶಿವಮೊಗ್ಗ | ೮೪೭೭ | ೬೬೩೧.೪೪ | ೭೮.೩೪ |
| ೨೮ | ತುಮಕೂರು | ೧೦೫೯೭ | ೨೯೧.೬೭ | ೧೨.೧೯ |
| ೨೯ | ಉತ್ತರ ಕನ್ನಡ | ೧೦೨೯೧ | ೮೨೯೬.೪೬ | ೮೦.೬೨ |
| | **ಒಟ್ಟು** | **೧೯೧೭೯೧** | **೪೩೩೫೬.೪೫** | **೨೨.೬೧** |

## ೨೦೦೭–೦೮ನೇ ಸಾಲಿನಲ್ಲಿ ವಿವಿಧ ವರ್ಗಗಳಲ್ಲಿ ಇರುವ ಅರಣ್ಯ ಪ್ರದೇಶ

(ಪುನರ್ ರಚಿತ ತಜ್ಞ ಸಮಿತಿ–೧ ರ ವರದಿಯ ಮೇರೆಗೆ)

(ವಿಸ್ತೀರ್ಣ ಚದರ ಕಿಲೋಮೀಟರ್‌ಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲೆಗಳು | ಭೂ ಪ್ರದೇಶ | ಅರಣ್ಯ ಪ್ರದೇಶ | ಪ್ರದೇಶದಲ್ಲಿ ಶೇಕಡಾವಾರು ಅರಣ್ಯ ಪ್ರದೇಶ | ಗ್ರಾಮಾಂತರ ಅರಣ್ಯ | ಖಾಸಗಿ ಅರಣ್ಯ | ಮೊತ್ತ |
|---|---|---|---|---|---|---|---|
| ೧ | ಬೆಂಗಳೂರು | ೨೪.೯೨ | ೨.೭೪ | ೯೪.೫೯ | – | – | ೧೨೨.೨೫ |
| ೨ | ಬೆಂಗಳೂರು–ಗ್ರಾ | ೯೮೦.೫೧ | ೮೩.೦೪ | ೧೦೧.೩೦ | – | – | ೧೧೬೪.೮೫ |
| ೩ | ರಾಮನಗರ | | | | | | |
| ೪ | ಬೆಳಗಾವಿ | ೧೮೯೦.೯೭ | ೧೦.೩ | ೧೫೯.೬೦ | ೨.೩೩ | – | ೨೦೬೩.೨ |
| ೫ | ಬಳ್ಳಾರಿ | ೯೪೭.೮೩ | ೨೧.೬೯ | ೧೦೯.೦೩ | – | – | ೧೩೭೮.೫೨ |
| ೬ | ಬೀದರ್ | ೫೪.೬೭೧ | ೨೪.೯೧ | ೨೭೪.೯೮ | – | ೧.೬೦ | ೪೫೬.೧೬ |
| ೭ | ಬಿಜಾಪುರ | ೧೭.೨೨ | ೦.೧೧ | ೬೩.೭೮ | – | – | ೮೧.೧೧ |
| ೮ | ಬಾಗಲಕೋಟೆ | ೭೯೦.೬೯ | ೦ | ೪೮.೨೪ | – | – | ೮೩೮.೯೩ |
| ೯ | ಚಿಕ್ಕಮಗಳೂರು | ೧೨೭೭.೦೧ | ೩೪೮.೪೭ | ೧೧೨೨.೧೭ | ೮.೮೬ | – | ೨೭೫೬.೫೧ |
| ೧೦ | ಚಿತ್ರದುರ್ಗ | ೭೬೫.೧೧ | ೭೨.೫೯ | ೪೪೯.೪೮ | – | – | ೧೨೮೭.೧೮ |
| ೧೧ | ದಾವಣಗೆರೆ | ೪೬೦.೯೪ | ೨೭.೬೪ | ೫೫.೭೬ | | | ೫೪೪.೩೪ |
| ೧೨ | ದಕ್ಷಿಣ ಕನ್ನಡ | ೧೩೧೧.೭೪ | ೦.೧೫ | ೬೪೭.೮೨ | – | ೫೨.೪೭ | ೨೦೧೨.೧೮ |
| ೧೩ | ಉಡುಪಿ | ೯೫೧.೩೪ | ೧೬.೮೭ | ೭೫೨.೩೬ | | – | ೧೭೨೦.೫೭ |
| ೧೪ | ಧಾರವಾಡ | ೪೪೯.೧ | ೨.೮೮ | ೧೬.೫೪ | – | – | ೪೬೮.೫೨ |
| ೧೫ | ಗದಗ್ | ೩೨೦.೯೩ | ೩.೫೬ | ೮.೮೮ | | – | ೩೩೩.೩೭ |
| ೧೬ | ಹಾವೇರಿ | ೩೪೬.೩೧ | ೯.೮೮ | ೭೬.೬೧ | | – | ೪೩೨.೮ |
| ೧೭ | ಗುಲಬರ್ಗಾ/ ಯಾದಗಿರಿ | ೨೬೯.೨೬ | ೨೩೦.೫ | ೪೯೮.೦೦ | – | – | ೯೯೭.೭೬ |
| ೧೮ | ಹಾಸನ | ೪೧೨.೧೩ | ೯೦.೧೮ | ೩೭೬.೨೫ | ೦.೬೯ | – | ೮೭೯.೨೫ |
| ೧೯ | ಕೊಡಗು | ೧೩೬೬.೯೪ | ೧೦೫.೪೫ | ೧೫೯೮.೬ | – | | ೨೮೭೦.೯೯ |
| ೨೦ | ಕೋಲಾರ | ೮೩೨.೭೯ | ೮೪.೫೧ | ೧೪೫.೮೦ | ೩.೧೨ | – | ೧೦೬೬.೨೨ |
| ೨೧ | ಚಿಕ್ಕಬಳ್ಳಾಪುರ | | | | | | |
| ೨೨ | ಮಂಡ್ಯ | ೧೯೮.೬೧ | ೨೦.೬೯ | ೪೪೫.೩೧ | – | – | ೬೬೪.೬೧ |
| ೨೩ | ಮೈಸೂರು | ೧೨೦೮.೭೫ | ೫.೫೩ | ೨೩೫.೫೯ | – | – | ೧೪೪೯.೮೭ |
| ೨೪ | ಚಾಮರಾಜನಗರ | ೨೬೯೮.೪೭ | ೬೩.೮೮ | ೨೯.೧೧ | | – | ೨೭೯೧.೪೬ |
| ೨೫ | ರಾಯಚೂರು | ೧೮೬.೩ | ೪೧.೭೫ | ೯೭.೫೨ | – | – | ೩೨೫.೫೭ |
| ೨೬ | ಕೊಪ್ಪಳ | ೧೫೧.೭೧ | ೫೫.೫೪ | ೨೨೩.೪೧ | | – | ೪೩೦.೬೬ |
| ೨೭ | ಶಿವಮೊಗ್ಗ | ೩೧೨೭.೬೬ | ೧೧೯೦.೯೯ | ೨೩೦೫.೩೫ | ೭.೪೪ | – | ೬೬೩೧.೪೪ |
| ೨೮ | ತುಮಕೂರು | ೭೮೦.೬ | ೧೨೯.೨೪ | ೩೮೧.೪೦ | ೦.೪೩ | – | ೧೨೯೧.೬೭ |
| ೨೯ | ಉತ್ತರ ಕನ್ನಡ | ೭೭೨೭.೭೧ | ೫೪೨.೧೩ | ೦.೪೪ | ೨೬.೧೮ | – | ೮೨೯೬.೪೬ |
| | **ಒಟ್ಟು** | **೨೯೫೫೦.೧೯** | **೩೫೮೫.೨೨** | **೧೦೧೧೭.೯೨** | **೪೯.೦೫** | **೫೪.೦೭** | **೩೩೫೬.೪೫** |

## ಪ್ರತಿ ಅರಣ್ಯ ವಿಭಾಗದಡಿ ಬರುವ ಪ್ರದೇಶ ಮತ್ತು ಸಸಿದಾಸ್ತಾನನ್ನು ಬೆಳೆಸುವ ಅಂದಾಜು
## ೧೯೯೯-೨೦೦೦ದಲ್ಲಿದ್ದಂತೆ

| ಕ್ರಮ ಸಂಖ್ಯೆ | ವಿಧ | ಒಟ್ಟು ಅರಣ್ಯಪ್ರದೇಶದ ಶೇಕಡಾವಾರು ಪ್ರತಿ ವಿಧದಲ್ಲೂ ಬರುವ | ಅರಣ್ಯ ಪ್ರದೇಶ (ಸಾವಿರ ಹೆಕ್ಟೇರುಗಳಲ್ಲಿ) ಪ್ರತಿ ಹೆಕ್ಟೇರಿಗೆ ಸಸ್ಯಗಳನ್ನು ನೆಡುವುದು | ಪ್ರತಿ ವಿಧದ ಸಸಿಗಳನ್ನು ಬೆಳೆಯುವುದು (ಮಿಲಿಯನ್ ಘನ ಮೀಟರ್) | |
|---|---|---|---|---|---|
| ೧ | ನಿತ್ಯಹರಿದ್ವರ್ಣ ಮತ್ತು ಅರೆ ನಿತ್ಯಹರಿದ್ವರ್ಣ | ೧೫.೧೫ | ೫೮೦ | ೧೭೫ | ೧೦೧.೫೦ |
| ೨ | ಅತಿ ಉದುರೆಲೆ | ೧೫.೧೦ | ೫೭೮ | ೧೦೦ | ೫೭.೮೦ |
| ೩ | ಶುಷ್ಕ ಉದುರೆಲೆ | ೧೮.೯೯ | ೭೨೭ | ೫೦ | ೩೬.೩೫ |
| ೪ | ಕುರುಚಲು ಮತ್ತು ಕಂಟಿ | ೨೧.೭೯ | ೮೩೪ | ೨೫ | ೨೦.೪೫ |
| ೫ | ವೃಕ್ಷರಹಿತ | ೨೮.೯೭ | ೧,೧೦೯ | – | – |
| | **ಒಟ್ಟು** | ೧೦೦.೦೦ | ೩,೮೨೮ | – | ೨೧೬.೧ |

## ನಿರ್ವಹಣೆ, ಕಾನೂನು ಸ್ಥಿತಿಗತಿ ಮತ್ತು ಬಗೆಯನ್ನಾಧರಿಸಿದ ಅರಣ್ಯ ಪ್ರದೇಶ

| ಕ್ರ.ಸಂ | ವಿವರಗಳು | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|---|
| 1. | ನಿರ್ವಹಣೆಯ ಮೂಲಕ (ಅ ಇಂದ ಈ ವರೆಗೆ) | ೩,೮೨೮ | ೩,೮೨೮ | ೩,೮೨೮ | ೩,೮೨೮ |
| | ಅ. ಅರಣ್ಯ ಇಲಾಖೆ | ೩,೪೦೯ | ೩,೪೦೯ | ೩,೪೦೯ | ೩,.೪೦೯ |
| | ಆ. ಕಂದಾಯ ಇಲಾಖೆ | ೩೭೬ | ೩೭೬ | ೩೭೬ | ೩೭೬ |
| | ಇ. ಕಾರ್ಪೋರೇಟ್ ಸಂಸ್ಥೆಗಳು | ೧೨ | ೧೨ | ೧೨ | |
| | ಈ. ಖಾಸಗಿ | ೩೧ | ೩೧ | ೩೧ | ೩೧ |
| ೨ | ಕಾನೂನು ಸ್ಥಿತಿ ಇರುವಂತೆ (ಅ ಇಂದ ಉವರೆಗೆ) | ೩,೮೨೮ | ೩,೮೨೮ | ೩,೮೨೮ | ೩,೮೨೮ |
| | ಅ. ರಾಜ್ಯ/ಮೀಸಲು ಅರಣ್ಯ | ೨,೮೬೯ | ೨,೮೬೯ | ೨,೮೬೯ | ೨,೮೬೯ |
| | ಆ. ಕಿರಿದು ಅಥವಾ ರಕ್ಷಿತ ಅರಣ್ಯ | ೩೯೩ | ೩೯೩ | ೩೯೩ | ೩೯೩ |
| | ಇ. ವರ್ಗೀಕರಿಸದ ಅರಣ್ಯ | ೫೨೩ | ೫೨೩ | ೫೨೩ | ೫೨೩ |
| | ಈ. ಗ್ರಾಮ ಅರಣ್ಯ | ೧೨ | ೧೨ | ೧೨ | ೧೨ |
| | ಉ. ಖಾಸಗಿ ಅರಣ್ಯ | ೩೧ | ೩೧ | ೩೧ | ೩೧ |
| ೩ | ಬಗೆಯನ್ನು ಆಧರಿಸಿ (ಅ ಇಂದ ಊ ವರೆಗೆ) | ೩,೮೨೮ | ೩,೮೨೮ | ೩,೮೨೮ | ೩,೮೨೮ |
| | ಅ. ನಿತ್ಯ ಹರಿದ್ವರ್ಣ ಅರಣ್ಯ | ೫೮೦ | ೫೮೦ | ೫೮೦ | ೫೮೦ |
| | ಆ. ಅರೆ ನಿತ್ಯಹರಿದ್ವರ್ಣ ಅರಣ್ಯ | – | – | – | – |
| | ಇ. ತೇವಾಂಶಭರಿತ ಉದುರೆಲೆ ಅರಣ್ಯ | ೫೭೮ | ೫೭೮ | ೫೭೮ | ೫೭೮ |
| | ಈ. ಶುಷ್ಕ ಉದುರೆಲೆ ಅರಣ್ಯ | ೭೨೭ | ೭೨೭ | ೭೨೭ | ೭೨೭ |
| | ಉ. ಕುರುಚಲು ಮತ್ತು ಕಂಟಿ ಅರಣ | ೮೩೪ | ೮೩೪ | ೮೩೪ | ೮೩೪ |
| | ಊ. ಇತರ (ಅರಣ್ಯೀಕರಣವಾಗದ) | ೧,೧೦೯ | ೧,೧೦೯ | ೧,೧೦೯ | ೧,೧೦೯ |

ಮೂಲ: ಅರಣ್ಯ ಇಲಾಖೆ

## ಅರಣ್ಯದ ಪ್ರಮುಖ ಉತ್ಪನ್ನಗಳು

| ಕ್ರ. ಸಂ | ವಿವಿಧ ಬಗೆಯ ಉತ್ಪನ್ನಗಳು | ಮಾನಕ | ೨೦೦೧-೦೨ | ೨೦೦೧-೦೩ | ೨೦೦೧-೦೪ | ೨೦೦೧-೦೫ |
|---|---|---|---|---|---|---|
| ೧. | ನಾಟ | | | | | |
| | ಅ. ಬೀಟೆಮರ | ಘನ ಮೀಟರು | ೮,೭೪೯ | ೮,೪೦೧ | ೭,೭೧೯ | ೩,೩೪೨ |
| | ಆ. ತೇಗದ ಮರ | ಘನ ಮೀಟರು | ೧೨,೦೦೨ | ೪,೭೪೯ | ೩,೭೫೨ | ೨,೮೪೯ |
| | ಇ. ಇತರ ಬಗೆಯ ನಾಟಗಳು | ಘನ ಮೀಟರು | ೬೭,೨೬೬ | ೫೬.೫೭೩ | ೫೨,೨೭೬ | ೧೯,೮೦೨ |
| ೨ | ಪಲ್ಪ್ ಮರ | ಘನ ಮೀಟರು | ೧,೨೯,೨೨೨ | ೨೭,೧೮೦ | ೨೮,೫೫೭ | ೯,೫೪೩ |
| ೩ | ನೀಲಗಿರಿ | ಘನ ಮೀಟರು | ೬೩,೩೯೩ | ೨೯೯ | ೪,೫೧೨ | ೨೦,೯೫೫ |
| ೩ | ಬೆಂಕಿಕಡ್ಡಿ ಮರ | ಘನ ಮೀಟರು | ೭೬ | ೫೮ | ೧,೫೦೨ | ೧೩೬ |
| ೫ | ಕುಯ್ದು ಮರ | ಘನ ಮೀಟರು | ೫,೧೨೧ | ೬,೬೭೭ | ೧,೩೨೯ | ೫೯೬ |
| ೬ | ಕಂಬಕ್ಕಾಗಿ ಬಳಸುವ ನಾಟ ಮರಗಳು | ಘನ ಮೀಟರು | ೫೪,೦೫೬ | ೩೮,೧೩೫ | ೨೯,೭೧೧ | ೪೬,೭೭೯ |
| ೭ | ಉರುವಲು | ಘನ ಮೀಟರು | ೩,೧೩,೪೫೩ | ೨,೩೦,೦೯೯ | ೨,೫೭,೬೮೩ | ೧,೪೩,೭೯೧ |
| ೮ | ಬಿದಿರು | ಘನ ಮೀಟರು | ೧, ೯೧,೧೫೨ | ೨,೦೨,೭೯೧ | ೧,೦೬,೦೬೧ | ೯,೫೪,೮೦೯ |
| ೯ | ಶ್ರೀಗಂಧ | ಟನ್ನು | ೬೨ | ೯೫ | ೭೦ | ೨೪ |

ಮಾಹಿತಿ ಮೂಲ : ಅರಣ್ಯ ಇಲಾಖೆ

## ಅರಣ್ಯದಿಂದ ಆದಾಯ

### ೧೯೯೫-೯೬ ರಿಂದ ೨೦೦೭-೦೮ರವರೆಗೆ ಅರಣ್ಯದ ಉತ್ಪನ್ನದಿಂದ ಬಂದ ಆದಾಯದ ವಿವರ (ರೂ.ಲಕ್ಷಗಳಲ್ಲಿ)

| ವರ್ಷ | ಚೆಬೀನೆ | ಶ್ರೀಗಂಧ | ಉರುವಲು ಕಟ್ಟಿಗೆ | ಬಿದಿರು | ಇತರೆ | ಒಟ್ಟು |
|---|---|---|---|---|---|---|
| ೧೯೯೫-೯೬ | ೫,೯೬೭ | ೬೯೧ | ೧,೧೦೫ | ೪೪೮ | ೨,೪೦೨ | ೧೦,೬೧೩ |
| ೧೯೯೬-೯೭ | ೬,೩೫೮ | ೮೬೦ | ೧,೧೩೪ | ೪೪೨ | ೨,೩೯೮ | ೧೧,೧೯೨ |
| ೧೯೯೭-೯೮ | ೬,೭೯೫ | ೩೩೨ | ೧,೦೦೩ | ೪೦೦ | ೨,೮೪೨ | ೧೧,೩೭೨ |
| ೧೯೯೮-೯೯ | ೫,೪೩೧ | ೫೯೭ | ೯೨೬ | ೩೮೭ | ೩,೪೦೩ | ೧೦,೭೪೪ |
| ೧೯೯೯-೦೦ | ೪,೪೦೯ | ೨೬೦ | ೧,೦೦೪ | ೧೯೬ | ೩,೫೩೮ | ೯,೪೦೭ |
| ೨೦೦೦-೦೧ | ೪,೧೩೨ | ೧೬೫ | ೯೧೧ | ೪೧೯ | ೫,೧೩ | ೪೧೦,೭೬೧ |
| ೨೦೦೧-೦೨ | ೪,೧೫೩ | ೧೧೯ | ೮೧೮ | ೨೯೮ | ೪,೬೩೭ | ೧೦,೦೨೫ |
| ೨೦೦೨-೦೩ | ೪,೬೬೭ | ೨೩೦ | ೦೮ | ೩೯೫ | ೪,೧೧೪ | ೧೦,೧೧೪ |
| ೨೦೦೩-೦೪ | ೩,೯೨೭ | ೨೯೭ | ೫೯೦ | ೨೦೮ | ೧೩,೨೩೨ | ೧೮,೨೫೪ |
| ೨೦೦೪-೦೫ | ೩,೮೦೮ | ೧,೪೫೬ | ೬೭೩ | ೩೪೭ | ೧೦,೬೧೯ | ೧೬,೯೦೩ |
| ೨೦೦೫-೦೬ | ೪,೧೩೧ | ೧,೫೬೦ | ೮೦೬ | ೩೧೫ | ೪,೭೫೪ | ೧೧,೫೬೬ |
| ೨೦೦೬-೦೭ | ೪,೫೧೩ | ೮೯೮ | ೧,೦೭೫ | ೨೫೨ | ೫,೯೮೮ | ೧೨,೭೨೬ |
| ೨೦೦೭-೦೮ | ೫,೪೮೦ | ೫೪೦ | ೧,೨೯೨ | ೩೯೦ | ೫,೩೪೮ | ೧೩,೦೫೦ |

ಮೂಲ: ಕರ್ನಾಟಕ ಅರಣ್ಯ ಇಲಾಖೆ ಆಡಳಿತ ವಾರ್ಷಿಕ ವರದಿ ೨೦೦೭-೦೮ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ,

| ಕ್ರ. ಸಂ | ವಸ್ತುಗಳು | ಮಾನಕ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|---|---|
| ೧ | ಇದ್ದಿಲು | ಟನ್ನುಗಳು | ೧,೧೭೧ | ೧,೫೩೦ | ೬೭೨ | ೨೫ |
| ೨ | ಬಿದಿರು | ಮೆಟ್ರಿಕ್ ಟನ್ನುಗಳು | ೧,೧೭೧ | ೨,೧೧,೨೯೭ | ೨,೧೯,೧೯೯ | ೨,೧೫,೨೪೮ |
| ೩ | ರಬ್ಬರ್ | ಟನ್ನುಗಳು | ೪,೪೧,೫೯೨ | ೦ | ೩,೪೪೦ | ೦ |
| ೪ | ಗೋಡಂಬಿ | | ೦ | ೪೯ | ೧೬೫ | ೩೧ |
| ೫ | ದಂತ | ಕಿಲೋಗ್ರಾಂ | ೪೭ | ೪೨ | ೪೫ | ೦ |
| ೬ | ಜೇನುತುಪ್ಪ | ಟನ್ನುಗಳು | ೧೫೫ | ೪೩ | ೧೧೨ | ೧೦೫ |
| ೭ | ಮೇಣ | ಟನ್ನುಗಳು | ೧೫ | ೨ | ೫ | ೫ |
| ೮ | ತೊಗಟೆ | ಟನ್ನುಗಳು | ೧ | ೧ | ೮ | ೪ |
| ೯ | ಹುಣಿಸೇಹಣ್ಣು | ಟನ್ನುಗಳು | ೨,೮೬೫ | ೧,೭೧೭ | ೧,೦೮೧ | ೧,೭೦೯ |
| ೧೦ | ಎಣ್ಣೆಬೀಜಗಳು | ಟನ್ನುಗಳು | ೨೫ | ೮ | ೦ | ೦ |
| ೧೧ | ತೈಲಗಳು (ನೀಲಗಿರಿ ಮತ್ತು ರೋಷ) | ಕಿಲೋಗ್ರಾಂ | ೦ | ೦ | ೦ | ೦ |
| ೧೨ | ಸೀಗೆಕಾಯಿ | ಟನ್ನುಗಳು | ೬೭೬ | ೧,೦೪೫ | ೧,೧೩೪ | ೬೫೪ |
| ೧೩ | ರಾಳ | ಟನ್ನುಗಳು | ೪ | ೨ | ೨ | ೧೮ |
| ೧೪ | ಸಾಂಬಾರ ಪದಾರ್ಥ | ಟನ್ನುಗಳು | ೧೭೦ | ೧೩೨ | ೧೩೨ | ೧೪೫ |
| ೧೫ | ಅಂಟವಾಳಕಾಯಿ | ಟನ್ನುಗಳು | ೪೩೩ | ೪೪೨ | ೨,೦೨೩ | ೨೨೬ |
| ೧೬ | ಹಾಲಮಡ್ಡಿ (ಧೂಪ) | ಟನ್ನುಗಳು | ೧ | ೨೩ | ೧೫೧ | ೩೮ |
| ೧೭ | ಇತರೆ ಬೀಜಗಳು | ಟನ್ನುಗಳು | ೪೫೨ | ೧ | ೭೦ | ೪೮ |
| ೧೮ | ಅಳಲೆಕಾಯಿ | ಟನ್ನುಗಳು | ೪೪೧ | ೧೧೮ | ೧,೧೮೧ | ೨೧೬ |
| ೧೯ | ಬೀಡಿ ಎಲೆಗಳು | ಟನ್ನುಗಳು | ೧,೦೨೮ | ೫೦೭ | ೩೫೭ | ೧೮೯ |

**ಮೂಲ : ಅರಣ್ಯ ಇಲಾಖೆ**

ಈ ಸರ್ವೇಕ್ಷಣ ವರದಿಯ ಪ್ರಕಾರ ಕರ್ನಾಟಕದ ೧೯.೧೮ ದಶಲಕ್ಷ ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ ೩.೬೨ ದಶಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು ಇದು ಶೇಕಡಾವಾರು ೧೮.೮೭ ಆಗುತ್ತದೆ. ಇದರಲ್ಲಿ ೦.೧೮ ದಶಲಕ್ಷ ಹೆಕ್ಟೇರ್ ಅತಿ ಸಾಂದ್ರತೆಯು, ೨.೦೨ ದಶಲಕ್ಷ ಹೆಕ್ಟೇರ್ ಮಧ್ಯಮ ಸಾಂದ್ರತೆಯ ಹಾಗೂ ೧.೪೨ ದಶಲಕ್ಷ ಹೆಕ್ಟೇರ್ ತೆರೆದ ಅರಣ್ಯ ಪ್ರದೇಶಗಳಾಗಿರುತ್ತವೆ. ಇದಲ್ಲದೆ ೦.೩೨ ದಶಲಕ್ಷ ಹೆಕ್ಟೇರ್ ಕುರುಚಲು ಅರಣ್ಯ ಪ್ರದೇಶಗಳಿವೆ. ಅರಣ್ಯಗಳ ಆಚೆ ಅರಣ್ಯೇತರ ಭೂಮಿಯಲ್ಲಿ ೦.೫೭ ದಶಲಕ್ಷ ಹೆಕ್ಟೇರ್ ಮರ ಹೊದಿಕೆ ಅಥವಾ ಮರ ಆವರಣಗಳಿವೆ. ಎಲ್ಲವೂ ಸೇರಿದಲ್ಲಿ ಕರ್ನಾಟಕದಲ್ಲಿ ೪.೧೯ ದಶಲಕ್ಷ ಹೆಕ್ಟೇರ್ ಅರಣ್ಯ ಭೂಪ್ರದೇಶವಿದ್ದು, ಇದು ಶೇಕಡಾವಾರು ೨೧.೮೫ ಆಗುತ್ತದೆ.

ಕರ್ನಾಟಕ ರಾಜ್ಯದ ಭೌಗೋಳಿಕ ವಿಸ್ತೀರ್ಣ ೧,೯೧,೭೯೧ ಚದರ ಕಿಲೋ ಮೀಟರ್‌ಗಳು. ಕರ್ನಾಟಕ ಸರ್ಕಾರವು ೨೦೦೨ ರಲ್ಲಿ ಒಂದು ತಜ್ಞ ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ಕರ್ನಾಟಕದಲ್ಲಿ ೪೩,೩೫೬.೩೯ ಚ.ಕಿ.ಮೀ ಅರಣ್ಯ ಪ್ರದೇಶ ಮತ್ತು ಪರಿಗಣಿತ ಅರಣ್ಯ ಎಂದು ಗುರುತಿಸಿರುತ್ತದೆ. ಅದರಲ್ಲಿ ೩೩,೨೩೮.೫೩ ಚ.ಕಿ.ಮೀ ಅರಣ್ಯದಲ್ಲಿ ಮೀಸಲು ಅರಣ್ಯ, ಸಂರಕ್ಷಿತ ಅರಣ್ಯ, ವರ್ಗೀಕರಿಸಿದ ಅರಣ್ಯ,

| ಕ್ರ ಸಂ. | ರಾಷ್ಟ್ರೀಯ ಉದ್ಯಾನವನ/ವನ್ಯಧಾಮ | ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ) | ಜಿಲ್ಲೆ | ಪ್ರಾರಂಭವಾದ ವರ್ಷ |
|---|---|---|---|---|
| ೧ | ಆಂಶಿ ರಾಷ್ಟ್ರೀಯ ಉದ್ಯಾನವನ | ೨೫೦ | ಉತ್ತರ ಕನ್ನಡ | ೧೯೮೭ |
| ೨ | ಬಂಡೀಪುರ ರಾಷ್ಟ್ರೀಯ ಉದ್ಯಾನವನ | ೮೭೪ | ಮೈಸೂರು/ಚಾಮರಾಜನಗರ | ೧೯೭೪ |
| ೩ | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | ೧೦೪ | ಬೆಂಗಳೂರು | ೧೯೭೪ |
| ೪ | ಕುದುರೆಮುಖ ರಾಷ್ಟ್ರೀಯ ಉದ್ಯಾನವನ | ೬೦೦ | ಚಿಕ್ಕಮಗಳೂರು | ೧೯೮೭ |
| ೫ | ನಾಗರಹೊಳೆ ರಾಷ್ಟ್ರೀಯ ಉದ್ಯಾನವನ | ೬೪೩ | ಮೈಸೂರು ಮತ್ತು ಕೊಡಗು | ೧೯೭೪ |
| ೬ | ಆದಿಚುಂಚನಗಿರಿ ನವಿಲುಧಾಮ | ೦.೮೪ | ಮಂಡ್ಯ | ೧೯೮೧ |
| ೭ | ಅರಬಿದಿಟ್ಟು | ೧೪ | ಮೈಸೂರು | ೧೯೫೧ |
| ೮ | ಭದ್ರಾ ವನ್ಯಜೀವಿಧಾಮ | ೪೯೨ | ಚಿಕ್ಕಮಗಳೂರು ಮತ್ತು ಶಿವಮೊಗ್ಗ | ೧೯೭೪ |
| ೯ | ಬಿಳಿಗಿರಿರಂಗನ ದೇವಸ್ಥಾನ ವನ್ಯಜೀವಿಧಾಮ | ೫೪೦ | ಮೈಸೂರು/ಚಾಮರಾಜನಗರ | ೧೯೮೭ |
| ೧೦ | ಬ್ರಹ್ಮಗಿರಿ ವನ್ಯಜೀವಿಧಾಮ | ೧೮೧ | ಕೊಡಗು | ೧೯೭೪ |
| ೧೧ | ಮೂಕಾಂಬಿಕ ವನ್ಯಜೀವಿಧಾಮ | ೨೪೭ | ದಕ್ಷಿಣಕನ್ನಡ/ಉಡುಪಿ | ೧೯೭೪ |
| ೧೨ | ನುಗು ವನ್ಯಜೀವಿಧಾಮ | ೩೦ | ಮೈಸೂರು | ೧೯೭೪ |
| ೧೩ | ಶರಾವತಿ | ೪೩೧ | ಶಿವಮೊಗ್ಗ | ೧೯೭೪ |
| ೧೪ | ಸೋಮೇಶ್ವರ | ೮೮ | ದಕ್ಷಿಣಕನ್ನಡ/ಉಡುಪಿ | ೧೯೭೪ |
| ೧೫ | ಶೆಟ್ಟಿಹಳ್ಳಿ ವನ್ಯಧಾಮ | ೩೯೬ | ಶಿವಮೊಗ್ಗ | ೧೯೭೪ |
| ೧೬ | ರಾಣೆಬೆನ್ನೂರು ಕೃಷ್ಣಮೃಗ ವನ್ಯಜೀವಿಧಾಮ | ೧೧೯ | ಧಾರವಾಡ | ೧೯೭೪ |
| ೧೭ | ಪುಷ್ಪಗಿರಿ | ೧೦೩ | ಕೊಡಗು | ೧೯೭೪ |
| ೧೮ | ಕಾವೇರಿ ವನ್ಯಜೀವಿಧಾಮ | ೫೨೭ | ಮಂಡ್ಯ | ೧೯೮೭ |
| ೧೯ | ತಲಕಾವೇರಿ ವನ್ಯಜೀವಿಧಾಮ | ೧೦೫ | ಕೊಡಗು | ೧೯೮೭ |
| ೨೦ | ಮೇಲುಕೋಟೆ ದೇವಸ್ಥಾನದ ವನ್ಯಜೀವಿಧಾಮ | ೨೪೭ | ಮಂಡ್ಯ | ೧೯೭೪ |
| ೨೧ | ಘಟಪ್ರಭ ಪಕ್ಷಿಧಾಮ | ೩೦ | ಬೆಳಗಾಂ | ೧೯೭೪ |
| ೨೨ | ದಾಂಡೇಲಿ ವನ್ಯಜೀವಿಧಾಮ | ೮೪೩ | ಉತ್ತರ ಕನ್ನಡ | ೧೯೮೭ |
| ೨೩ | ರಂಗನತಿಟ್ಟು ಪಕ್ಷಿಧಾಮ | ೦.೬೭ | ಮಂಡ್ಯ | ೧೯೪೧ |
| ೨೪ | ಗುಡವಿ ಪಕ್ಷಿಧಾಮ | ೦.೭೩೩ | ಶಿವಮೊಗ್ಗ | ೧೯೮೯ |
| ೨೫ | ದಾರೋಜಿ ಕರಡಿಧಾಮ | ೫೫.೮೭ | ಬಳ್ಳಾರಿ | ೧೯೯೪ |
| ೨೬ | ಅತ್ತಿವೇರಿ ಪಕ್ಷಿಧಾಮ | ೨.೨೩ | ಉತ್ತರ ಕನ್ನಡ | ೨೦೦೦ |

ಗ್ರಾಮ ಅರಣ್ಯ ಮತ್ತು ಖಾಸಗಿ ಅರಣ್ಯ ಎಂದು ಕಾನೂನುಬದ್ಧ ವಿಂಗಡಣೆಯನ್ನು ಮಾಡಲಾಗಿದೆ. ೧೦.೧೧೭.೯೨ ಚ.ಕಿ.ಮೀ ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಲಾಗಿದ್ದು ಅದರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ಸೆಕ್ಷನ್ ೪, ಬೆಟ್ಟ ಭೂಮಿ, ಬಾನೆ, ಜಮ್ಮಾ ಮಲೈ ಕಾನ, ಕುಮಕಿ, ಪೈಸಾರಿ, ಅಮೃತ ಮಹಲ್ ಕಾವಲು, ಖರಾಬಭೂಮಿ, ಇನಾಮ ಭೂಮಿ, ದಟ್ಟವಾದ ಮರ ಒಳಗೊಂಡಿರುವ ಪ್ರದೇಶ, ನೆಡುತೋಪು ಪ್ರದೇಶ ಒಳಗೊಂಡಿರುತ್ತದೆ. ೨೦೦೭-೦೮ ರಲ್ಲಿ ೫,೦೭೬.೮೭ ಹೆ ಅರಣ್ಯ ಪ್ರದೇಶ ಕರ್ನಾಟಕ ಅರಣ್ಯ ಕಾಯಿದೆ ಸೆಕ್ಷನ್ ೧೭ರ ಅಡಿಯಲ್ಲಿ ಮತ್ತು ೪೯೮.೨೭ ಹೆಕ್ಟೆರ್‌ಗಳು ಸೆಕ್ಷನ್ ೪ರ ಅಡಿಯಲ್ಲಿ ಅರಣ್ಯ ಎಂದು ನಿರ್ಣಯಿಸಲ್ಪಟ್ಟಿದೆ. ಅರಣ್ಯವನ್ನು ಮೀಸಲು ಅರಣ್ಯ (೨೯,೫೫೦.೧೯ ಚ.ಕಿ.ಮೀ), ರಕ್ಷಿತ ಅರಣ್ಯ (೩,೫೮೫.೨೨ ಚ.ಕಿ.ಮೀ), ವರ್ಗೀಕರಿಸದ ಅರಣ್ಯ (೧೦,೧೧೭.೯೨ಚ.ಕಿ.ಮೀ), ಗ್ರಾಮೀಣ ಅರಣ್ಯ (೪೯.೦೫ಚ.ಕಿ.ಮೀ) ಮತ್ತು ಖಾಸಗೀ ಅರಣ್ಯ (೫೪.೦೭ಚ.ಕಿ.ಮೀ) ಎಂದು ವರ್ಗೀಕರಿಸಲಾಗಿದೆ. ರಾಜ್ಯದ ಭೌಗೋಳಿಕ ವಿಸ್ತೀರ್ಣದ ಶೇ ೨೨.೬೧ ರಷ್ಟು ಭೂ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ವರ್ಗೀಕರಿಸಿದ್ದರೂ ಕೇವಲ ಶೇ ೧೫ ರಷ್ಟು ಮಾತ್ರ ಒಳ್ಳೆಯ ಮರಗಳಿರುವ ಪ್ರದೇಶವಾಗಿರುತ್ತದೆ. ರಕ್ಷಿತ ಅರಣ್ಯ ಸಂಪನ್ಮೂಲಗಳು ಅರಣ್ಯ ಭೂಮಿಯಲ್ಲಿ ಲಭ್ಯವಿದ್ದು ಈ ಸಂಪನ್ಮೂಲಗಳನ್ನು ಅರಣ್ಯೇತರ ಚಟುವಟಿಕೆಗಳಾದ ರಸ್ತೆ, ಜಲ ವಿದ್ಯುತ್ ಯೋಜನೆ, ಜನಸಂಖ್ಯೆ ಮತ್ತು ಜಾನುವಾರುಗಳ ಸಂಖ್ಯೆಯ ಹೆಚ್ಚಳದಿಂದಾಗಿ ರಾಜ್ಯವು ಉರುವಲು ಸೌದೆ, ಮನೆ ಕಟ್ಟುವಂತಹ ಮರ ಹಾಗೂ ದನಗಳ ಮೇವಿನ ಕೊರತೆಯನ್ನು ಎದುರಿಸುತ್ತಿದೆ. ಆದುದರಿಂದ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳ ಅವಶ್ಯಕತೆ ಗಮನದಲ್ಲಿರಿಸಿಕೊಂಡು ರೂಪಿಸಿರುತ್ತದೆ.

ರಾಜ್ಯದ ಅರಣ್ಯ ಪ್ರದೇಶವನ್ನು ಒಟ್ಟಾರೆ ಭೌಗೋಳಿಕ ಪ್ರದೇಶಕ್ಕೆ ಹೋಲಿಸಿ ಶೇಕಡಾವಾರಿನಲ್ಲಿ ತಿಳಿಸುವುದಾದರೆ ಅದು ಅಖಿಲ ಭಾರತದ ಸರಾಸರಿಗಿಂತ ಶೇ.ಸುಮಾರು ೨೩ರಷ್ಟು ಮತ್ತು ರಾಷ್ಟ್ರೀಯ ಅರಣ್ಯ ನೀತಿ ನಿಗದಿಪಡಿಸಿರುವುದಕ್ಕಿಂತ ಶೇ. ೩೩ರಷ್ಟು ಕಡಿಮೆ. ಕರ್ನಾಟಕದ ಪಕ್ಕದ ರಾಜ್ಯಗಳಲ್ಲಿ ಅರಣ್ಯ ಪ್ರದೇಶದ ವಿವರ ಹೀಗಿದೆ. ಆಂಧ್ರಪ್ರದೇಶ ೬೪ ಲಕ್ಷ ಹೆಕ್ಟೇರು (ದೇಶದ ಒಟ್ಟಾರೆ ವಿಸ್ತೀರ್ಣದ ಶೇ. ೯ ಭಾಗ), ಮಹಾರಾಷ್ಟ್ರ ೫೪ ಲಕ್ಷ ಹೆಕ್ಟೇರು (ಶೇ. ೮ ಭಾಗ), ತಮಿಳುನಾಡು ೨೨ ಲಕ್ಷ ಹೆಕ್ಟೇರು (ಶೆ.೩ಭಾಗ) ಮತ್ತು ಕೇರಳ ೧೧ ಲಕ್ಷ ಹೆಕ್ಟೇರು (ಶೇ.೨ಭಾಗ).

೧೯೫೬ರಿಂದ ೧೯೮೬-೮೭ರ ತನಕ ಅರಣ್ಯೇತರ ಉದ್ದೇಶಗಳಿಗಾಗಿ ಸುಮಾರು ಎರಡು ಲಕ್ಷ ಹೆಕ್ಟೇರು ಅರಣ್ಯವನ್ನು ಕಳೆದುಕೊಂಡಿದೆ. ಅದರ ವಿವರ ಹೀಗಿದೆ: ಜಲವಿದ್ಯುತ್ ಯೋಜನೆಗೆ ೨೨,೧೯೪ ಹೆಕ್ಟೇರ್, ವಿದ್ಯುತ್ ತಂತಿ ಎಳೆಯಲು ೧,೬೮೮ ಹೆ., ರಸ್ತೆ ನಿರ್ಮಿಸಲು ೩೩೦ ಹೆ. ಕೆರೆ ನಿರ್ಮಿಸಲು ೩೫, ೮೪೦ ಹೆ. ಪಟ್ಟಣಗಳ ನಿರ್ಮಾಣಕ್ಕೆ ೧,೭೯೧ ಹೆ. ಗಣಿಗಾರಿಕೆಗೆ ೪೨,೬೭೬ ಹೆ. ಕೃಷಿ ೬೭,೨೧೭ ಹೆ., ಪುನರ್ವಸತೀಕರಣಕ್ಕೆ ೨೫,೮೨೦ ಹೆ., ಉಳಿದ ಉದ್ದೇಶಗಳಿಗೆ ೬,೩೫೭ ಹೆ. ಒಟ್ಟಾರೆ ೨,೦೪೧೩ ಹೆಕ್ಟೇರ್ ಅರಣ್ಯ ನಷ್ಟವಾಗಿದೆ. ೧೯೯೧-೯೨ರ ಅರಣ್ಯೋತ್ಪನ್ನದ ವಿವರಗಳು. ೧ ನಾಟ (ಅ) ಬೀಟೆ : ೪,೫೨೨ ಘನ ಮೀಟರ್, (ಆ) ತೇಗ - ೩,೩೭೬ ಘನ ಮೀಟರ್, (ಇ) ಉಳಿದ ಬಗೆಯ ನಾಟ - ೪೧,೨೫೩ ಘನ ಮೀಟರ್. (೨) ಪಲ್ಪ್ ವುಡ್ : ೨೧೩ ಘನ ಮೀಟರ್ (೩) ಬೆಂಕಿಕಡ್ಡಿಗೆ ಬಳಸುವ ಮರ - ೧೩೧ ಘನ ಮೀಟರ್ (೪) ಕೊಯ್ಯಲು ಬಳಸಿದ ನಾಟ - ೬೧೮ ಘನ ಮೀಟರ್ (೫) ದುಂಡುಕಂಬಕ್ಕೆ ಬಳಸಿದ ನಾಟ - ೩೨,೦೬೭ ಘನ ಮೀಟರ್, (೬) ಉರುವಲು ೧,೬೬,೦೪೯ ಘನ ಮೀಟರ್. (೭) ಬಿದಿರು ೧೯,೨೯ ಮೆಟ್ರಿಕ್ ಟನ್ ಮತ್ತು (೮) ಶ್ರೀಗಂಧ ೧,೪೧೮ ಘನ ಮೀಟರ್. ರಾಜ್ಯದ ಶೇ. ೨೦ ಭಾಗ ನೆಲವನ್ನು ಅರಣ್ಯವೆಂದು ವರ್ಗೀಕರಿಸಿದ್ದರೂ (೩.೮೬ ಮಿಲಿಯನ್ ಹೆಕ್ಟೇರ್) ಶೇ.೧೧ ಭಾಗದಲ್ಲಿ ಮಾತ್ರ ಅರಣ್ಯವಿದೆ. ಉಳಿದ ಪ್ರದೇಶ ಅವನತಿಯ ಬೇರೆ ಬೇರೆ ಹಂತದಲ್ಲಿದೆ.

ಜನಸಂಖ್ಯೆ ಮತ್ತು ಜಾನುವಾರು ಸಂಖ್ಯೆಯ ಹೆಚ್ಚಳದಿಂದಾಗಿ ರಾಜ್ಯವು ಉರುವಲು ಸೌದೆ, ಮೇವು ಮತ್ತು ನಾಟಗಳ ಬೇಡಿಕೆಯನ್ನು ಪೂರೈಸುವಲ್ಲಿ ಕೊರತೆಯನ್ನು ಅನುಭವಿಸುತ್ತಿದೆ. ಹತ್ತರಿಂದ ಹದಿನೈದು ವರ್ಷದ ಕಾಲದ ಮಿತಿಯಲ್ಲಿ ಅರಣ್ಯವನ್ನು ಹೇಗೆ ನಿಭಾಯಿಸಬೇಕೆಂಬ ಸೂಚನೆಯನ್ನು ಅನುಸರಿಸಿಯೇ ಇಲ್ಲಿ ಕಾರ್ಯನಿರ್ವಹಿಸಲಾಗುತ್ತದೆ. ಹೀಗೆ ಮಾಡುವಾಗ ಯಾವ ಬಗೆಯ ಅರಣ್ಯಗಳಿವೆ, ಬೆಳೆಯ ಸದ್ಯದ ಸ್ಥಿತಿಗತಿ, ಬೇರೆ ಬೇರೆ ಅರಣ್ಯೋತ್ಪನ್ನಗಳಿಗಿರುವ ಬೇಡಿಕೆ, ಒಂದು ಸ್ಥಳದಲ್ಲಿ ಪರಿಸರವನ್ನು ಸಮತೋಲದಲ್ಲಿಡಲು ಬೇಕಾದ ಅರಣ್ಯೋತ್ಪನ್ನಗಳ ಬೇಡಿಕೆ ಮುಂತಾದ ಅಂಶಗಳನ್ನು ಪರಿಗಣಿಸಲಾಗುತ್ತದೆ.

ಪ್ರಮುಖ ಜೀವಿ ಪ್ರಭೇದಗಳನ್ನು ಸಂರಕ್ಷಿಸಲು ಕರ್ನಾಟಕ ಸರ್ಕಾರ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಧಾಮಗಳನ್ನು ಸ್ಥಾಪಿಸಿದೆ. ಕೆಳಗೆ ರಾಷ್ಟ್ರೀಯ ಉದ್ಯಾನವನಗಳ ಮತ್ತು ವನ್ಯಜೀವಿ ಧಾಮಗಳ ಪಟ್ಟಿಯನ್ನೂ ಅವುಗಳನ್ನು ಸ್ಥಾಪಿಸಿದ ವರ್ಷವನ್ನೂ ಕೊಟ್ಟಿದೆ. ಒಟ್ಟಾರೆ ಅರಣ್ಯ ಪ್ರದೇಶದಲ್ಲಿ ೬,೩೬೦ ಚದರ ಕಿಲೋ ಮೀಟರ್ ವಿಸ್ತೀರ್ಣದ ಪ್ರದೇಶವನ್ನು ಒಳಗೊಂಡಂತೆ ಒಟ್ಟು ಐದು ರಾಷ್ಟ್ರೀಯ ಉದ್ಯಾನವನಗಳು ಮತ್ತು ೨೧ ವನ್ಯಜೀವಿ ಧಾಮಗಳಿವೆ. ಇವು ನಿತ್ಯಹರಿದ್ವರ್ಣ ಕಾಡಿನಿಂದ ಕುರುಚಲು ಕಾಡುವರೆಗೆ ವ್ಯಾಪಿಸಿವೆ. ಹಾಗೆಯೇ ಅಪಾಯದಂಚಿನಲ್ಲಿರುವ ಸಸ್ಯ, ಪ್ರಾಣಿ, ಪಕ್ಷಿ ಪ್ರಭೇದಗಳನ್ನು ಸಂರಕ್ಷಿಸಲು ರೂಪಿಸಿದ ಪರಿಸರದ ಪ್ರಾತಿನಿಧಿಕ ಕಾರ್ಯಜಾಲವನ್ನು ಇವು ಪ್ರತಿನಿಧಿಸುತ್ತವೆ. ೧೯೮೯ರಲ್ಲಿ ಮಾಡಿದ ದೊಡ್ಡ ಸಸ್ತನಿಗಳ ಗಣತಿಯಂತೆ ನಮ್ಮ ರಾಜ್ಯದಲ್ಲಿ ೨೫೭ ಹುಲಿಗಳು, ೨೮೩ ಚಿರತೆ, ೪,೪೧೮ ಆನೆ, ೫,೪೭೩ ಕಾಡುಕೋಣಗಳಿದ್ದವು. ೧೯೯೭–೯೮ರಲ್ಲಿ ಮಾಡಿದ ವನ್ಯಜೀವಿಗಳ ಗಣತಿಯಂತೆ ಇದ್ದ ಪ್ರಾಣಿಗಳ ಸಂಖ್ಯೆ ಹುಲಿ ೩೯೫, ಕಾಟಿ ೧,೩೬೦, ಆನೆ ೬,೧೮೫, ಚಿರತೆ ೮೧೭, ಕರಡಿ ೨,೩೨೪, ಕಾಡುಹಂದಿ ೧೫,೭೬೦, ಜಿಂಕೆ ೨೩,೮೫೦, ಕಾಡುಕೋಣ ೮,೪೮೪, ಸಾಂಬಾರ್ ಜಿಂಕೆ ೪೯,೯೮ ಮತ್ತು ನರಿ ೯೫೭.

ಕರ್ನಾಟಕದ ಅರಣ್ಯವು ಭಾರತದಲ್ಲಿನ ಶೇ. ೨೫ ಭಾಗ ಆನೆಗಳಿಗೆ, ಶೇ. ೧೦ ಭಾಗ ಹುಲಿಗಳಿಗೆ ಆಶ್ರಯತಾಣವಾಗಿದೆ. ಇನ್ನೂ ಅನೇಕ ಪ್ರಾಂತ್ಯಗಳನ್ನು ಪರಿಶೋಧಿಸಬೇಕಾಗಿದೆ. ಆಗ ಹೊಸ ಸಸ್ಯವರ್ಗ, ಪ್ರಾಣಿವರ್ಗಗಳು ಬೆಳಕಿಗೆ ಬರುತ್ತವೆ. ಪಶ್ಚಿಮಘಟ್ಟದ ಎರಡು ಉಪಗುಚ್ಛಗಳು ಅಂದರೆ ಕರ್ನಾಟಕದಲ್ಲೇ ಇರುವ ತಲಕಾವೇರಿ ಮತ್ತು ಕುದುರೆಮುಖ ಇವು ಯುನೆಸ್ಕೋ ಯೋಜಿಸಿರುವ ವಿಶ್ವ ಪರಂಪರಾ ತಾಣಗಳ ಪಟ್ಟಿಗೆ ತಾತ್ಕಾಲಿಕವಾಗಿ ಸೇರ್ಪಟ್ಟಿದೆ. ಈ ಉಪಗುಚ್ಛಗಳ ಹೊರತಾದ ಬಂಡೀಪುರ ಮತ್ತು ನಾಗರಹೊಳೆ ಉದ್ಯಾನವನಗಳು ಯುನೆಸ್ಕೋ ಗುರುತಿಸಿದಂತೆ ೧೯೮೬ರಲ್ಲಿ ನೀಲಗಿರಿ ಜೀವಿಗೋಳ ಮೀಸಲು ಕ್ಷೇತ್ರದಲ್ಲಿ ಸೇರ್ಪಡೆಯಾಗಿವೆ. ಆಕರ್ಷಕ ಪಕ್ಷಿ ನೀಲಕಂಠ (ಭಾರತದ ರೋಲರ್) ಮತ್ತು ಆನೆಯನ್ನು ರಾಜ್ಯದ ಹಕ್ಕಿ ಮತ್ತು ಪ್ರಾಣಿ ಎಂತಲೂ, ಶ್ರೀಗಂಧ ಮತ್ತು ಕಮಲವನ್ನು ಕ್ರಮವಾಗಿ ರಾಜ್ಯವೃಕ್ಷ ಮತ್ತು ಪುಷ್ಪವೆಂತಲೂ ಪರಿಗಣಿಸಲಾಗಿದೆ.

**ಅಂಶಿ ರಾಷ್ಟ್ರೀಯ ಉದ್ಯಾನವನ:** ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಈ ಉದ್ಯಾನವನ ಗೋವಾ ಗಡಿ ಭಾಗಕ್ಕೆ ಹೊಂದಿಕೊಂಡಂತಿದೆ. ೩೪೦ ಚದರ ಕಿಲೋ ಮೀಟರ್ ವಿಸ್ತೀರ್ಣವಿರುವ ಈ ಉದ್ಯಾನವನ ದಾಂಡೇಲಿ ವನ್ಯಜೀವಿ ಧಾಮದ ಪಕ್ಕದಲ್ಲಿದೆ. ಗೋವಾ ಮತ್ತು ಮಹಾರಾಷ್ಟ್ರಗಳ ಉಳಿದ ಆರು ಸಂರಕ್ಷಿತ ತಾಣಗಳು ಸೇರಿದಂತೆ ಒಟ್ಟು ೨,೨೦೦ ಚದರ ಕಿ.ಮೀ.ವಿಸ್ತೀರ್ಣವಿದೆ. ಈ ಉದ್ಯಾನವನದಲ್ಲಿ ಕೃಷ್ಣವರ್ಣದ ಚಿರತೆಗಳಿವೆ. ಇಲ್ಲಿರುವ ಇತರ ಮೃಗಗಳೆಂದರೆ ಹುಲಿ ಮತ್ತು ಆನೆ. ೧೯೫೬ರ ಮೇ ೧೦ ರಂದು ಈ ಅರಣ್ಯವನ್ನು ದಾಂಡೇಲಿ ವನ್ಯಜೀವಿ ಧಾಮವೆಂದು ಘೋಷಿಸಲಾಯಿತು. ಇದರ ಒಂದು ಭಾಗವನ್ನು ಗುರುತಿಸಿ ಅದನ್ನು ಅಂಶಿ ರಾಷ್ಟ್ರೀಯ ಉದ್ಯಾನವನವನ್ನಾಗಿ ಮಾಡಬೇಕೆಂದು ರಾಜ್ಯ ಸರ್ಕಾರ ಪ್ರಸ್ತಾವವನ್ನು ಮುಂದಿಟ್ಟಿತು. ೧೯೮೭ರ ಸೆಪ್ಟೆಂಬರ್ ೨ರಂದು ಈ ಪ್ರಸ್ತಾವವನ್ನು ಅಂಗೀಕರಿಸಿ ಅನುಷ್ಠಾನಗೊಳಿಸಲಾಯಿತು.

ಮೂಲ ಪ್ರಸ್ತಾವನೆಯ ೨೫೦ ಚದರ ಕಿಲೋ ಮೀಟರ್ ವಿಸ್ತೀರ್ಣದ ಜಾಗವನ್ನು ಮಾತ್ರ ಗುರುತಿಸಲಾಯಿತು. ೨೦೦೨ರಲ್ಲಿ ಅಂತಿಮವಾಗಿ ಪ್ರಕಟಣೆ ಹೊರಬಿದ್ದಾಗ ಇದಕ್ಕೆ ಇನ್ನೂ ೯೦ ಚದರ ಕಿಲೋ ಮೀಟರ್ ಪ್ರದೇಶವನ್ನು ಸೇರಿಸಲಾಗಿತ್ತು. ೨೦೦೭ರಲ್ಲಿ ಅಂಶಿ ಮತ್ತು ದಾಂಡೇಲಿ ಉದ್ಯಾನವನಗಳಿಗೆ ಹುಲಿಯೋಜನೆ ಸ್ಥಾನಮಾನ ನೀಡಲಾಯಿತು. ಪಶ್ಚಿಮಘಟ್ಟಗಳ ಶ್ರೇಣಿಯಲ್ಲಿರುವ ಅಂಶಿ ಸಾಗರಮಟ್ಟದಿಂದ ೨೦೦ರಿಂದ ೯೨೫ ಮೀಟರ್ ಎತ್ತರದಷ್ಟು ವ್ಯತ್ಯಯ ತೋರಿಸುತ್ತದೆ. ಈ ಉದ್ಯಾನವನ ನೆಲೆಯಾಗಿರುವುದು ಪಶ್ಚಿಮಘಟ್ಟಗಳ ಎತ್ತರದ ಮಾಂಟೇನ್ ಮಳೆಕಾಡಿನ ಹಾಗೂ ಪಶ್ಚಿಮಘಟ್ಟಗಳ ತೇವಾಂಶಭರಿತ ಉದುರೆಲೆ ಕಾಡಿನ ಜೀವಿ ಪರಿಸ್ಥಿತಿ ವಲಯದಲ್ಲಿ. ಈ ಎರಡನ್ನೂ ವಿಶ್ವ ವನ್ಯಜೀವಿ ನಿಧಿ ಕೇಂದ್ರ, ಅಪಾಯದ ಅಂಚಿನಲ್ಲಿವೆ ಎಂದು ಗುರುತಿಸಿದೆ. ಅಂಶಿ ರಾಷ್ಟ್ರೀಯ ಉದ್ಯಾನವನ ಮತ್ತು ನೆರೆಯ ದಾಂಡೇಲಿ ವನ್ಯಜೀವಿ ಧಾಮ ಸೇರಿಯೇ ಕರ್ನಾಟಕದ ಅರಣ್ಯ ಇಲಾಖೆ, ದಾಂಡೇಲಿ ವನ್ಯಜೀವಿ ವಿಭಾಗವೆಂದು ಗುರುತಿಸಿದೆ. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು ಇದರ ಮುಖ್ಯಸ್ಥರಾಗಿರುತ್ತಾರೆ. ಈ ಭಾಗದ ಅರಣ್ಯವು ಸಸ್ಯ ಮತ್ತು ಪ್ರಾಣಿವರ್ಗದಿಂದ ಸಮೃದ್ಧವಾಗಿದೆ. ಇಲ್ಲಿ ಕಂಡುಬರುವ ಪ್ರಮುಖ ವೃಕ್ಷ ಮತ್ತು ಮರಗಳೆಂದರೆ ಬಿದಿರು, ಬೌಹೀನಿಯ (ಕಂಚುವಾಳ, ಬಸವನಪಾದ ಇತ್ಯಾದಿ ವೃಕ್ಷಗಳು), ನೀಲಗಿರಿ, ಲಾಂಟಾನ, ಸಿಲ್ವರ್ ಓಕ್, ತೇಗ ಮತ್ತು ಕ್ಸೈಲಿಯಾ ಕ್ಸೈಲೋಕಾರ್ಪ (ಜಂಬೆ).

ಪ್ರಾಣಿಗಳೆಂದರೆ ಬ್ಯಾನೆಡ್‌ಕಪಿಯ ಒಂದು ಬಗೆ, ಜಿಂಕೆ, (ಬೊಗಳುವ ಜಿಂಕೆ, ಚುಟ್ಟು ಜಿಂಕೆ (ಮೌಸ್ ಡೀರ್) ಹಾಗೂ ಚುಕ್ಕೆ ಜಿಂಕೆ), ಇಂಡಿಯನ್ ಕಾಡುಕೋಣ, ಮಲಬಾರ್ ಪುನುಗುಬೆಕ್ಕು, ಮಲಬಾರ್ ದೊಡ್ಡ ಅಳಿಲು, ಪಂಗೋಲಿನ್ ಹಾಗೂ ಕರಡಿ. ಇವು ಈ ಉದ್ಯಾನವನದಲ್ಲಿ ಸಹಜ ಪರಿಸರದಲ್ಲಿ ಕಂಡುಬರುತ್ತವೆ. ಅಲ್ಲದೆ ಕೃಷ್ಣವರ್ಣದ ಚಿರತೆ, ಆನೆ ಮತ್ತು ಹುಲಿಗಳು ಇಲ್ಲಿನ ಅಪರೂಪದ ಪ್ರಭೇದಗಳು. ಈ ಉದ್ಯಾನವನದಲ್ಲಿರುವ ಸರೀಸೃಪಗಳೆಂದರೆ ಕಾಳಿಂಗಸರ್ಪ, ನೀರುಹಾವು, ಹೆಬ್ಬಾವು, ಕೇರೆಹಾವು, ಮಂಡಲದ ಹಾವು. ಸುಮಾರು ೨೦೦ ಪಕ್ಷಿ ಪ್ರಭೇದಗಳನ್ನು ಈ ಉದ್ಯಾನವನದಲ್ಲಿ ಗುರುತಿಸಲಾಗಿದೆ. ಅವೆಂದರೆ ಸಿಪಾಯಿ ಕೊಕ್ಕರೆ, ಬೂದು ಅಂಬರ ಕೀಜುಗ, ಕರಿಜೊಟ್ಟೆ ಪಿಕಳಾರ, ನವರಂಗ, ಗರುಡ, ಕರಿನೀಲಕಂಠ, ತುರಾಯಿ ಪನ್ನಗಾರಿ, ದೊಡ್ಡ ಮಂಗಟ್ಟೆ ಹಕ್ಕಿ, ಹೊಂಬೆನ್ನಿನ ಮರಕುಟುಕ, ದಾಸ ಮಂಗಟ್ಟೆ ಹಕ್ಕಿ, ಶ್ರೀಲಂಕಾ ಮಂಡೂಕ ಮುಖಿ, ಹಸಿರು ಪಾರಿವಾಳ, ಬೂದು ಕಾಡುಕೋಳಿ, ತುರುಬಿನ ಪಾರಿವಾಳ, ಜೇನು ಗಿಡುಗ, ರಾಜರಣಹದ್ದು, ಬೂದುತಲೆ ಮೀನುಗಿಡುಗ, ಮೀನುಗೂಬೆ, ಕಂದುಗೂಬೆ, ಕಾಕರಣೆಹಕ್ಕಿ, ನೀಲಗಿರಿ ನೊಣಹಿಡುಕ, ಸಣ್ಣಬಾಳೆಗುಬ್ಬಿ, ಹೂಕುಟುಕ.

**ಬಂಡೀಪುರ ರಾಷ್ಟ್ರೀಯ ಉದ್ಯಾನವನ:** ಭಾರತದ ಅರಣ್ಯ ಧಾಮಗಳ ಪೈಕಿ ಬಂಡೀಪುರ ರಾಷ್ಟ್ರೀಯ ಉದ್ಯಾನವನವೂ ಒಂದು. ಇದು ಹುಲಿ ಸಂರಕ್ಷಣಾ ಯೋಜನೆಯ ಪ್ರಮುಖ ತಾಣ. ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿದೆ. ನೆರೆಯ ತಮಿಳುನಾಡಿನ ಮುದುಮಲೈ ರಾಷ್ಟ್ರೀಯ ಉದ್ಯಾನವನ, ಕೇರಳದ ವೈನಾಡು ವನ್ಯಜೀವಿ ಧಾಮ, ವಾಯವ್ಯದ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳೊಡನೆ ಇದು ನಿರಂತರತೆ ಹೊಂದಿದೆ. ಇಲ್ಲಿ ಸುಮಾರು ೭೦ ಹುಲಿ, ೩,೦೦೦ ಏಷ್ಯ ಆನೆಗಳಿಗೆ (೧೯೯೭ರ ಗಣತಿಯಂತೆ) ಆಶ್ರಯ ನೀಡಿದೆ. ಇವುಗಳ ಜೊತೆಗೆ ಚಿರತೆ, ಕೆನ್ನಾಯಿ, ಕಾಟಿ ಹಾಗೂ ಕರಡಿಗಳೂ ಇವೆ. ಬಂಡೀಪುರ ಉದ್ಯಾನವನವು ನೀಲಗಿರಿ ಜೀವಿಗೋಳ ಮೀಸಲು ತಾಣದ ಒಂದು ಭಾಗ. ಪಶ್ಚಿಮಘಟ್ಟಗಳು, ನೀಲಗಿರಿ ಉಪಗುಚ್ಛ (೬೦೦೦ + ಚ.ಕಿ.ಮೀ)., ಬಂಡೀಪುರದ ರಾಷ್ಟ್ರೀಯ ಉದ್ಯಾನವನ ಎಲ್ಲವನ್ನೂ ಸೇರಿಸಿ ವಿಶ್ವ ಪರಂಪರಾ ತಾಣವನ್ನಾಗಿ ಮಾಡಬೇಕೆಂದು ಯುನೆಸ್ಕೋ ಯೋಚಿಸುತ್ತಿದೆ. ೧೯೩೧ರಲ್ಲಿ ಬಂಡೀಪುರ ಮೀಸಲು ಅರಣ್ಯದಲ್ಲಿ ೯೦ ಚ.ಕಿ.ಮೀ. ಧಾಮವನ್ನು ಸೃಷ್ಟಿಸಲಾಯಿತು. ವನ್ಯಜೀವಿಗಳ ಸಂರಕ್ಷಣೆಗೆ ಇದು ತುಂಬ ಕಡಿಮೆ ಪ್ರದೇಶವೆಂದು ಕಂಡುಬಂದಮೇಲೆ ಇನ್ನೂ ೮೦೦ ಚ.ಕಿ.ಮೀ. ವಿಸ್ತರಿಸಿ ಅದನ್ನು ವೇಣುಗೋಪಾಲ ವನ್ಯಜೀವಿ ಉದ್ಯಾನವನವೆಂದು ಕರೆಯಲಾಗಿದೆ. ಇದೇ ಬಂಡೀಪುರ ವನ್ಯಜೀವಿ

ಉದ್ಯಾನವನದಿಂದ ೮೮೦ ಚ.ಕಿ.ಮೀ ಪ್ರದೇಶವನ್ನು ಬಳಸಿಕೊಂಡು ೧೯೭೩ರಲ್ಲಿ ಬಂಡೀಪುರ ಹುಲಿ ಸಂರಕ್ಷಣೆಗೆ ಅದನ್ನು ಮೀಸಲಾಗಿರಿಸಲಾಯಿತು. ಇದನ್ನು ೧೯೭೩ರಲ್ಲಿ ಹುಲಿ ಯೋಜನೆಯಡಿ ತಂದಮೇಲೆ ಹುಲಿಗಳ ಸಂಖ್ಯೆಯಲ್ಲಿ ನಿರಂತರ ಹೆಚ್ಚಳ ಕಂಡುಬಂದಿದೆ. ಅಲ್ಲದೆ ಇದು ಶ್ರೀಗಂಧದ ಮರಗಳಿಗೆ ಹಾಗೂ ಅಪರೂಪದ ಸಸ್ಯ ಪ್ರಭೇದಗಳಿಗೆ ಹೆಸರುವಾಸಿ. ಬಂಡೀಪುರ ರಾಷ್ಟ್ರೀಯ ಉದ್ಯಾನವನ ೬೮೦ರಿಂದ ೧೪೫೪ ಮೀಟರ್ ಎತ್ತರದಲ್ಲಿದೆ. ಪಶ್ಚಿಮಘಟ್ಟಗಳ ಬುಡದಲ್ಲಿ ಕಪಿಲಾ ನದಿಯ ದಕ್ಷಿಣಕ್ಕೆ ಇದು ನೆಲೆಯಾಗಿದೆ. ಈ ಮೀಸಲು ಅರಣ್ಯದ ಮೂಲಕ ಕಪಿಲಾ, ನಾಗೂರ್ ಮತ್ತು ಮೋಯಾರ್ ನದಿಗಳು ಹರಿಯುತ್ತವೆ. ಹವಾಗುಣವು ಚಳಿಗಾಲದಲ್ಲಿ ಉಷ್ಣತೆ ೧೦ ಡಿಗ್ರಿ ಸೆಂ. ಮತ್ತು ಬೇಸಗೆಯಲ್ಲಿ ಗರಿಷ್ಠ ೨೮ ಡಿಗ್ರಿ ಸೆಂ. ಇರುತ್ತದೆ. ಮಾನ್ಸೂನ್ ಅವಧಿ ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ. ವರ್ಷವಿಡೀ ಈ ಉದ್ಯಾನವನ ತೆರೆದಿದ್ದರೂ ಭೇಟಿ ಕೊಡಲು ಅತ್ಯುತ್ತಮ ಕಾಲವೆಂದರೆ ಮಾನ್ಸೂನ್ ಅವಧಿ. ಈ ಅವಧಿಯಲ್ಲಿ ವನ್ಯಜೀವಿಗಳ ಚಲನವಲನ ಹೆಚ್ಚಾಗಿರುತ್ತದೆ. ಅರಣ್ಯವು ಹಸಿರಿನಿಂದ ನಳನಳಿಸುತ್ತದೆ. ರಸ್ತೆ ಕಡೆಯಿಂದ ನೋಡಿದಾಗ ಹಸಿರು ತೆಳುವಾಗಿದೆ ಎನ್ನಿಸಿದರೂ ಒಳಹೊಕ್ಕಂತೆ ಸಾಂದ್ರವಾಗುತ್ತ ಹೋಗುತ್ತದೆ.

**ಪ್ರಮುಖ ಸಸ್ಯವರ್ಗ:** ಸಾಗುವಾನಿ, ತೇಗ, ಬೀಟೆ, ಹೊನ್ನೆ, ಎತ್ತಿಗ, ದಡಸಾಲ, ನೆಲ್ಲಿ, ನಂದಿ, ಮತ್ತಿ, ದಿಂಡಿಗ, ಆಲೆ, ಸಗದೆ, ಮುಪ್ಪಾಗ, ಕಕ್ಕೆ, ಕಿರುಬಿದಿರು, ಬಿದಿರು, ಉರುಗಲು, ಕಗ್ಗಲಿ, ಜಾಲಗಿರಿ ಮತ್ತು ಕಾರೆ.

**ಪ್ರಮುಖ ಪ್ರಾಣಿವರ್ಗ:** ಹುಲಿ, ಚಿರತೆ, ಆನೆ, ಕಾಟಿ, ಸಾಂಬಾರ್, ಜಿಂಕೆ, ಕರಡಿ, ಚಿಟ್ಟು ಜಿಂಕೆ, ಕೆನ್ನಾಯಿ, ಕಾಡುಹಂದಿ, ಬೊಗಳುವ ಜಿಂಕೆ, ನಾಲ್ಕುಕೊಂಬಿನ ಜಿಂಕೆ, ಕಿರುಬ. **ಅಪಾಯದಂಚಿನಲ್ಲಿರುವ ಜೀವಿಗಳು:** ಹುಲಿ, ನಾಲ್ಕು ಕೊಂಬಿನ ಜಿಂಕೆ, ಕಾಟಿ, ಆನೆ, ಚಿರತೆ, ಕರಡಿ, ಮೊಸಳೆ, ಚಿಟ್ಟುಜಿಂಕೆ, ಹೆಬ್ಬಾವು, ಕಡಲಡೇಗೆ, **ಪಕ್ಷಿಗಳು:** ಬೂದುಕಾಡುಕೋಳಿ, ಡೇಗೆ, ತುರುಬಿನ ಪಾರಿವಾಳ, ಜೇನುಗಿಡುಗ, ರಾಜರಣಹದ್ದು, ಮೀನುಗೂಬೆ, ಕಾಕರಣೆ ಹಕ್ಕಿ, ನೀಲಗಿರಿ ನೊಣ ಹಿಡುಕ, ಮಲೆದಾಸ ಮಂಗಟ್ಟೆ ಹಕ್ಕಿ, ಕಂದು ಗಿಡುಗಗೂಬೆ, ಸಣ್ಣ ಬಾಳೆಗುಬ್ಬಿ, ಚಿಕ್ಕ ಹೂಕುಟುಕ **ಸರೀಸೃಪ:** ಕಾಳಿಂಗಸರ್ಪ, ನಾಗರಹಾವು, ಹೆಬ್ಬಾವು, ಮಂಡಲದ ಹಾವು, ಕೇರೆಹಾವು, ನೀರುಹಾವು, ಜೌಗುಮೊಸಳೆ, ಹಲ್ಲಿ, ಊಸರವಳ್ಳಿ, ಉಡ, ಕಪ್ಪೆ, ಮರಗಪ್ಪೆ, ನೆಲಗಪ್ಪೆ ಮತ್ತು ಆಮೆ.

**ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ:** ಬೆಂಗಳೂರಿನಿಂದ ಈ ಉದ್ಯಾನವನ ೨೨ ಕಿ.ಮೀ. ದಕ್ಷಿಣಕ್ಕಿದೆ. ಈ ಉದ್ಯಾನವನ್ನು ತಲಪಲು ಬೆಂಗಳೂರಿನಿಂದ ಸುಮಾರು ಅರ್ಧ ಗಂಟೆ ತೆಗೆದುಕೊಳ್ಳುತ್ತದೆ. ಇದೊಂದು ಗುಡ್ಡಗಾಡು. ಆದರೆ ನೈಸರ್ಗಿಕವಾಗಿ ಜೀವಿಸಂಪನ್ಮೂಲ ಸಮೃದ್ಧವಾಗಿರುವ ತಾಣಗಳಲ್ಲೊಂದು. ೨೫,೦೦೦ ಎಕರೆ (೧೦೪.೨೭ ಚ.ಕಿ.ಮೀ.) ವಿಸ್ತೀರ್ಣವಿರುವ ಈ ಉದ್ಯಾನವನ ಬೆಂಗಳೂರಿನ ಆಕರ್ಷಕ ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಬನ್ನೇರುಘಟ್ಟ ಹುಲಿ ಮತ್ತು ಸಿಂಹ ಸಂರಕ್ಷಣಾ ತಾಣವು ಭಾರತದ ಹುಲಿ, ಬಿಳಿಹುಲಿ, ಸಿಂಹ ಹಾಗೂ ಇತರ ಸ್ತನಿಗಳ ಆಶ್ರಯ ತಾಣವಾಗಿದೆ. ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಏರ್ಪಡಿಸುವ ಹುಲಿ ಸಫಾರಿ ಮತ್ತು ಸಿಂಹ ಸಫಾರಿ, ಗ್ರಾಂಡ್ ಸಫಾರಿಗಳು (ಸಸ್ಯಾಹಾರಿ ಪ್ರಾಣಿಗಳೂ ಸೇರಿದಂತೆ) ಈ ಸಂರಕ್ಷಣಾ ತಾಣವನ್ನು ನಿಭಾಯಿಸಲು ಆರ್ಥಿಕ ನೆರವು ನೀಡುತ್ತವೆ. ಇಲ್ಲಿನ ಹುಲಿ ಸಂರಕ್ಷಣಾ ತಾಣವನ್ನು ಭಾರತದ ಅರಣ್ಯ ಇಲಾಖೆ ಅನುಮೋದಿಸಿದೆ. ಇಲ್ಲಿರುವ ಸಣ್ಣ ಪ್ರಾಣಿ ಸಂಗ್ರಹಾಲಯದಲ್ಲಿ ಅಲ್ಲಿನ ಪ್ರಾಣಿಗಳ ಪ್ರಾತಿನಿಧಿಕ ಪ್ರದರ್ಶನವನ್ನು ನೋಡಬಹುದು. ಇಲ್ಲಿನ ಪ್ರಾಣಿ ಸಂಗ್ರಹಾಲಯವು ಒಂದು ಪ್ರಮುಖ ಆಕರ್ಷಣೆ. ಇದರಲ್ಲಿ ಸರೀಸೃಪಗಳ ಉದ್ಯಾನವನವೂ ಇದೆ; ಒಂದು ಸಣ್ಣ ರಂಗಮಂದಿರವೂ ಇದೆ. ಪ್ರತಿ ಮಂಗಳವಾರ ಪ್ರಾಣಿ ಸಂಗ್ರಹಾಲಯಕ್ಕೆ ರಜಾ ದಿನ. ದೇಶದ ಮೊದಲ

ಚಿಟ್ಟೆ ಉದ್ಯಾನವನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸ್ಥಾಪಿಸಲಾಗಿದೆ. ಚಿಟ್ಟೆಯ ಉದ್ಯಾನವನ ೭.೫ ಎಕರೆಗಳಷ್ಟು ವಿಸ್ತರಿಸಿದೆ (೩೦,೦೦೦ ಚ.ಮೀ.) ಇದರಲ್ಲಿ ಚಿಟ್ಟೆಯ ಸಂರಕ್ಷಣಾ ಘಟಕ, ಸಂಗ್ರಹಾಲಯ ಹಾಗೂ ಶ್ರವಣ–ದೃಶ್ಯ ಕೊಠಡಿಯೂ ಉಂಟು. ಚಿಟ್ಟೆ ಸಂಗ್ರಹಾಲಯಕ್ಕೆ ಪಾಲಿ ಕಾರ್ಬೊನೇಟ್ ಚಾವಣಿ ಇದ್ದು, ವೃತ್ತಾಕಾರದ ೧೦,೦೦೦ ಚ. ಅಡಿ (೩೦೦೦ ಚದರ ಮೀಟರ್) ಆವರಣವಿದೆ. ಅದರೊಳಗೆ ಚಿಟ್ಟೆಗಳ ಜೀವನಕ್ಕೆ ಆವಶ್ಯಕವಾದ ನೈಸರ್ಗಿಕ ಪರಿಸರವನ್ನು ಅತ್ಯಂತ ಜಾಗರೂಕತೆಯಿಂದ ನಿರ್ಮಿಸಲಾಗಿದೆ. ಇದು ಚಿಟ್ಟೆಗಳ ೨೦ ಪ್ರಭೇದಗಳಿಗೆ ಸಾಕಾಗುವಷ್ಟು ಅನುಕೂಲತೆ ಪಡೆದಿದೆ. ಇಡೀ ಪರಿಸರ ಉಷ್ಣ ವಲಯಕ್ಕೆ ಸರಿಹೊಂದಿಕೊಳ್ಳುವಂತೆ ರೂಪಿತವಾಗಿದೆ. ತೇವಾಂಶದ ಪರಿಸರ, ಕೃತಕ ಜಲಪಾತ, ಕಿರಿದಾದ, ನಡೆಯಬಹುದಾದ ಸೇತುವೆ, ಚಿಟ್ಟೆಗಳನ್ನು ಆಕರ್ಷಿಸುವಂತೆ ಅನೇಕ ಗಿಡಗಂಟೆಗಳನ್ನೊಳಗೊಂಡಿದೆ. ಸಂರಕ್ಷಣಾಲಯದಿಂದ ಎರಡು ಮತ್ತು ಮೂರನೇ ಗುಮ್ಮಟಕ್ಕೆ ಹೋಗಬಹುದು. ಅಲ್ಲಿ ದೃಷ್ಟಿ ಸೆಳೆಯುವ ಚಿತ್ರಗಳಿವೆ. ವಿಶೇಷವಾದ ಚಿಟ್ಟೆಗಳನ್ನು ಬಹು ನಾಜೂಕಾಗಿ ಸಂರಕ್ಷಿಸಿರುವ ಪ್ರದರ್ಶಕಗಳಿವೆ. ಈ ಉದ್ಯಾನವನಕ್ಕೆ ಕರ್ನಾಟಕ ಪ್ರಾಣಿ ಪ್ರಾಧಿಕಾರ, ಕೃಷಿ ವಿಶ್ವವಿದ್ಯಾಲಯ ಮತ್ತು ಅಶೋಕ ಟ್ರಸ್ಟ್ ಫಾರ್ ರೀಸರ್ಚ್ ಇನ್ ಇಕಾಲಜಿ ಅಂಡ್ ಎನ್‌ವಿರಾನ್‌ಮೆಂಟ್ ಸಹಯೋಗ ನೀಡಿದೆ.

**ಕುದುರೆಮುಖ ರಾಷ್ಟ್ರೀಯ ಉದ್ಯಾನವನ:** ಪಶ್ಚಿಮಘಟ್ಟಗಳಲ್ಲಿ ಉಷ್ಣವಲಯ ನಿತ್ಯಹರಿದ್ವರ್ಣ ವಿಧದ ಅರಣ್ಯಗಳಲ್ಲಿ ಎರಡನೇ ಅತಿ ದೊಡ್ಡ ವನ್ಯಜೀವಿ ರಕ್ಷಿತ ಪ್ರದೇಶ (೬೦೦.೩೨ ಚ.ಕಿ.ಮೀ.) ಎಂದು ಘೋಷಿಸಿರುವ ಉದ್ಯಾನವನ. ಈ ಉದ್ಯಾನವನ ಕರ್ನಾಟಕದ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಜಾಗತಿಕ ಮಟ್ಟದಲ್ಲಿ ಜೀವಿ ವೈವಿಧ್ಯ ಸಂರಕ್ಷಣೆಗಾಗಿ ಗುರುತಿಸಿರುವ ೩೪ ಅಗ್ರ ತಾಣಗಳ ಪೈಕಿ ಪಶ್ಚಿಮಘಟ್ಟಗಳೂ ಒಂದು. ಕುದುರೆಮುಖ ಉದ್ಯಾನವನವು ಜಾಗತಿಕ ಹುಲಿ ಸಂರಕ್ಷಣಾ ಆದ್ಯತಾ ಯೋಜನೆ–೧ರ ಅಡಿಯಲ್ಲಿ ಬರುತ್ತದೆ. ಈ ಯೋಜನೆಯ ರೂಪರೇಖೆಗಳನ್ನು ಸಿದ್ಧಪಡಿಸಿರುವುದು ವನ್ಯಜೀವಿ ಸಂರಕ್ಷಣಾ ಸಂಘ ಮತ್ತು ವರ್ಲ್ಡ್ ವೈಡ್‌ಫಂಡ್ ಅಮೆರಿಕ ಸಂಸ್ಥೆಗಳು. ೧೯೧೬ರಲ್ಲಿಯೇ ಬ್ರಿಟಿಷ್ ಸರ್ಕಾರ ಕುದುರೆಮುಖ ಪ್ರಾಂತ್ಯವನ್ನು ಮೀಸಲು ಅರಣ್ಯವೆಂದು ಘೋಷಿಸಿತು. ಅದರ ಉದ್ದೇಶ ಹಿಗ್ಗಾಮುಗ್ಗಾಗಿ ಅನುಸರಿಸುತ್ತಿದ್ದ

### ಬಂಡೀಪುರ ವನ್ಯಜೀವಿಗಳ ಗಣತಿ

| | ೧೯೯೧ | ೧೯೯೩ | ೧೯೯೫ | ೧೯೯೭ |
|---|---|---|---|---|
| ಹುಲಿ | ೫೮ | ೬೬ | ೭೪ | ೭೫ |
| ಚಿರತೆ | ೫೧ | ೮೧ | ೮೬ | ೮೮ |
| ಆನೆ | ೧,೧೦೭ | ೨,೨೧೪ | ೨,೨೧೪ | ೩,೪೭೧ |
| ಕಾಟಿ | ೧,೦೯೭ | ೧,೩೭೩ | ೧,೩೭೩ | ೨,೪೨೭ |
| ಕೆನ್ನಾಯಿ | ೧೪೮ | ೧೮೧ | ೧೮೧ | – |
| ಜಿಂಕೆ | ೩,೩೩೩ | ೫,೮೫೮ | ೫,೮೫೮ | ೮,೨೦೪ |
| ಸಾಂಬಾರ್ | ೭೦೬ | ೧,೧೯೬ | ೧,೧೯೬ | ೨,೩೮೬ |
| ಕರಡಿ | ೫೧ | ೬೬ | ೬೬ | – |
| ನಾಲ್ಕು ಕೊಂಬಿನ ಜಿಂಕೆ | ೧೪ | – | – | – |
| ಸಿಂಹ ಬಾಲದ ಕೋತಿ | ೧,೪೬೮ | ೧,೭೫೧ | ೧,೭೫೧ | – |
| ಹಂದಿ | ೧೪೮ | ೧೮೧ | ೧೮೧ | – |
| ಪುನುಗು | ೭೨ | ೧೩೧ | ೧೩೧ | – |

ಕಡಿ ಮತ್ತು ಸುಡು ಕೃಷಿ ಪದ್ಧತಿಗೆ ಲಗಾಮು ಹಾಕಿ ಅದು ಅರಣ್ಯದ ಕೇಂದ್ರ ಭಾಗಕ್ಕೂ ವಿಸ್ತರಿಸದಂತೆ ರಕ್ಷಿಸುವುದು. ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ಖ್ಯಾತ ಪರಿಸರ ಕಾರ್ಯಕರ್ತ ಮತ್ತು ಹುಲಿ ಸಂಶೋಧಕ ಡಾ. ಉಲ್ಲಾಸ ಕಾರಂತ ಅವರು, ಈಗಾಗಲೇ ಅಪಾಯದ ಅಂಚಿನಲ್ಲಿರುವ ಸಿಂಹಬಾಲದ ಮೆಕಾಕ್ ಕೋತಿಗಳು ಕರ್ನಾಟಕದಲ್ಲಿ ಹೇಗೆ ವಿತರಣೆಯಾಗಿವೆ ಎಂಬುದನ್ನು ಕುರಿತು ೧೯೭೩-೭೪ರಲ್ಲಿ ತಪಶೀಲಾಗಿ ಸಮೀಕ್ಷೆ ಕೈಗೊಂಡರು. ಅವರು ಅಧ್ಯಯನ ಮಾಡಿ ಈ ಬಗೆಯ ಕೋತಿಗಳಿಗೆ ಅವಶ್ಯಕವಾದ ಮಳೆಕಾಡು ಪರಿಸರ ಕುದುರೆಮುಖದಲ್ಲಿ ಸಮೃದ್ಧವಾಗಿದೆಯೆಂದು, ಮಲಬಾರ್‌ನಿಂದ ಹೊರಭಾಗದಲ್ಲಿ ಈ ಬಗೆಯ ಕೋತಿಗಳ ಸಂಖ್ಯೆ ಸಾಕಷ್ಟು ದೊಡ್ಡ ಪ್ರಮಾಣದಲ್ಲಿದೆಯೆಂದೂ ವರದಿಮಾಡಿದರು. ಅಲ್ಲದೆ ಈ ಬಗೆಯ ಕೋತಿಗಳನ್ನು ಯಶಸ್ವಿಯಾಗಿ ಪ್ರಾತಿನಿಧಿಕ ಪ್ರಭೇದ (ಫ್ಲಾಗ್‌ಷಿಪ್ ಸ್ಪೀಸೀಸ್) ಎಂದು ಪರಿಗಣಿಸಿ ಆ ಪ್ರದೇಶದ ಇಡೀ ಜೀವಿ ಸಂಕುಲವನ್ನೇ ಸಂರಕ್ಷಣೆ ಮಾಡಬೇಕೆಂದು ಆಗ್ರಹಪಡಿಸಿದರಲ್ಲದೆ ಸಿಂಹಬಾಲದ ಕೋತಿಗಳ ಸಂರಕ್ಷಣೆಗಾಗಿ ಇದೇ ಉದ್ಯಾನವನವನ್ನು ನೈಸರ್ಗಿಕ ಮೀಸಲು ಅರಣ್ಯವಾಗಿ ಅಭಿವೃದ್ಧಿಪಡಿಸಬೇಕೆಂದು ಸಲಹೆಮಾಡಿದರು. ಈ ವರದಿಯನ್ನಾಧರಿಸಿ ಕರ್ನಾಟಕ ರಾಜ್ಯ ವನ್ಯಜೀವಿ ಸಲಹಾ ಸಮಿತಿ ಸರ್ಕಾರಕ್ಕೆ ಸೂಚನೆ ನೀಡಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಸೃಷ್ಟಿಸುವಂತೆ ಸಲಹೆಮಾಡಿತು. ಇದರ ನಂತರ ಈ ಕುರಿತು ಮೊದಲ ಆದೇಶ ಹೊರಬಂತು. ೧೯೮೭ರಲ್ಲಿ ಕರ್ನಾಟಕ ಸರ್ಕಾರವು ಈ ಆದೇಶದನ್ವಯ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಿತು.

ಕುದುರೆಮುಖ ಪಟ್ಟಣ ಮೂಲತಃ ಕಬ್ಬಿಣ ಅದಿರಿನ ಪಟ್ಟಣ. ಕೇಂದ್ರ ಸರ್ಕಾರದ ಕುದುರೆಮುಖ ಕಬ್ಬಿಣದ ಗಣಿ ಕಂಪನಿಯ ಕೇಂದ್ರ. ಈ ಪ್ರದೇಶ ಪ್ರಕೃತಿ ಸೌಂದರ್ಯಕ್ಕೆ ಹೆಸರಾದುದು. ವನ್ಯಜೀವಿಗಳಿಂದ ಸಮೃದ್ಧವಾಗಿದ್ದರೂ ಇಲ್ಲಿನ ಅರಣ್ಯ ತುಂಬ ದಟ್ಟವಾಗಿರುವುದರಿಂದ ವನ್ಯಜೀವಿಗಳನ್ನು ವೀಕ್ಷಿಸುವುದು ಸುಲಭವಲ್ಲ. ಆದರೂ ಈ ಕಾಡಿನಲ್ಲಿ ಅಲೆಯುವುದೆಂದರೆ ಅದೊಂದು ರೋಮಾಂಚಕಾರಕ ಮತ್ತು ಉಲ್ಲಾಸ ತರುವ ಅನುಭವ. ತುಂಗ, ಭದ್ರಾ ಮತ್ತು ನೇತ್ರಾವತಿ ಈ ಮೂರೂ ಮುಖ್ಯ ನದಿಗಳ ಉಗಮ ಇಲ್ಲಿ ಎಂದು ಗುರುತಿಸಲಾಗಿದೆ. ಭಗವತಿ ದೇವತೆಯ ಪೀಠ ಮತ್ತು ೧.೮ ಮೀಟರ್ ಎತ್ತರವಿರುವ ವರಾಹನ ವಿಗ್ರಹಗಳು ಇಲ್ಲಿನ ಪ್ರಮುಖ ಆಕರ್ಷಣೆ. ತುಂಗ ಮತ್ತು ಭದ್ರಾ ನದಿಗಳು ಧಾರಾಳವಾಗಿ ಈ ಉದ್ಯಾನವನದಲ್ಲಿ ಹರಿಯುತ್ತವೆ. ಈ ಜಾಗಕ್ಕೆ ಬರುವವರಿಗೆ ನಿಜಕ್ಕೂ ಕದಂಬೀ ಜಲಪಾತ ಆಕರ್ಷಣೆ ಹುಟ್ಟಿಸುತ್ತದೆ. ದೊಡ್ಡ ಸ್ತನಿಗಳನ್ನು ಬೇಟೆಯಾಡುವ ಹುಲಿ, ಚಿರತೆ ಮತ್ತು ಕೆನ್ನಾಯಿಗಳನ್ನು ಪೋಷಿಸಿರುವ ಈ ಉದ್ಯಾನವನ ವೈವಿಧ್ಯಮಯ, ಅಪಾಯದಂಚಿನಲ್ಲಿರುವ ಸ್ತನಿಗಳನ್ನೂ ಪೋಷಿಸಿದೆ. ಈ ಭಾಗದಲ್ಲಿ ಹುಲಿಗಳ ಬೇಟೆಗೆ ಈಡಾಗುವ ಪ್ರಾಣಿಗಳೆಂದರೆ ಕಾಟಿ, ಸಾಂಬಾರ್, ಕಾಡುಹಂದಿ, ಚಿಕ್ಕ ಎರಳೆ, ಶವರೋಟೈನ್ ಎಂಬ ಎರಳೆಯ ಇನ್ನೊಂದು ಬಗೆ, ಬ್ಯಾನೆಟ್ ಕಪಿ, ಸಾಮಾನ್ಯ ಲಂಗೂರ್ ಹಾಗೂ ಸಿಂಹಬಾಲದ ಕೋತಿ. ಇಲ್ಲಿನ ತೇವಭರಿತ ಹವಾಗುಣ ಶೋಲಾ ಹುಲ್ಲುಗಾವಲಿನ ನೀರು ಹಿಡಿದಿಡುವ ಸಾಮರ್ಥ್ಯ ಹಾಗೂ ಅರಣ್ಯ ಇವೆಲ್ಲದರ ಫಲವಾಗಿ ಇಲ್ಲಿ ಸರ್ವಋತು ನದಿಗಳು ಹುಟ್ಟುತ್ತವೆ. ಮುಂದೆ ಅವು ಮುಖ್ಯ ನದಿಗಳನ್ನು ಸೇರುತ್ತವೆ. ತುಂಗ, ಭದ್ರಾ, ಮತ್ತು ನೇತ್ರಾವತಿ ನದಿಗಳು ಕರ್ನಾಟಕ ಮತ್ತು ಆಂಧ್ರಪ್ರದೇಶದ ಜನರ ಜೀವನಾಡಿಯಾಗಿವೆ. ಕುದುರೆಮುಖದ ತುದಿಯಲ್ಲಿ ಹಳೆಯ ಆದರೆ ಈಗ ತೊರೆದ ಲೋಲೋ ಹೆಸರಿನ ಮನೆಯೊಂದಿದೆ.

**ನಾಗರಹೊಳೆ ರಾಷ್ಟ್ರೀಯ ಉದ್ಯಾನವನ:** ಈ ಉದ್ಯಾನವನವು ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನ ಎಂಬ ಹೆಸರಿನಿಂದಲೂ ಖ್ಯಾತಿಯಾಗಿದೆ. ಮೈಸೂರಿನಿಂದ ೯೪ ಕಿ.ಮೀ. ದೂರದಲ್ಲಿದೆ. ಕೊಡಗು ಮತ್ತು ಮೈಸೂರು ಜಿಲ್ಲೆಗಳ ನಡುವೆ ಹಂಚಿಕೆಯಾಗಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಈಶಾನ್ಯದಲ್ಲಿರುವ ಈ ಉದ್ಯಾನವನವನ್ನು ಕಪಿಲಾ ಜಲಾಶಯ ಪ್ರತ್ಯೇಕಗೊಳಿಸುತ್ತದೆ. ಹಿಂದೆ ಮೈಸೂರು ಅರಸರ ಬೇಟೆಗೆಂದೇ ಇದು ಮೀಸಲಾಗಿತ್ತು. ಉದ್ಯಾನವನದಲ್ಲಿ ಕಾಡು ದಟ್ಟವಾಗಿದೆ. ಸಣ್ಣ ಪುಟ್ಟ ತೊರೆ, ಕಣಿವೆ, ಜಲಪಾತಗಳಿವೆ.

೧೯೭೫ರಲ್ಲಿ ಈ ಉದ್ಯಾನವನ ೫೭೫ ಚ.ಕಿ.ಮೀ. ವಿಸ್ತರಿಸಿತ್ತು. ನಾಗರಹೊಳೆ ಎಂಬುದು ಹೆಸರೇ ಹೇಳುವಂತೆ ಕನ್ನಡಪದ. ನಾಗ ಎಂದರೆ ಹಾವಿನ ಒಂದು ಪ್ರಮುಖ ಪ್ರಭೇದ, ಹೊಳೆ ಎಂದರೆ ನದಿ. ೧೯೫೫ರಲ್ಲಿ ಸ್ಥಾಪಿತವಾದ ಈ ಉದ್ಯಾನವನ ದೇಶದಲ್ಲಿ ಅತ್ಯುತ್ತಮವಾಗಿ ನಿರ್ವಹಿಸುತ್ತಿರುವ ಉದ್ಯಾನವನಗಳಲ್ಲೊಂದು. ಇಲ್ಲಿ ಉಷ್ಣವಲಯದ ಹವಾಗುಣವಿದೆ, ಬೇಸಗೆಯಲ್ಲಿ ಬಿರುಬಿಸಲು, ಚಳಿಗಾಲ ಆಹ್ಲಾದಕರವಾಗಿರುತ್ತದೆ. ಈ ಉದ್ಯಾನವನದ ವಿಶೇಷ ಲಕ್ಷಣವೆಂದರೆ ಹುಲಿ ಮತ್ತು ಬೇಟೆಯ ನಡುವೆ ಇರುವ ಆರೋಗ್ಯಕರ ಅನುಪಾತ. ಬಂಡೀಪುರಕ್ಕಿಂತಲೂ ಇಲ್ಲಿ ಹುಲಿ, ಕಾಡುಕೋಣ ಮತ್ತು ಆನೆಗಳ ಸಂಖ್ಯೆ ಹೆಚ್ಚಾಗಿಯೇ ಇದೆ. ಈ ಉದ್ಯಾನವನವು ನೀಲಗಿರಿ ಜೀವಿಗೋಳದ ಒಂದು ಭಾಗವೇ ಆಗಿದೆ. ನಾಗರಹೊಳೆ ಸೇರಿದಂತೆ ಪಶ್ಚಿಮಘಟ್ಟಗಳು, ನೀಲಗಿರಿ ಉಪಗುಚ್ಛವನ್ನು (೬೦೦೦+ ಚ.ಕಿ.ಮೀ). ಯುನೆಸ್ಕೋ ವಿಶ್ವ ಪರಂಪರಾ ತಾಣವಾಗಿ ಪರಿಗಣಿಸಲು ಯೋಜಿಸಿದೆ. ದಕ್ಷಿಣ ಭಾಗದಲ್ಲಿ ಬಹುತೇಕ ತೇವಾಂಶಭರಿತ ಉದುರೆಲೆ ಕಾಡು (ಸಾಗುವಾನಿ, ತೇಗ, ಬೀಟೆ), ಪೂರ್ವದಲ್ಲಿ ಶುಷ್ಕ ಉಷ್ಣವಲಯದ ಕಾಡು (ಹಾಲೆ, ಜಾಲಿ), ಮತ್ತು ಉಪಪರ್ವತ, ಕಣಿವೆಯ ಜೌಗು ಕಾಡು (ಯುಜೇನಿಯ–ಕುಂತಿ) ಕಂಡುಬರುತ್ತವೆ. **ಸ್ತನಿಗಳು:** ಆನೆ, ಗುಳ್ಳೆನರಿ, ಹುಲಿ, ಚಿರತೆ, ಕಾಟಿ, ಪುನುಗುಬೆಕ್ಕು, ಸಾಂಬಾರ್, ಚುಕ್ಕೆ ಜಿಂಕೆ, ಮುಂಗುಸಿ, ಕತ್ತೆಕಿರುಬ. **ಸರೀಸೃಪಗಳು:** ಕಾಳಿಂಗಸರ್ಪ, ಕಟ್ಟುಹಾವು, ಹೆಬ್ಬಾವು, ಮಂಡಲದಹಾವು, ಆಮೆ, ಉಡ, ನೆಲಗಪ್ಪೆ ಇತ್ಯಾದಿ. **ಪ್ರಮುಖ ವೃಕ್ಷಗಳು:** ಬೀಟೆ, ತೇಗ, ಶ್ರೀಗಂಧ ಮತ್ತು ಸಿಲ್ವರ್ ಓಕ್.

**ಕರ್ನಾಟಕದಲ್ಲಿ ಪಶ್ಚಿಮಘಟ್ಟಗಳು:** ನೀಲಗಿರಿ ಜೀವಿಗೋಳವು ಏಷ್ಯದ ಬಹು ದೊಡ್ಡ ಸಂಖ್ಯೆಯ ಆನೆಗಳಿಗೆ ತವರಾಗಿದೆ. ಪ್ರಮುಖ ಆನೆ ಯೋಜನೆ, ಹುಲಿ ಯೋಜನೆಗಳಿಗೂ ಇದು ಮೀಸಲು ಅರಣ್ಯವೆನಿಸಿದೆ. ಬ್ರಹ್ಮಗಿರಿ ಮತ್ತು ಪುಷ್ಪಗಿರಿ ವನ್ಯಧಾಮಗಳು ಆನೆಗಳ ಮುಖ್ಯವಾದ ನೆಲೆಗಳೆನ್ನಿಸಿವೆ. ಕರ್ನಾಟಕದ ಘಟ್ಟಭಾಗಗಳು ಸುಮಾರು ೬೦೦೦ ಆನೆಗಳಿಗೆ ಆಶ್ರಯನೀಡಿವೆ (೨೦೦೪ರಲ್ಲಿದ್ದಂತೆ). ಹಾಗೆಯೇ ಭಾರತದಲ್ಲಿ ನಾಶಭೀತಿ ಎದುರಿಸುತ್ತಿರುವ ಹುಲಿಗಳ ೧೦ ಭಾಗ ಇಲ್ಲಿ ಸಂರಕ್ಷಿತವಾಗಿವೆ. ಸುಂದರ್‌ಬನ್ ಹೊರತುಪಡಿಸಿದರೆ ಭಾರತದಲ್ಲಿ ದೊಡ್ಡ ಸಂಖ್ಯೆಯಲ್ಲಿ ಹುಲಿಗಳಿರುವುದು, ಕರ್ನಾಟಕದ ಅರಣ್ಯಭಾಗ ಅಭಾದಿತವಾಗಿ ಮುಂದುವರಿದಿರುವ ತಮಿಳುನಾಡು ಮತ್ತು ಕೇರಳದ ಈ ಭಾಗಗಳಲ್ಲೇ. ನಾಗರಹೊಳೆ ಹಾಗೆಯೇ ಬಂಡೀಪುರ ರಾಷ್ಟ್ರೀಯ ಉದ್ಯಾನವನ ಸುಲಭವಾಗಿ ಬೇಟೆಗೆ ತುತ್ತಾಗುವ ಕಾಟಿಗಳ ಹೆಚ್ಚಿನ ಸಂಖ್ಯೆಗೆ ಆಶ್ರಯ ನೀಡಿದೆ. ಇಲ್ಲಿ ಸುಮಾರು ೫,೦೦೦ ಕಾಟಿಗಳಿವೆಯೆಂದು ಅಂದಾಜು. ಈ ಅರಣ್ಯಗಳ ಪಶ್ಚಿಮಕ್ಕೆ ಕೊಡಗು ಅರಣ್ಯಗಳಲ್ಲಿ ಅಪಾಯದ ಅಂಚಿನಲ್ಲಿರುವ ನೀಲಗಿರಿ ಲಂಗೂರ್‌ಗಳು ಬಹು ದೊಡ್ಡ ಸಂಖ್ಯೆಯಲ್ಲಿವೆ. ಭದ್ರಾ ಜೀವಿ ವನ್ಯಧಾಮ ಮತ್ತು ಚಿಕ್ಕಮಗಳೂರಿನ ಹುಲಿಯೋಜನಾ ತಾಣಗಳು ಭಾರತದ ಚಿಕ್ಕ ಎರಳೆಗಳ ಆಶ್ರಯತಾಣ. ಅನೇಕ ಏಷ್ಯದ ಆನೆಗಳು, ಕಾಟಿ ಸುಲಭಕ್ಕೆ ಈಡಾಗುವ ಕರಡಿ, ಚಿರತೆ, ಹುಲಿ ಹಾಗೂ ಕಾಡುಹಂದಿಗಳು ಕೇರಳದ ಅರಣ್ಯಗಳಲ್ಲಿ ನಿರಾತಂಕವಾಗಿ ನೆಲೆಸಿವೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ಆನೇಕಲ್ ಮೀಸಲು ಅರಣ್ಯಗಳು ತಮಿಳುನಾಡು ಮತ್ತು ಕರ್ನಾಟಕದ ಅರಣ್ಯ ಭಾಗಗಳನ್ನು ಒಂದುಗೂಡಿಸುವ, ಆನೆಗಳು ಸ್ವೇಚ್ಛೆಯಾಗಿ ತಿರುಗುವ ಮಾರ್ಗಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಮತ್ತು ಅಂಶಿ ರಾಷ್ಟ್ರೀಯ ಉದ್ಯಾನಗಳು ಕಪ್ಪುಚಿರತೆ, ಸಾಮಾನ್ಯ ಚಿರತೆ ಮತ್ತು ದೊಡ್ಡ ಮಂಗಟ್ಟೆ ಹಕ್ಕಿ (ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್)ಗೆ ತವರಾಗಿದೆ. ಬೆಳಗಾವಿ ಜಿಲ್ಲೆಯ ಭೀಮಗಡವನ್ನು ವನ್ಯಜೀವಿ ಧಾಮವಾಗಿ ರೂಪಿಸಲು ಯೋಚಿಸಲಾಗಿದೆ. ಇಲ್ಲಿ ಸ್ಥಳೀಯ ಪಕ್ಷಿ ಎನ್ನಿಸಿರುವ ಆದರೆ ನಾಶಭೀತಿ ಎದುರಿಸುತ್ತಿರುವ ರಾಟನ್ಸ್ ಮುಕ್ತಬಾಲದ ಬಾವಲಿಗಳ ತವರು. ಇದರ ಬಳಿಯೇ ಇರುವ ಕೃಷ್ಣಾಪುರ ಗುಹೆಗಳಲ್ಲಿ ಅಷ್ಟೇನೂ ಪರಿಚಿತವಲ್ಲದ ಥಿಯೋಬಾಲ್ಡ್ಸ್ ಟೂಂಬ್ ಬಾವಲಿಗಳಿವೆ. ನಮ್ಮ ದೇಶದಲ್ಲಿ ಈ ಬಗೆಯ ಬಾವಲಿಗಳಿರುವ ಮೂರು ತಾಣಗಳ ಪೈಕಿ ಇದೂ ಒಂದು. ತಲೆವಾಡಿ ಗುಹೆಗಳಲ್ಲಿ ರಕ್ತಹೀರುವ ಬಾವಲಿಗಳಿವೆ.

**ಸರೀಸೃಪಗಳು:** ಸರೀಸೃಪ ವರ್ಗದ ಯೂರೋ ಪೆಲ್ಟಿಡೇ ಸರ್ಪ ಕುಟುಂಬಕ್ಕೆ ಸೇರಿದ ಸರ್ಪಗಳು ಬಹುತೇಕ ಈ ಪ್ರಾಂತ್ಯಕ್ಕೆ ಸೀಮಿತವಾಗಿವೆ. **ಉಭಯಚರಿಗಳು:** ಪಶ್ಚಿಮಘಟ್ಟದ ಉಭಯಚರಿಗಳಲ್ಲಿ ವಿಶಿಷ್ಟತೆ ಮತ್ತು ವೈವಿಧ್ಯ ಎರಡನ್ನೂ ಕಾಣಬಹುದು. ಈ ಪ್ರದೇಶದ ಒಟ್ಟು ೧೭೯ ಉಭಯಚರಿ ಪ್ರಭೇದಗಳ ಪೈಕಿ ಶೇ. ೮೦ ಭಾಗ ಈ ಪ್ರದೇಶದ ಸ್ಥಳೀಯ ಪ್ರಭೇದಗಳು. ಸ್ಥಳೀಯ ಪ್ರಭೇದಗಳ ಬಹುಪಾಲು ಪರ್ವತಗಳ ಮಳೆಕಾಡುಗಳಲ್ಲಿ ಹಂಚಿಹೋಗಿವೆ. ಅಪಾಯದ ಅಂಚಿನಲ್ಲಿರುವ ನೇರಿಳೆ ಬಣ್ಣದ ಕಪ್ಪೆಗಳನ್ನು ೨೦೦೩ರಲ್ಲಿ ಇಲ್ಲಿ ಪತ್ತೆಹಚ್ಚಲಾಯಿತು. ಈಗ ಅದನ್ನು ಜೀವಂತ ಪಳೆಯುಳಿಕೆ ಎಂದು ಪಟ್ಟಿಮಾಡಲಾಗಿದೆ. ಈ ಪ್ರಭೇದದ ಕಪ್ಪೆ, ಸೀ ಷೆಲ್ಸ್‌ನಲ್ಲಿರುವ ಪ್ರಭೇದಕ್ಕೆ ನಿಕಟಸಂಬಂಧಿ ಎನ್ನಲಾಗಿದೆ. ರ್‍ಯಾಕೋಪೋರಸ್, ಪಾಲಿಪಿಡೇಟ್ಸ್, ಫಿಲೌಟಸ್ ಮತ್ತು ಬಫೋ ಜಾತಿಗೆ ಸೇರಿದ ಅನುರನಗಳ ನಾಲ್ಕು ಹೊಸ ಪ್ರಭೇದಗಳನ್ನು ಪಶ್ಚಿಮಘಟ್ಟಗಳಿಂದ ವರದಿ ಮಾಡಲಾಗಿದೆ (ಅನುರ ಎಂಬುದು ಉಭಯಚರಿ ವರ್ಗದಲ್ಲಿ ಬರುವ ಕಪ್ಪೆ, ನೆಲಗಪ್ಪೆಗಳನ್ನೊಳಗೊಂಡ ಗಣ. ಈ ಗಣದಲ್ಲಿ ಸದ್ಯದಲ್ಲಿ ೫,೨೮೦ ಪ್ರಭೇದಗಳನ್ನು ಗುರುತಿಸಿದೆ).

**ಮೀನು:** ಪಶ್ಚಿಮಘಟ್ಟದ ನೀರಿನ ಆಕರಗಳಿಂದ ೧೦೨ ಮೀನು ಪ್ರಭೇದಗಳನ್ನು ಪಟ್ಟಿಮಾಡಲಾಗಿದೆ. ಪಶ್ಚಿಮಘಟ್ಟದ ಹೊಳೆಗಳು ಅನೇಕ ಆಕರ್ಷಕ, ಅಲಂಕಾರಿಕ ಬಣ್ಣದ ಮೀನುಗಳಿಗೆ ತವರು. ಇಂಥ ಅಲಂಕಾರಿಕ ಮೀನುಗಳೆಂದರೆ ರೆಡ್‌ಲೈನ್ ಟಾರ್ಪಿಟೋ ಬಾರ್ಬ್, ರೆಡ್ ಟೇಲ್ಡ್ ಬಾರ್ಬ್, ಆಸ್ಟಿಯೋ ಬ್ರಾಮಾ ಬಕೇರಿ, ಗುಂತರ್ಸ್ ಕ್ಯಾಟ್ ಫಿಷ್, ಸಿಹಿನೀರಿನ ಪಫರ್ ಫಿಷ್, ಟೆಟ್ರಡಾನ್ ಟ್ರಾವಾಂಕೋರಿಕಸ್, ಕ್ಯಾರಿನೋ ಟೆಂಡ್ರಾನ್ ಇಮಿಟೇಟರ್ ಹಾಗೂ ಸಾಗರವಾಸಿಗಳ ಕಿಲನೋ ಡಾನ್ ಪೊಟಾಕೋ (ಬುಕನನ್ ಮತ್ತು ಹ್ಯಾಮಿಲ್ಟನ್, ೧೮೨೨,). ಮಲಬಾರ್ ಮಶೀರ್‌ಗಳಂತಹ ಮಶೀರ್‌ಗಳು.

**ಪಕ್ಷಿಗಳು:** ಕೊನೆಯಪಕ್ಷ ೫೦೮ ಪಕ್ಷಿಪ್ರಭೇದಗಳು ಕರ್ನಾಟಕದಲ್ಲಿ ಕಂಡುಬಂದಿದ್ದು, ಈ ಪೈಕಿ ೫೦೦ ಪ್ರಭೇದಗಳ ಬಹುಪಾಲು ಪಶ್ಚಿಮಘಟ್ಟದಲ್ಲಿ ಕಂಡುಬರುತ್ತದೆ. ಮಲಬಾರ್ ಶ್ರೇಣಿಗಳ ಉತ್ತರ ತುದಿಯಲ್ಲಿ, ಸಹ್ಯಾದ್ರಿ ಶ್ರೇಣಿಯ ದಕ್ಷಿಣ ತುದಿಯಲ್ಲಿ ಭದ್ರಾ ವನ್ಯಜೀವಿ ಧಾಮವಿದೆ. ಇಲ್ಲಿ ಎರಡೂ ಶ್ರೇಣಿಗಳಲ್ಲಿರುವ ಪಕ್ಷಿಗಳನ್ನು ಕಾಣಬಹುದು. ಕೀಟಗಳು; ಕೇರಳ ಒಂದರಲ್ಲೇ ಸುಮಾರು ೬೦೦೦ ಕೀಟ ಪ್ರಭೇದಗಳಿವೆಯೆಂದು ಅಂದಾಜು. ಪಶ್ಚಿಮಘಟ್ಟದಲ್ಲಿ ದಾಖಲಿಸಿರುವ ೩೩೪ ಚಿಟ್ಟೆ ಪ್ರಭೇದಗಳಲ್ಲಿ ನೀಲಗಿರಿ ಜೀವಿಗೋಳದಲ್ಲಿ ೩೧೬ ಪ್ರಭೇದಗಳನ್ನು ವರದಿಮಾಡಲಾಗಿದೆ. **ಮೃದ್ವಂಗಿಗಳು:** ಪಶ್ಚಿಮಘಟ್ಟಗಳಲ್ಲಿ ಋತುಮಾನಕ್ಕನುಗುಣವಾಗಿ ಮಳೆ ಬೀಳುವ ಪರಿ, ನೆಲದ ಬಸವನ ಹುಳುಗಳು ಅತ್ಯಗತ್ಯವಾಗಿ ಕೆಲವು ಕಾಲ ನಿಷ್ಕ್ರಿಯವಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡುತ್ತದೆ. ಹೀಗಾಗಿ ಅವುಗಳ ಸಂಖ್ಯೆ ಮತ್ತು ವೈವಿಧ್ಯ ವೃದ್ಧಿಸುವಂತಾಗಿದೆ ಪಶ್ಚಿಮಘಟ್ಟಗಳಲ್ಲಿ ಉದರಪಾದಿಗಳ ಪ್ರಭೇದ ೨೫೮ ಎಂದು ಗಣನೆ ಮಾಡಲಾಗಿದೆ. ಇವು ೫೭ ಕುಲಕ್ಕೆ ಸೇರಿದ ೨೪ ಕುಟುಂಬಗಳನ್ನೊಳಗೊಂಡಿದೆ.ಕ್ರಿ.ಶ. ೨೦೦೬ರಲ್ಲಿ ಭಾರತವು ಯುನೆಸ್ಕೋದ ಮಾನವ ಮತ್ತು ಜೀವಿಗೋಳ ವಿಭಾಗಕ್ಕೆ ಅರ್ಜಿಸಲ್ಲಿಸಿ, ಪಶ್ಚಿಮಘಟ್ಟಗಳನ್ನು ರಕ್ಷಿತ ವಿಶ್ವ ಪರಂಪರಾ ತಾಣದ ಪಟ್ಟಿಯಲ್ಲಿ ಸೇರಿಸಬೇಕೆಂದು ವಿನಂತಿಸಿಕೊಂಡಿದೆ. ಇದರಲ್ಲಿ ನೆರೆಯ ಏಳು ತಾಣಗಳೂ ಸೇರುತ್ತವೆ. ಕರ್ನಾಟಕಕ್ಕೆ ಸೇರಿದ ತಾಣಗಳೆಂದರೆ :

**ಪಶ್ಚಿಮಘಟ್ಟಗಳು: ತಲಕಾವೇರಿ ಉಪಗುಚ್ಛ:** ಇದರಲ್ಲಿ ಆರು ಸ್ಥಳೀಯ ಸಹಜಾವರಣಗಳಿವೆ. ಕೇರಳದ ಅರಾಲಂ ಮೀಸಲು ಅರಣ್ಯವನ್ನುಳಿದರೆ ತಲಕಾವೇರಿ ಪ್ರಾಂತ್ಯಕ್ಕೆ ಸೇರುವ ಎಲ್ಲ ಸ್ಥಳೀಯ ಸಹಜಾವರಣಗಳೂ ಕರ್ನಾಟಕದಲ್ಲೇ ಇವೆ. ಪುಷ್ಪಗಿರಿ ವನ್ಯಜೀವಿ ಧಾಮವು (೯೨.೬೫ ಚ.ಕ.ಮೀ) ದಟ್ಟವಾದ ನಿತ್ಯಹರಿದ್ವರ್ಣದ–ಅರೆನಿತ್ಯಹರಿದ್ವರ್ಣದ ಸಸ್ಯವರ್ಗದಿಂದ ಕೂಡಿದ್ದು, ಉತ್ತರದ ಭಾಗದಲ್ಲಿ ಶೋಲಾ ಅರಣ್ಯ ಭಾಗವನ್ನು ಕಾಣಬಹುದು. ಈ ಧಾಮದ ಕಡಿದಾದ ನೆಲವು ಬೆಟ್ಟಗುಡ್ಡಗಳಲ್ಲಿ ಹರಿಯುವ ನದಿಗಳಿಂದ ಉಂಟಾದ ಮನೋಹರ ದೃಶ್ಯವನ್ನು ನೀಡುವ ಜಲಪಾತಗಳನ್ನು ಸೃಷ್ಟಿಸಿವೆ. ಈ ಭಾಗದ ಔನ್ನತ್ಯ ೧೬೦ರಿಂದ

೧೭೧೨ ಮೀಟರ್ ವ್ಯತ್ಯಯಗೊಳ್ಳುತ್ತದೆ. ಉದ್ಯಾನವನದ ಉತ್ತರಕ್ಕೆ ಇರುವ ಉತ್ತುಂಗ ಶೃಂಗವೆಂದರ ಪುಷ್ಪಗಿರಿ. ಇಲ್ಲಿನ ಉಷ್ಣತೆ ೧೦ ರಿಂದ ೩೮ ಡಿಗ್ರಿ ಸೆಂ.ಗಳಷ್ಟು ವ್ಯತ್ಯಯವಾಗುತ್ತದೆ. ವಾರ್ಷಿಕ ಮಳೆ ಪ್ರಮಾಣ ೬,೫೦೦ ಮಿ.ಮೀ.ಗೂ ಅಧಿಕ. ಬ್ರಹ್ಮಗಿರಿ ವನ್ಯಜೀವಿ ಧಾಮವು (೧೮೧.೨೯ ಚ.ಕಿ.ಮೀ) ಕೂಡ ಕೆಳಗಿನ ಶ್ರೇಣಿಗಳಲ್ಲಿ ನಿತ್ಯಹರಿದ್ವರ್ಣದ ಹಾಗೂ ಅರೆನಿತ್ಯಹರಿದ್ವರ್ಣದ ಅರಣ್ಯಗಳಿಂದಾಗಿದೆ. ಎತ್ತರದ ಭಾಗದಲ್ಲಿ ಇಲ್ಲೂ ಶೋಲಾ ಅರಣ್ಯವಿದೆ. ಈ ವನ್ಯಜೀವಿ ಧಾಮದ ಪೂರ್ವದ ಅಂಚು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದ (ನಾಗರಹೊಳೆ) ನೈಋತ್ಯ ದಿಕ್ಕಿಗೆ ಹೊಂದಿಕೊಂಡಂತಿದೆ. ಇವುಗಳ ಮಧ್ಯೆ ಕಿರಿದಾದ ಪಟ್ಟಿಯಲ್ಲಿ ಕಾಫಿ ತೋಟಗಳಿವೆ. ಈ ವನ್ಯಜೀವಿ ಧಾಮದ ಆಗ್ನೇಯ ಭಾಗದಲ್ಲಿರುವ ಬ್ರಹ್ಮಗಿರಿ ಉದ್ಯಾನವನವೇ ಅತಿ ಎತ್ತರದ ಭಾಗ. ತಲಕಾವೇರಿ ಉಪಗುಚ್ಛವಿರುವ ಭಾಗದ ಔನ್ನತ್ಯ ೬೫ರಿಂದ ೧೬೦೭ ಮೀಟರ್‌ವರೆಗೆ ವ್ಯತ್ಯಯ ತೋರುತ್ತದೆ. ಹಾಗೆಯೇ ಉಷ್ಣತೆ ೫ರಿಂದ ೩೨ ಡಿಗ್ರಿ ಸೆಂ.ಗಳಷ್ಟು, ಸರಾಸರಿ ವಾರ್ಷಿಕ ಮಳೆಯು ೨,೫೦೦ ಮಿ.ಮೀ. ನಿಂದ ೬,೦೦೦ ಮಿ.ಮೀ. ವರೆಗೆ ವ್ಯತ್ಯಯ ತೋರುತ್ತವೆ. ತಲಕಾವೇರಿ ವನ್ಯಜೀವಿ ಧಾಮವು (೧೦೫.೦೧ ಚ.ಕಿ.ಮೀ.) ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿದೆ. ಮುಖ್ಯವಾಗಿ ಇದು ನಿತ್ಯಹರಿದ್ವರ್ಣ ಕಾಡಿನಿಂದಾಗಿದೆ. ಈ ವನ್ಯಜೀವಿ ಧಾಮದ ಪೂರ್ವ ಅಂಚಿನಲ್ಲಿ, ಕಾವೇರಿ ಹುಟ್ಟುವ ತಲಕಾವೇರಿಯಿಂದಾಗಿ ವನ್ಯಧಾಮಕ್ಕೆ ಈ ಹೆಸರು ಬಂದಿದೆ. ಔನ್ನತ್ಯ ಮತ್ತು ಉಷ್ಣತೆ ಕ್ರಮವಾಗಿ ೬೪ರಿಂದ ೧೬೫೯ ಮೀಟರ್, ೧೦ರಿಂದ ೩೫ ಡಿಗ್ರಿ ಸೆಂ.ಗಳಷ್ಟು ವ್ಯತ್ಯಯಗೊಳ್ಳುತ್ತದೆ. ವಾರ್ಷಿಕ ೬,೫೦೦ ಮಿ.ಮೀ. ಮಳೆಯಾಗುತ್ತದೆ. ತಲಕಾವೇರಿ ಮತ್ತು ಪುಷ್ಪಗಿರಿ ವನ್ಯಜೀವಿ ಧಾಮದ ನಡುವಿನ ಪ್ರದೇಶವನ್ನು ಈ ಯೋಜನೆಯಿಂದ ಹೊರಗಿಡಲಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಮಂಗಳೂರು–ಮಡಿಕೇರಿ ರಸ್ತೆ ಈ ತಾಣದ ಮೂಲಕ ಹಾಯ್ದು ಜೀವಾವಾಸದ ನೆಲೆಯನ್ನು ವಿಘಟಿಸಿ ಅವನತಿಯುಂಟುಮಾಡಿದೆ. ಈ ರಸ್ತೆಯ ಇಬ್ಬದಿಯ ಎರಡು ಕಿಲೋ ಮೀಟರ್ ಫಾಸಲೆಯಲ್ಲಿ ಯಾವ ನೈಸರ್ಗಿಕ ಅರಣ್ಯವೂ ಕಂಡುಬರುವುದಿಲ್ಲ. ರಸ್ತೆಯ ಪಕ್ಕದಲ್ಲಿ ಕೆಲವೆಡೆ ತೇಗ ಮತ್ತು ರಬ್ಬರ್ ತೋಟಗಳನ್ನು ಬೆಳೆಸಲಾಗಿದೆ.

**ಪಶ್ಚಿಮಘಟ್ಟಗಳು – ಕುದುರೆಮುಖ ಉಪಗುಚ್ಛ (ಐದು ಸ್ಥಳೀಯ ಸಹಜಾವರಣಗಳು ಸೇರಿ):** ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಸೋಮೇಶ್ವರ ವನ್ಯಜೀವಿ ಧಾಮ, ಸೋಮೇಶ್ವರ–ಆಗುಂಬೆ–ಬಾಲಹಳ್ಳಿ ಮೀಸಲು ಅರಣ್ಯಗಳು ಪಶ್ಚಿಮಘಟ್ಟದ ಜೀವಿ ವೈವಿಧ್ಯದ ಅಗ್ರತಾಣದ ಕೇಂದ್ರಭಾಗದಲ್ಲಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಇಡೀ ಪಶ್ಚಿಮಘಟ್ಟದಲ್ಲಿನ ಮನಮೋಹಕ ದೃಶ್ಯಗಳಿರುವ ನೆಲೆಗಳಲ್ಲೊಂದು. ಇದರಲ್ಲಿ ನಿತ್ಯಹರಿದ್ವರ್ಣ, ಅರೆ ನಿತ್ಯಹರಿದ್ವರ್ಣ ಹಾಗೂ ಹುಲ್ಲುಗಾವಲಿರುವ ಶೋಲಾ ಆವಾಸಸ್ಥಾನ ಪಶ್ಚಿಮಘಟ್ಟದ ಉನ್ನತ ಪ್ರದೇಶದ ಲಕ್ಷಣಗಳು. ಈ ಭಾಗದ ಔನ್ನತ್ಯ ೧೨೦ರಿಂದ ೧೮೯೨ ಮೀಟರ್‌ಗಳಷ್ಟು ವ್ಯತ್ಯಯ ತೋರುತ್ತದೆ. ಉದ್ಯಾನವನದ ದಕ್ಷಿಣಕ್ಕಿರುವ ಕುದುರೆಮುಖವೇ ಅತ್ಯುನ್ನತ ಶೃಂಗ. ಉದ್ಯಾನವನದ ಸರಾಸರಿ ಉಷ್ಣತೆ ೧೭ ಡಿಗ್ರಿ ಸೆಂ. ನಿಂದ ೨೮ ಡಿಗ್ರಿ ಸೆಂ.ವರೆಗೆ ವ್ಯತ್ಯಯವಾಗುತ್ತದೆ. ಹಾಗೆಯೇ ವಾರ್ಷಿಕ ಮಳೆ ಪ್ರಮಾಣದಲ್ಲು ೧೭೭೮ ಮಿ.ಮೀ, ನಿಂದ ೬,೩೫೦ ಮಿ.ಮೀ. ವರೆಗೆ ವ್ಯತ್ಯಯವಾಗುವುದುಂಟು. ಸರಾಸರಿ ಮಳೆ ಪ್ರಮಾಣ ೪,೦೦೦ ಮಿ.ಮೀ. ಗರಿಷ್ಠ ಮಳೆ ಪ್ರಮಾಣ ೧೯೯೪ರಲ್ಲಿ ದಾಖಲಿಸಿದಂತೆ ೧೦,೦೦೦ ಮಿ.ಮೀ. ಸ್ಥಳ ಲಕ್ಷಣ ಮುಖ್ಯವಾಗಿ ಪರ್ವತದಿಂದ ಆವೃತವಾಗಿದೆ. ಪರ್ವತಗಳ ಮಧ್ಯದ ಏಣು ಉದ್ಯಾನವನದಲ್ಲಿ ಉತ್ತರ ದಕ್ಷಿಣವಾಗಿ ಹಾಯುತ್ತದೆ. ಇಡೀ ಉದ್ಯಾನವನದ ತುಂಬ ಸ್ಪಟಿಕಶುಭ್ರ ನೀರಿನ ತೊರೆಗಳನ್ನೂ ಆಕರ್ಷಕ ದೃಶ್ಯಾವಳಿಯ ಜಲಪಾತಗಳನ್ನೂ ನೋಡಬಹುದು. ಕುದುರೆಮುಖ ಉದ್ಯಾನವನ ಉತ್ತರ ಮತ್ತು ಪೂರ್ವದಲ್ಲಿ ಕಾಫಿ ಮತ್ತು ಚಹ ತೋಟಗಳಿಂದ ಆವೃತವಾಗಿವೆ. ಆದರ ಪಶ್ಚಿಮದಲ್ಲಿ ನೆಲ ಅರಬ್ಬೀ ಸಮುದ್ರದೆಡೆಗೆ ಕಡಿದಾಗಿದೆ. ಈ ಉದ್ಯಾನವನದ ನೈಋತ್ಯಕ್ಕೆ ಅರಣ್ಯ ಮಾರ್ಗವಿದ್ದು, ಅದು ಸೋಮೇಶ್ವರ ವನ್ಯಜೀವಿ ಧಾಮಕ್ಕೆ ಸಂಪರ್ಕ ಕಲ್ಪಿಸುತ್ತದೆ. ಸೋಮೇಶ್ವರ ಎಂಬ ಹೆಸರು ಈ ಉದ್ಯಾನಕ್ಕೆ

ಬಂದಿರುವುದು ಸನಿಹದಲ್ಲೇ ಇರುವ ಸೋಮೇಶ್ವರ ದೇವಾಲಯದಿಂದಾಗಿ. ಇದರ ನೆರೆಯಲ್ಲಿರುವ ೧೦೫.೩ ಚ.ಕಿ.ಮೀ. ವಿಸ್ತೀರ್ಣದ ಮೀಸಲು ಅರಣ್ಯ ಬಹುಪಾಲು ನಿತ್ಯ ಹರಿದ್ವರ್ಣ ಹಾಗೂ ಅರೆ ನಿತ್ಯಹರಿದ್ವರ್ಣ ಅರಣ್ಯದಿಂದ ಕೂಡಿದೆ. ಈ ಮೀಸಲು ಅರಣ್ಯಗಳನ್ನು ವನ್ಯಜೀವಿ ಧಾಮಕ್ಕೆ ಸೇರಿಸುವ ಪ್ರಯತ್ನಗಳಾಗುತ್ತಿವೆ. ಔನ್ನತ್ಯ ೭೫ರಿಂದ೮೭೦ ಮೀಟರ್‌ಗಳಷ್ಟು ವ್ಯತ್ಯಯವಾಗುತ್ತದೆ. ಹಾಗೆಯೇ ಉಷ್ಣತೆಯಲ್ಲೂ ೨೦ರಿಂದ ೩೦ ಡಿಗ್ರಿ ಸೆಂ. ಗಳವರೆಗೆ ವ್ಯತ್ಯಯವಾಗುತ್ತದೆ. ಇಲ್ಲಿನ ಸರಾಸರಿ ಮಳೆ ಪ್ರಮಾಣ ೬,೦೦೦ ಮಿ.ಮೀ.

**ಕರ್ನಾಟಕದಲ್ಲಿ ಪರಿಸರದ ಸ್ಥಿತಿಗತಿ:** ಭೂಮಿಯ ಮೇಲೆ ಜೀವಿಗಳ ಉಳಿವು ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆಯನ್ನು ಆಧರಿಸಿದೆ. ಈ ಸಂಪನ್ಮೂಲಗಳ ಬಳಕೆ ನಮ್ಮ ಸುತ್ತಲಿನ ಪರಿಸರದ ಮೇಲೆ ಪ್ರಭಾವ ಬೀರುತ್ತದೆ. ನೀರಿನ ಅತಿಬಳಕೆ ಅದರ ಮಾಲಿನ್ಯಕ್ಕೂ ಕಾರಣವಾಗುತ್ತದೆ. ಇದೇ ರೀತಿ ಕಲ್ಲಿದ್ದಲು, ತೈಲ, ಖನಿಜಗಳು ಮತ್ತು ಲೋಹಗಳ ಅತಿಬಳಕೆಯಿಂದಾಗಿ ಈ ಆಕರಗಳು ಬರಿದಾಗುತ್ತಿವೆ.

**ನೀರಾವರಿಯಲ್ಲಿನ ಅತ್ಯಾಧುನಿಕತೆ:** ಇಲ್ಲಿ ಸರಿಯಾದ ಕಾಲುವೆ ವ್ಯವಸ್ಥೆ ಇರದಿದ್ದಲ್ಲಿ ಮಣ್ಣನ್ನು ಲವಣಭರಿತವಾಗಿಸುತ್ತದೆ ಇಲ್ಲವೇ ನೀರು ನಿಲ್ಲುವಂತೆ ಮಾಡುತ್ತದೆ. ಉರುವಲಿನ ದಹನದಿಂದ ಕಾರ್ಬನ್ ಡೈ ಆಕ್ಸೈಡ್ ಅಧಿಕ ಪ್ರಮಾಣದಲ್ಲಿ ಸಂಗ್ರಹವಾಗಿ ಅದು ಕೊನೆಗೆ ಭೂತಾಪ ಏರಲು ಅವಕಾಶಮಾಡಿಕೊಡುತ್ತದೆ. ಹೀಗೆ ಸಂಪನ್ಮೂಲಗಳ ಬಳಕೆ ಮತ್ತು ಕೊರತೆ ನಮ್ಮ ಪರಿಸರದ ಮೇಲೆ ಪ್ರಭಾವ ಬೀರುತ್ತವೆ.ನಮ್ಮ ರಾಜ್ಯದ ಶೇ. ೬೦ ಭಾಗ ಭೂಮಿ ಒಂದಲ್ಲ ಒಂದು ಬಗೆಯ ಕೃಷಿಗೆ ಈಡಾಗಿದೆ. ಇದು ರಾಷ್ಟ್ರೀಯ ಸರಾಸರಿಯಾದ ಶೇ. ೫೧ ಭಾಗಕ್ಕಿಂತ ಹೆಚ್ಚಾಗಿದೆ. ಭೂಮಿಯ ಒಂದು ಭಾಗ ಕನಿಷ್ಠ ಕೃಷಿಗೆ ಬೇಕೆಬೇಕು. ಅದಕ್ಕಾಗಿ ತಗಲುವ ಶ್ರಮ ಮಾತ್ರ ಅತಿ ಹೆಚ್ಚು. ಆದರೆ ಅದರಿಂದ ಬರುವ ಆದಾಯ ತೀರ ಕಡಿಮೆ. ಹೊಟ್ಟೆ ಪಾಡಿಗಾಗಿ ಕೈಗೊಳ್ಳುವ ಈ ಬಗೆಯ ಕೃಷಿ ಆರ್ಥಿಕವಾಗಿ ಲಾಭದಾಯಕವಲ್ಲ. ಹೀಗಾಗಿ ಇಂಥ ಭೂಮಿ ಬಹು ಬೇಗ ಪಾಳುಬಿದ್ದು ಅದರ ಮೇಲ್ಮೈ ಮಣ್ಣು ಕೊಚ್ಚಿಹೋಗುತ್ತದೆ. ಯಾವ ಭೂಮಿ ಕೃಷಿಗೆ ಯೋಗ್ಯವಲ್ಲವೋ ಅಂಥ ಭೂಮಿ ಅರಣ್ಯ ಮತ್ತು ಹುಲ್ಲುಗಾವಲು ಬೆಳೆಸಲು ಸೂಕ್ತವಾಗಿರುತ್ತದೆ.

ನೀರಿನ ಅತಿ ಬಳಕೆಯಿಂದಾಗಿ ನೀರಾವರಿ ಭೂಮಿ ಹೆಚ್ಚು ಲವಣಭರಿತವಾಗುತ್ತದೆ ಇಲ್ಲವೇ ನೀರು ನಿಂತುಬಿಡುತ್ತದೆ. ಹೀಗಾಗಿ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೭೧,೦೦೦ ಹೆಕ್ಟೇರು ಜಮೀನು ಲವಣಮಯವಾಗಿದೆ, ಇಲ್ಲವೇ ಕ್ಷಾರಯುಕ್ತವಾಗಿದೆ. ಹಾಗೆಯೆ ತುಂಗಭದ್ರಾ ಜಲಾಶಯದ ನೀರಾವರಿ ಪ್ರದೇಶದ ೩೩,೦೦೦ ಹೆಕ್ಟೇರು ಭೂಮಿ ಕ್ಷಾರವಾಗಿದೆ ಇಲ್ಲವೇ ಅದರಲ್ಲಿ ನೀರು ನಿಂತಿದೆ. ಇದರಂತೆ ಮಲಪ್ರಭಾ ಮತ್ತು ಘಟಪ್ರಭಾ ನದಿಗಳ ನೀರನ್ನು ಆಶ್ರಯಿಸಿದ ೨೪,೪೫೫ ಹೆಕ್ಟೇರು ಪ್ರದೇಶದಲ್ಲೂ ಇದೇ ಪರಿಸ್ಥಿತಿ ಇದೆ. ಕಾವೇರಿಕೊಳ್ಳದ ೧೫,೫೦೦ ಹೆಕ್ಟೇರು ಭೂಮಿಯ ಸ್ಥಿತಿಯೂ ಬೇರೆಯಲ್ಲ. ಕೆಲವೊಂದು ಪ್ರದೇಶದಲ್ಲಿ ಇದಕ್ಕೆ ಪರಿಹಾರ ಕಂಡುಕೊಳ್ಳಲು ಭಾರಿ ಮೊತ್ತದ ಹಣವನ್ನೇ ಖರ್ಚುಮಾಡಬೇಕಾದ ಸ್ಥಿತಿ ಒದಗಿದೆ. ರಾಜ್ಯದಲ್ಲಿ ಗೋಮಾಳವು ಒಂದೇ ಸಮನೆ ಕುಗ್ಗುತ್ತಿದೆ. ೧೯೫೬ರಿಂದ ೧೯೮೩ರವರೆಗೆ ಗೋಮಾಳವು ಶೇ.೩೧ ಕುಗ್ಗಿದರೆ, ಅದೇ ವೇಳೆ ಜಾನುವಾರುಗಳ ಸಂಖ್ಯೆ ಶೇ.೩೦ರಷ್ಟು ಹೆಚ್ಚಿತ್ತು. ಅತಿಯಾಗಿ ಮೇಯುವುದರಿಂದ, ಜಾನುವಾರುಗಳು ಮೇಯಲು ಬಳಸುವ ದಾರಿ ಇನ್ನಷ್ಟು ಪೆಡಸಾಗುವುದನ್ನು ಗಮನಿಸಿದರೆ ಒಂದನ್ನು ಮತ್ತೊಂದು ಅನುಸರಿಸುತ್ತದೆ ಎನ್ನಿಸುತ್ತದೆ.

ಕೃಷಿ ಹಾಗೂ ಕೃಷಿಸಂಬಂಧೀ ಚಟುವಟಿಕೆಗಳ ವಿಸ್ತರಣೆಯ ಫಲವಾಗಿ ಬಯಲಿನ ನೈಸರ್ಗಿಕ ಸಸ್ಯಾವರಣ ಸಾಕಷ್ಟು ಹಾನಿಗೀಡಾಗಿದೆ. ವಾಸ್ತವವಾಗಿ ಈ ಬಗೆಯ ಸಸ್ಯಾವರಣದ ವಿಶಿಷ್ಟ ಲಕ್ಷಣ – ಅಂದರೆ ಕುರುಚಲು ಹೆಚ್ಚು ಕಡಿಮೆ ಪೂರ್ತಿ ಕಣ್ಮರೆಯಾಗಿದೆ. ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ

ಜಾಗ ಬಿಟ್ಟರೆ ವನ್ಯಜೀವಿಗಳನ್ನು ಸಂಪೂರ್ಣವಾಗಿ ಅಳಿಸಿಹಾಕಲಾಗಿದೆ. ಅಂತೆಯೇ ಪಶ್ಚಿಮಘಟ್ಟದಲ್ಲಿನ ಪ್ರಕೃತಿದತ್ತ ಸಸ್ಯಾವರಣವನ್ನು ಛಿದ್ರಮಾಡಿ ಅದು ಅಪಾಯದ ಘಟ್ಟವನ್ನು ತಲಪಿರುವ ಎಚ್ಚರಿಕೆಯನ್ನು ಕೊಟ್ಟಿದೆ. ಇದು ಜೀವಿಗಳ ನಿರ್ಗಮನದ ದರದ ಮೇಲೆ ಗಂಭೀರವಾದ ಪರಿಣಾಮ ಬೀರಲಿದೆ. ರಾಜ್ಯದ ಹಲವೆಡೆ ಈಗಾಗಲೇ ವನ್ಯಜೀವಿಗಳು ಕಣ್ಮರೆಯಾಗಿವೆ. ಆವಾಸ ಸ್ಥಾನದ ನಷ್ಟ, ನಿರಂತರವಾಗಿ ಕಾಡನ್ನು ಛಿದ್ರಮಾಡುತ್ತಿರುವುದು ಹಾಗೂ ಕಾನೂನುಬಾಹಿರವಾಗಿ ವನ್ಯಜೀವಿಗಳನ್ನು ಕೊಲ್ಲುತ್ತಿರುವುದರಿಂದ ಅವುಗಳ ಸಂಖ್ಯೆ ನಿರಂತರವಾಗಿ ಕುಗ್ಗುತ್ತಿದೆ.

ಪಶ್ಚಿಮಘಟ್ಟದ ಅರಣ್ಯ ಪ್ರದೇಶವನ್ನು ಏಲಕ್ಕಿ, ಕೋಕೊ, ರಬ್ಬರ್, ಕಾಫಿ ಮತ್ತು ಟೀ ತೋಟಗಳಾಗಿ ಪರಿವರ್ತಿಸಲಾಗುತ್ತಿದೆ. ಇದೇ ಕಾಲಕ್ಕೆ ನಾಟ ಮತ್ತು ಉರುವಲಿಗಾಗಿ ಬೆಳೆಯುವ ಮರಗಳು ಸಮೃದ್ಧ ಉಷ್ಣವಲಯದ ಕಾಡನ್ನು ಸ್ಥಾನಾಂತರ ಮಾಡುತ್ತಿವೆ. ಈ ತೋಟಗಳೇನೋ ವಾಣಿಜ್ಯಕವಾಗಿ ಲಾಭದಾಯಕ ನಿಜ, ಆದರೆ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಆವಾಸ ಸ್ಥಾನದ ಜೈವಿಕ ವೈವಿಧ್ಯಕ್ಕೆ ಸಾಕಷ್ಟು ಧಕ್ಕೆ ಉಂಟುಮಾಡಬಹುದು. ಪಶ್ಚಿಮವಾಹಿ ನದಿಗಳನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಂಡ ಮೇಲೆ ವಿಸ್ತಾರವಾದ ಪ್ರದೇಶ ಮುಳುಗಡೆಯಾಗಿದೆ. ಅಭಿವೃದ್ಧಿ ಯೋಜನೆಗಳಿಂದಾಗಿ ಜನರನ್ನು ಸ್ಥಳಾಂತರಿಸಿದ್ದರಿಂದ ಆ ಜನಗಳ ಪುನರ್ವಸತೀಕರಣಕ್ಕೆ ಗುಂಪು ಗುಂಪಾಗಿ ಜನವಸತಿ ಮಾಡಿದ್ದರಿಂದ ಅರಣ್ಯದ ವಿಸ್ತೀರ್ಣ ಮತ್ತಷ್ಟು ಕುಗ್ಗುವಂತಾಯಿತು.

ಕೆರೆ ಮತ್ತು ಜಲಾಶಯಗಳ ಬಹು ಗಂಭೀರ ಸಮಸ್ಯೆ ಎಂದರೆ ಹೂಳು ತುಂಬುವುದು. ವರ್ಷವರ್ಷವೂ ಕೆರೆಗಳ ಸಾಮರ್ಥ್ಯ ಕುಗ್ಗುತ್ತ ಹೋಗುತ್ತದೆ. ಹಾಗೆಯೇ ಕೆರೆ ಆಧರಿಸಿದ ನೀರಾವರಿ ಪ್ರದೇಶವೂ ಕುಗ್ಗುತ್ತದೆ. ತೂಬುಗಳನ್ನು ತೆರೆಯಲು ಅಶಕ್ಯವಾಗುವ ಹಂತ ತಲಪಿದಾಗ ಅಂಥ ಕೆರೆಗಳಿಂದ ನೀರಾವರಿಗೆ ಯಾವ ಪ್ರಯೋಜನವೂ ಆಗದು. ಜಲಾನಯನ ಪ್ರದೇಶಗಳಲ್ಲಿ ಸಾಧ್ಯವಾದಷ್ಟೂ ಅರಣ್ಯೀಕರಣ ಮಾಡುವುದೇ ಇದಕ್ಕೆ ಮದ್ದು ಎಂಬ ಸಲಹೆಗಳೂ ಉಂಟು. ಇತರ ಉಪಾಯಗಳೆಂದರೆ ದಡದ ಸಮೀಪ ಕೃಷಿ ಮಾಡದಂತೆ ನಿಷೇಧಿಸುವುದು ಮತ್ತು ಹೂಳು ಹರಿದುಬರದಂತೆ ತಡೆಯಲು ನದಿಯ ಮೇಲ್ಭಾಗದೆಡೆ ತಡೆಯೊಡ್ಡುಗಳನ್ನು ನಿರ್ಮಿಸುವುದು.ನವೀಕರಿಸಬಹುದಾದ ಹಾಗೂ ನವೀಕರಿಸಲಾಗದ ನೈಸರ್ಗಿಕ ಸಂಪತ್ತಿನ ದುರ್ಬಳಕೆ ಕೂಡ ಪರಿಸರದ ಮೇಲೆ ಪ್ರಭಾವ ಬೀರಲು ಸಾಧ್ಯ. ಆಯಾ ಸ್ಥಳ, ವಿಧಾನ ಮತ್ತು ಪ್ರಮಾಣವನ್ನವಲಂಬಿಸಿ ಖನಿಜಗಳ ಹೆಚ್ಚುವರಿ ಉತ್ಪಾದನೆಯಲ್ಲೂ ಏರಿಳಿತವಿರುತ್ತದೆ. ಗಣಿಗಳ ಸುತ್ತಣ ಭಾಗವು ಗಣಿಗಾರಿಕೆ, ಗಣಿ ಕಾರ್ಮಿಕರಿಂದ ಬಾಧೆಗೊಳಗಾಗುತ್ತದೆ. ಸಂಪನ್ಮೂಲಗಳು ದೀರ್ಘಕಾಲ ಬಾಳಿಕೆ ಬರುವಂತೆ ಪರಿಸರದ ಅಂಶಗಳನ್ನು ಪರಿಗಣಿಸಿ, ಗಣಿಮಾಡುವ ಪ್ರಮಾಣ ಮತ್ತು ವಿಧಾನಗಳನ್ನು ನಿಯಂತ್ರಿಸಬೇಕು.

ಯಾವುದೇ ಆಕರವನ್ನು ಸಹಜವಾಗಿ ಬಳಸಲು ಆಗದಂತೆ ಪರಿಸರಕ್ಕೆ ಹೊರಗಿನ ವಸ್ತುಗಳನ್ನು ಬಿಡುವುದೇ ಮಾಲಿನ್ಯ. ನೈಸರ್ಗಿಕ ನೀರಿನ ಆಕರಗಳಿಗೆ ವ್ಯರ್ಥವಾದ ನೀರನ್ನು ಬಿಟ್ಟಾಗ ಅದು ಜಲಮಾಲಿನ್ಯಕ್ಕೆ ಎಡೆಗೊಡುತ್ತದೆ. ಕೈಗಾರಿಕೆಗಳು ಹಾಗೂ ಮಾನವ ವಸಾಹತು – ಈ ಎರಡೂ ನೀರಿನ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಕೈಗಾರಿಕಾ ಹೊರಸೂಸುಗಳಿಂದ ಕಾರ್ಬನಿಕ, ರಾಸಾಯನಿಕ ಜೊತೆಗೆ ಅಪಾಯಕಾರಿ ಮಾಲಿನ್ಯವೂ ಆಗಬಹುದು. ಈ ಮಾಲಿನ್ಯವನ್ನು ತಡೆಯುವ ಸಲುವಾಗಿ ಆಯಾ ಕೈಗಾರಿಕೆಗಳಿಗೆ ಅನ್ವಯಿಸುವಂತೆ ಹೊರಸೂಸುವಿಕೆಗೆ ಒಂದು ಶಿಷ್ಟತೆಯನ್ನು (ಸ್ಟಾಂಡರ್ಡ್) ನಿಗದಿಪಡಿಸಬೇಕಾಗಿದೆ. ಪರಿಸರದ ನೀರಿಗಿಂತ ಹೆಚ್ಚುವರಿ ಉಷ್ಣತೆಯ ನೀರಿನಿಂದಾಗಿ ತಾಪ ಮಾಲಿನ್ಯವಾಗುತ್ತದೆ. ಇದನ್ನೂ ನಿಯಂತ್ರಿಸಬೇಕಾಗಿದೆ. ನೀರಿನ ಕಾಯಿದೆ (ಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ)ಯನ್ನು ಲೋಕಸಭೆಯಲ್ಲಿ ೧೯೭೪ನೇ ಮಾರ್ಚ್ ೨೩ರಂದು ಶಾಸನಬದ್ಧಗೊಳಿಸಲಾಯಿತು. ರಾಜ್ಯದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ನೀರಿನ

ಮಾಲಿನ್ಯವಾಗುತ್ತಿರುವುದು ನಗರ ಸಂದಣಿಯಿಂದ. ಕೊಳಚೆ ನೀರನ್ನು ವಿಸರ್ಜಿಸುವ ಮೊದಲು ಸಂಬಂಧಪಟ್ಟ ಇಲಾಖೆಗಳು ಅದನ್ನು ಸಂಸ್ಕರಿಸಬೇಕಾಗಿರುವುದು ಕಡ್ಡಾಯ. ಆದಾಗ್ಗೂ ೧೭೨ ಪುರಸಭೆಗಳ ಪೈಕಿ ೧೩೯ ಪುರಸಭೆಗಳು ಕೊಳಚೆ ನೀರನ್ನು ವಿಸರ್ಜಿಸಲು ತಕ್ಕ ನೆಲದಾಳದ ಚರಂಡಿಗಳನ್ನಾಗಲಿ ಅಥವಾ ಕೊಳಚೆ ನೀರನ್ನು ಶುದ್ಧೀಕರಿಸುವ ಸ್ಥಾವರಗಳನ್ನಾಗಲಿ ಹೊಂದಿಲ್ಲ.

**ವಾಯುಮಾಲಿನ್ಯ:** ಕೈಗಾರಿಕೆಗಳು ವಿಸರ್ಜಿಸುವ ರಾಶಿ ರಾಶಿ ಉತ್ಸರ್ಜನೆಗಳ ಜೊತೆಗೆ ತೇಲುಕಣಗಳು ಹಾಗೂ ದುರ್ವಾಸನೆಯ ಹೊಗೆಯೂ ಹೊರಬರುತ್ತದೆ. ಈ ಬಗೆಯ ಉತ್ಸರ್ಜನೆಯನ್ನು ನಿಯಂತ್ರಿಸಬೇಕಾಗುತ್ತದೆ. ಸೈಕ್ಲೋನ್, ಸ್ಕ್ರಬ್ಬರ್ ಹಾಗೂ ವಿದ್ಯುತ್ ತಟಸ್ಥ ಅವಕ್ಷೇಪಕ ಮುಂತಾದ ಶಿಷ್ಟತೆಗನುಗುಣವಾದ ಸಾಧನಗಳನ್ನು ಬಳಸುವಂತೆ ನೋಡಿಕೊಳ್ಳಬೇಕಾಗುತ್ತದೆ. ಸಂಚಿತವಾದ ಕಣಸಮೂಹ ಗಟ್ಟಿ ಮುದ್ದೆಯನ್ನುಂಟು ಮಾಡುವುದರಿಂದ ಅದನ್ನೂ ಯುಕ್ತರೀತಿಯಲ್ಲಿ ವಿಸರ್ಜಿಸಬೇಕಾಗುತ್ತದೆ. ರಾಯಚೂರಿನ ಶಾಖೋತ್ಪನ್ನ ಸ್ಥಾವರದಿಂದ ದಿನವಹಿ ಸುಮಾರು ೩,೦೦೦ ಟನ್ನು ಬೂದಿ ಉತ್ಪಾದನೆಯಾಗುತ್ತಿದೆ. ಮಂಗಳೂರಿನ ಬಹು ದೊಡ್ಡ ಶಾಖೋತ್ಪನ್ನ ಸ್ಥಾವರದಿಂದಲೂ ದಿನವಹಿ ೨೦,೦೦೦ ಟನ್ನು ಬೂದಿ ಉತ್ಪನ್ನವಾಗುತ್ತಿದೆ. ಕೇಂದ್ರ ಸರ್ಕಾರ ೧೯೮೧ರಲ್ಲಿ ವಾಯುಮಾಲಿನ್ಯ (ಪ್ರತಿಬಂಧಕ ಮತ್ತು ನಿಯಂತ್ರಣ) ಕಾಯ್ದೆಯನ್ನು ಜಾರಿಗೆ ತಂದು ಮಾಲಿನ್ಯ ನಿಯಂತ್ರಣಕ್ಕೆ ಒಂದು ಹೆಜ್ಜೆ ಮುಂದಿಟ್ಟಿತು. ಶಬ್ದ ಮಾಲಿನ್ಯಕ್ಕೆ ಕಾರಣಗಳೆಂದರೆ ೧)ಕೈಗಾರಿಕಾ ಶಬ್ದ, ೨) ವಾಹನ ಸಂಚಾರ ಶಬ್ದ, ೩) ಸಾಂಸ್ಕೃತಿಕ ಕಾರ್ಯಕ್ರಮಗಳಿಂದಾಗುವ ಶಬ್ದ. ಈ ಮೂರನ್ನೂ ವಾಯು ಕಾಯ್ದೆ ೧೯೮೧ರ (ಪ್ರತಿಬಂಧಕ ಮತ್ತು ನಿಯಂತ್ರಣ) ಅಡಿ ತರಲಾಗಿದೆ. ಮಲಿನಗೊಂಡ ಗಾಳಿ ಮತ್ತು ನೀರಿನಂತೆ ಶಬ್ದವೂ ಮನುಷ್ಯರಿಗೆ ಬಾಧಕವೇ. ನಗರ ಜೀವನಕ್ಕೆ ಸಂಬಂಧಿಸಿದಂತೆ ಶಬ್ದ ಮಾಲಿನ್ಯ ಹೆಚ್ಚಾಗುತ್ತಿದೆ. ನಮ್ಮ ಕಿವಿಗಳು ಹೆಚ್ಚಾಗುವ ಶಬ್ದದ ಮಟ್ಟಕ್ಕೆ ಹೊಂದಿಕೊಳ್ಳುತ್ತವೆಂದು ಬಹಳ ಮಂದಿಯ ತಪ್ಪು ತಿಳಿವಳಿಕೆ. ವಾಸ್ತವವಾಗಿ ಕಿವಿಗಳು ಅದಕ್ಕೆ ಹೊಂದಿಕೊಳ್ಳಲಾರವು. ವ್ಯಕ್ತಿಗೆ ವಯಸ್ಸಾದಂತೆ ಕಿವಿಗಳ ಕಾರ್ಯ ಚಟುವಟಿಕೆಯೂ ಸದ್ದಿಲ್ಲದೆ ನಿಂತುಬಿಡುತ್ತದೆ.

ಪರಿಸರದ ರಕ್ಷಣೆ ಮತ್ತು ಇನ್ನಷ್ಟು ಉತ್ತಮಪಡಿಸಲು ಹೆಚ್ಚು ವ್ಯಾಪಕವಾಗಿ ಅನ್ವಯಿಸುವಂತಹ ಪರಿಸರ ಕಾಯ್ದೆ (ರಕ್ಷಣೆ)ಯನ್ನು ಕೇಂದ್ರ ಸರ್ಕಾರವು ೧೯೮೬ರ ಮೇ ೨೬ರಂದು ಶಾಸನಬದ್ಧಗೊಳಿಸಿತು. ೧೯೮೧ರಲ್ಲಿ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯನ್ನು ಸ್ಥಾಪಿಸಲಾಯಿತು. ಇದರ ಉದ್ದೇಶ ವಾಯುಮಾಲಿನ್ಯವನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಸಮ್ಮಿಲಿತ ಮಾರ್ಗವನ್ನು ಅನುಸರಿಸುವುದು ಮತ್ತು ರಾಜ್ಯದ ಅರಣ್ಯ ಸಂಪನ್ಮೂಲ ಹಾಗೂ ಇತರ ಸಂಪನ್ಮೂಲಗಳ ಅಭಿವೃದ್ಧಿ. ಪರಿಸರ (ರಕ್ಷಣೆ) ಕಾಯ್ದೆಯು ೧೯೮೬ರಿಂದ ಜಾರಿಯಲ್ಲಿದೆ. ಮತ್ತು ಕಳೆದ ಎರಡು ವರ್ಷಗಳಲ್ಲಿ ಹಾಲಿ ಜಲ ಕಾಯ್ದೆ ಮತ್ತು ವಾಯು ಕಾಯ್ದೆಗಳನ್ನು ತಿದ್ದುಪಡಿ ಮಾಡಲಾಗಿದೆ. ಈಗ ಜಾರಿಯಲ್ಲಿರುವ ಪರಿಸರ ಕಾನೂನು, ಪರಿಸರ ಮಾಲಿನ್ಯ ನಿಯಂತ್ರಣ ಮಾಡುವ ಸಂಸ್ಥೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾರ್ವಜನಿಕರಿಗೆ ಅವಕಾಶ ನೀಡುತ್ತದೆ. ಅಪಾಯಕಾರಿ ರಾಸಾಯನಿಕ ಮತ್ತು ತೈಲದಿಂದ ಸಮುದ್ರ ತೀರದ ಮಾಲಿನ್ಯವನ್ನು ನಿಯಂತ್ರಿಸುವುದು ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಹೊಣೆ. ಇದರ ಜೊತೆಗೆ ಬೀಚ್‌ಗಳ ನಿರ್ವಹಣೆಗೂ ಹೆಚ್ಚಿನ ಮಹತ್ವ ಕೊಡಲಾಗಿದೆ.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಕರ್ನಾಟಕ ಸರ್ಕಾರವು ಜಲ (ಜಲಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ) ಕಾಯ್ದೆಯನ್ವಯ ೧೯೭೪ರ ಸೆಪ್ಟೆಂಬರ್ ೨೧ರಂದು ಜಲಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣಕ್ಕಾಗಿ ಕರ್ನಾಟಕ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯನ್ನು ಸ್ಥಾಪಿಸಿತು. ೧೯೮೧ರಲ್ಲಿ ವಾಯು ಕಾಯ್ದೆ (ಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ) ಕಾಯ್ದೆಯನ್ನು ಶಾಸನಬದ್ಧಗೊಳಿಸಿದ ನಂತರ ಈ ಕಾಯ್ದೆಯನ್ನು ಅನುಷ್ಠಾನಗೊಳಿಸುಸ ಹೊಣೆಯನ್ನು ಮಂಡಳಿಗೆ ನೀಡಿತು. ಈ ಮಂಡಳಿಯನ್ನು ಮುಂದೆ ೧೯೮೫ರಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಎಂದು ಮರುನಾಮಕರಣ ಮಾಡಲಾಯಿತು.

ಮಂಡಳಿಯು ಈ ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಜಾರಿಗೆ ತಂದಿದೆ. ೧. ಜಲಕರ ಕಾಯ್ದೆ (ಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ) ೧೯೭೭. ೧೯೯೧ರಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡಿದೆ. ೨., ಜಲಕರ ನಿಯಮ (ಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ) ೧೯೭೮. ೩. ಪರಿಸರ (ರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ ೧೯೮೬ರ ಅಡಿ ರಚಿಸಿದ ನಿಯಮಗಳು. ಅ) ಅಪಾಯಕಾರಿ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾಯಿಸುವುದು) ನಿಯಮ ೧೯೮೯. ಆ) ತಯಾರಿಕೆ, ಸಂಗ್ರಹಣೆ ಮತ್ತು ಅಪಾಯಕಾರಿ ರಾಸಾಯನಿಕಗಳ ಆಮದು ನಿಯಮ, ೧೯೮೯. ಮತ್ತು ೪. ಸಾರ್ವಜನಿಕ ಬಾಧ್ಯತಾ ವಿಮೆ ಕಾಯ್ದೆ, ೧೯೯೧. ಮಂಡಳಿಯು ೧೯೯೯ರ ಮಾರ್ಚ್ ೩೧ರ ಹೊತ್ತಿಗೆ ಒಟ್ಟು ೯,೦೧೨ ಕೈಗಾರಿಕೆಗಳನ್ನು ಮಾಲಿನ್ಯ ನಿಯಂತ್ರಣ ಕಾನೂನಿನನ್ವಯ ಗುರುತಿಸಿದೆ. ಅತ್ಯಧಿಕ ಮಾಲಿನ್ಯ ಮಾಡುವ ೧೨೦ ಕೈಗಾರಿಕೆಗಳನ್ನು ಗುರುತಿಸಿದೆ. ಅಪಾಯಕಾರಿ ತ್ಯಾಜ್ಯ (ನಿರ್ವಹಣೆ ಹಾಗೂ ನಿಭಾಯಿಸುವುದು) ನಿಯಮ ೧೯೮೯ರ ಅನ್ವಯ ೪೩೭ ಕೈಗಾರಿಕೆಗಳನ್ನು ಪಟ್ಟಿಮಾಡಿದೆ. ರಾಜ್ಯದಲ್ಲಿ ವಾರ್ಷಿಕ ಉತ್ಪಾದನೆಯಾಗುತ್ತಿರುವ ತ್ಯಾಜ್ಯದ ಪ್ರಮಾಣ ೩೩,೨೮೨ ಮೆಟ್ರಿಕ್ ಟನ್ನುಗಳು. ಪುನರ್‌ಚಕ್ರೀಯ ಮಾಡಬಲ್ಲ/ ಮರುಬಳಕೆ ಮಾಡಲು ಸಾಧ್ಯವಾಗುವ ತ್ಯಾಜ್ಯ ೧೩,೩೭೩ ಮೆಟ್ರಿಕ್ ಟನ್ನುಗಳು. ಸುಟ್ಟು ಭಸ್ಮ ಮಾಡುವಂತಹ ತ್ಯಾಜ್ಯ, ೩೧೨೮ ಮೆಟ್ರಿಕ್ ಟನ್ನು. ನೆಲದಲ್ಲಿ ಹೂಳುವ ತ್ಯಾಜ್ಯ ೧೬,೬೪೧ ಮೆಟ್ರಿಕ್ ಟನ್ನು. ೧೯೯೮–೯೯ರಲ್ಲಿ ೧೨೪ ಕೈಗಾರಿಕೆಗಳಿಗೆ ಪರಿಸರ ಅನುಮೋದನೆಯನ್ನು ನೀಡಲಾಗಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳು ರಾಷ್ಟ್ರೀಯ ನದಿ ನೀರಿನ ಸಂರಕ್ಷಣಾ ಯೋಜನೆಯಡಿ ಸುಮಾರು ೮೮೦ ಶೌಚಾಲಯ ಮತ್ತು ಏಳು ಚಿತಾಗಾರಗಳನ್ನು ನಿರ್ಮಿಸಿದೆ.

## ಲಾಲ್‌ಬಾಗಿನ ಭೂವೈಜ್ಞಾನಿಕ ಸ್ಮಾರಕ

ಭಾರತದ ಅತ್ಯಂತ ವಿರಳವಾದ ಭೂವೈಜ್ಞಾನಿಕ ಲಕ್ಷಣ, ರಚನೆಗಳನ್ನು ರಾಷ್ಟ್ರೀಯ ಸ್ಮಾರಕವೆಂದು ಪರಿಗಣಿಸಿ, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಸಂರಕ್ಷಿಸಿದೆ. ಇಂಥ ರಚನೆಗಳು ಭೂಮಿಯ ಗತಕಾಲದ ಚರಿತ್ರೆಯನ್ನು ಸ್ಪಷ್ಟವಾಗಿ ಅರಿಯಲು ನೆರವಾಗುತ್ತವೆ. ನಿಸರ್ಗದ ಅನೇಕ ವಿದ್ಯಮಾನಗಳನ್ನು ವೈಜ್ಞಾನಿಕವಾಗಿ ನೋಡಲು ಇಂಥ ಸ್ಮಾರಕಗಳು ನೆರವಾಗುತ್ತವೆ. ಕರ್ನಾಟಕದಲ್ಲಿ ಈವರೆಗೆ ನಾಲ್ಕು ಭೂವೈಜ್ಞಾನಿಕ ಸ್ಮಾರಕಗಳನ್ನು ಭಾರತೀಯ ಭೂವೈಜ್ಞಾನಿಕ ಸಂಸ್ಥೆ ಸಂರಕ್ಷಿಸಿದೆ. ಚಿತ್ರದುರ್ಗದ ಆಗ್ನೇಯಕ್ಕೆ ೧೬ ಕಿ.ಮೀ ದೂರದಲ್ಲಿರುವ ಮರಡಿಹಳ್ಳಿಗೆ ಹೊಂದಿಕೊಂಡಿರುವ ಗುಡ್ಡದಲ್ಲಿ ಮೈದಳೆದಿರುವ ದಿಂಬಿನಾಕಾರದ ಲಾವಾ ರಚನೆಗಳು–ಪಿಲ್ಲೋ ಲಾವಾ (Pillow lava), ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿರುವ ಅಗ್ನಿಶಿಲಾ ಛಿದ್ರಗಳು–ಪೈರೋಕ್ಲಾಸ್ಟಿಕ್ ರಾಕ್ಸ್(Pyroclastic), ಉಡುಪಿ ಜಿಲ್ಲೆಯ ಮಲ್ಪೆ ತೀರದಿಂದ ಮೂರು ಕಿ.ಮೀ. ದೂರದಲ್ಲಿ ಸಮುದ್ರದಲ್ಲಿರುವ ಕೋಕನಟ್ ಐಲೆಂಡ್ ಎಂಬ ಭಾಗದಲ್ಲಿ ರೂಪುಗೊಂಡಿರುವ ಸ್ತಂಭ ರೂಪದ ಬೆಸಾಲ್ಟ್ ಶಿಲೆಗಳು–ಕೊಲಮೆನಾರ್ ಬಸಾಲ್ಟ್ (Columnar basalt), ನಾಲ್ಕನೆಯ ವಿಶ್ವವಿಖ್ಯಾತವಾದ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಕೆಂಪೇಗೌಡ ಗೋಪುರವಿರುವ ಪೆನಿನ್ ಸುಲಾರ್ ನೈಸ್. ಈ ಪುಟ್ಟ ಗುಡ್ಡದ ಒಂದು ಬದಿ ದಕ್ಷಿಣಕ್ಕೆ ದೊಡ್ಡ ಕಲ್ಲುಗಣಿಗಳಿವೆ. ಈಗ ಗಣಿಕಾರ್ಯಾಚರಣೆಯನ್ನು ನಿಷೇಧಿಸಲಾಗಿದೆ. ಈ ಕಲ್ಲುಗಣಿಯಲ್ಲಿ ನೈಸ್ ಶಿಲೆಯ ಬೇರೆ ಬೇರೆ ಸ್ವರೂಪ, ಅವುಗಳ ಉಗಮ, ವಿಕಾಸ ಇವುಗಳನ್ನು ಕುರಿತು ಅಧ್ಯಯನ ಮಾಡಲು ದೇಶಾದ್ಯಂತ ಅನೇಕ ಭೂವಿಜ್ಞಾನಿಗಳು ಬರುತ್ತಾರೆ.

ಲಾಲ್ ಬಾಗಿನ ಪೆನಿನ್ ಸುಲಾರ್ ನೈಸ್ ಮೂಲತಃ ಸಂಮಿಶ್ರ ಶಿಲೆ, ಬೂದು, ಕಪ್ಪು, ಪಾಟಲ ಹಾಗೂ ಬಿಳಿಯ ಶಿಲೆಗಳ ಮಿಶ್ರಣ ಥಟ್ಟನೆ ಯಾರನ್ನಾದರೂ ಗಮನ ಸೆಳೆಯುತ್ತದೆ. ಬೂದು ಬಣ್ಣದ ಶಿಲೆ ಪದರ ಪದರವಾಗಿದೆ. ಈ ಕಾರಣದಿಂದಾಗಿಯೇ ಹಿಂದೆ ಈ ಕಲ್ಲು ಗಣಿಗಳಲ್ಲಿ ಸುಲಭವಾಗಿ ಬಂಡೆಗಳನ್ನು ಬಿಡಿಸುತ್ತಿದ್ದರು. ಬೆಂಕಿಯೊಡ್ಡಿ ಬಂಡೆಯನ್ನು ಎಬ್ಬಿಸುತ್ತಿದ್ದರು. ಈ ಶಿಲೆಯು ಕಪ್ಪು ಬಣ್ಣದ ಆಂಫಿಬೋಲೈಟ್ ಶಿಲೆಗಳ ವಿವಿಧ ಗಾತ್ರ, ಆಕಾರದ ಚೂರುಗಳನ್ನು ಅಂಟಿಸಿದೆಯೋ ಎಂಬಂತೆ ಕಾಣುತ್ತದೆ. ಈ ಶಿಲೆಯಲ್ಲಿ ಹಾರನ್ ಬ್ಲಂಡ್, ಫ್ಲೇಜಿಯೋಕ್ಲೇಸ್ ಫೆಲ್ಡ್ ಸ್ಪಾರ್ (Plagioclase Feldspar) ಮತ್ತು ಬೆಣಚು ಪ್ರಧಾನ ಖನಿಜಗಳಿವೆ.

ಶಾಖ ಮತ್ತು ಒತ್ತಡದಲ್ಲಿ ಮೂಲಶಿಲೆ ಪಾಕವಾಗಿ ಅದಕ್ಕೂ ಹಿಂದೆ ಇದ್ದ ಶಿಲೆಗಳನ್ನು ಭಾಗಶಃ ಜೀರ್ಣಿಸಿಕೊಂಡು ಅನಂತರ ಶಿಲೆ ಗಟ್ಟಿಗೊಂಡಿದೆ. ಇವುಗಳ ಉಗಮದ ನಂತರ ದಪ್ಪ ಹರಳಿನ ಪಾರ್ಫಿರಿಟಿಕ್ ಗ್ರಾನೈಟ್ (Porphyritic granite) ಶಿಲೆಗಳು ಇವುಗಳನ್ನು ತೂರಿದಂತೆ ರೂಪುಗೊಂಡಿವೆ. ಬೇರೆ ಬೇರೆ ಗಾತ್ರದ ಹರಳುಗಳು ಮಾತೃಶಿಲೆಯಲ್ಲಿ ಅಂಟಿದಂತೆ ಕಂಡುಬರುವುದರಿಂದ ಇಂಥ ರಚನೆಗಳಿಗೆ ಪಾರ್ಫಿರಿಟಿಕ್ ಎನ್ನುತ್ತಾರೆ. ಇವುಗಳ ನಂತರ ಅಡ್ಡ ಹಾಯ್ದಂತೆ ಕೆಲವೆಡೆ ಕಪ್ಪುಬಣ್ಣದ ಡೈಕ್ ಶಿಲೆಗಳಿವೆ. ಅನಂತರ ಶ್ವೇತ ವರ್ಣದ ಅತಿ ಕಿರಿಯ ಪ್ರಾಯದ ಪೆಗ್ಮಟೈಟ್ ಪಟ್ಟೆಗಳು ಮೂಡಿವೆ. ಲಾಲ್‌ಬಾಗಿನ ಪೆನಿನ್‌ಸುಲಾರ್ ಶಿಲೆಗಳ ಅಧ್ಯಯನ ಇಡೀ ದಕ್ಷಿಣಭಾರತದ ಭೂಚಿಪ್ಪಿನ ಬೆಳವಣಿಗೆಯನ್ನು ಗುರುತಿಸಲು ಆಧಾರ ಒದಗಿಸುತ್ತದೆ. ವಿಶ್ವವಿದ್ಯಾಲಯದ ಭೂವಿಜ್ಞಾನ ಸಂಶೋಧಕರು, ವಿಜ್ಞಾನಿಗಳು, ವಿದ್ಯಾರ್ಥಿಗಳು, ಭೂವಿಜ್ಞಾನ ಸಂಘ ಸಂಸ್ಥೆಗಳ ಪರಿಣತರು ಲಾಲ್ ಬಾಗಿನ ಪೆನಿನ್‌ಸುಲಾರ್ ನೈಸ್ ಕುರಿತಂತೆ ವ್ಯಾಪಕ ಅಧ್ಯಯನ ನಡೆಸುತ್ತ ಬಂದಿದ್ದಾರೆ. ಬೆಂಗಳೂರು ಭಾರತೀಯ ವಿಜ್ಞಾನ ಮಂದಿರದ ಪ್ರೊ. ವಿ.ಎಸ್. ವೆಂಕಟಸುಬ್ರಮಣಿಯನ್ ಎಂಬುವರು ಲಾಲ್‌ಬಾಗಿನ ನೈಸ್ ಶಿಲೆಗಳ ಪ್ರಾಯ ೨೯೦ರಿಂದ ೩೦೦ ಕೋಟಿ ವರ್ಷ, ಹಾಗೂ ೨೫೦ರಿಂದ ೨೬೦ಕೋಟಿ ವರ್ಷಗಳ ಎರಡು ವಯೋಮಾನವನ್ನು ತೋರಿಸುತ್ತವೆ ಎಂದು ವಿಕಿರಣಪಟು ವಯೋಮಾನ ನಿರ್ಧಾರದ ವಿಧಾನವನನ್ನನುಸರಿಸಿ ವರದಿ ಮಾಡಿದ್ದಾರೆ. ಭೂಚಿಪ್ಪು ರೂಪುಗೊಂಡನಂತರ ಅದು ಗಟ್ಟಿಯಾಗಿ ಸ್ಥಿರತೆಗಳಿಸುವಲ್ಲಿ ಆದ ಬದಲಾವಣೆಗಳನ್ನು ಗುರುತಿಸಲು ಈ ಅಧ್ಯಯನ ನೆರವಾಗುತ್ತದೆ. ಕರ್ನಾಟಕದ ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಭಾರತೀಯ ಭೂವೈಜ್ಞಾನಿಕ ಸರ್ವೇ ಸಂಸ್ಥೆ ಈ ನೈಸ್ ಶಿಲೆಯನ್ನು ೭.೦೩.೧೯೭೫ರಂದು ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕವೆಂದು ಘೋಷಿಸಿ ಅದನ್ನು ಸಂರಕ್ಷಿಸಿದೆ.

## ಕರ್ನಾಟಕದಲ್ಲಿ ಭೂಕಂಪನ ಚಟುವಟಿಕೆಗಳು

ಕರ್ನಾಟಕವು ಅತಿ ಕಡಿಮೆ ಭೂಕಂಪನಗಳು ಘಟಿಸುವ ವಲಯದಲ್ಲಿದೆ. ಲಭ್ಯವಿರುವ ದಾಖಲೆಗಳ ರೀತ್ಯ ಕೆಳಗಿನ ಪ್ರದೇಶಗಳು ಭೂಕಂಪನದಿಂದ ಬಾಧೆಗೊಳಗಾಗಿದೆ. ೧೮೪೩ರ ಏಪ್ರಿಲ್ ೧ರಂದು ಘಟಿಸಿದ ಬಳ್ಳಾರಿ ಭೂಕಂಪನ (ಪರಿಮಾಣ ೬,೦); ೧೯೦೦ರ ಫೆಬ್ರವರಿ ೮ರಲ್ಲಾದ ಕೊಯಮತ್ತೂರು ಭೂಕಂಪನ (ಪರಿಮಾಣ ೬.೩); ೧೯೯೩ರ ಸೆಪ್ಟೆಂಬರ್ ೨೯ರಲ್ಲಾದ ಲಾತೂರ್ ಭೂಕಂಪನ (ಪರಿಮಾಣ ೬.೩).

ಕರ್ನಾಟಕ ರಾಜ್ಯದಲ್ಲಿ ದಾಖಲಾದ ಅತಿ ಹೆಚ್ಚಿನ ತೀವ್ರತೆಯ ಭೂಕಂಪನ ಪುನರ್‌ವಿಮರ್ಶಿಸಿದ ಮರ್ಸಿಲಿ ಪಟ್ಟಿಯಲ್ಲಿ VII ಮತ್ತು VIII ಎಂದು ಅಂದಾಜು ಮಾಡಲಾಗಿದೆ. ಇದಲ್ಲದೆ ೧೯೭೫ರ ಮೇ ೧೨ರಂದು ಧಾರವಾಡದ ಬಳಿ ಘಟಿಸಿದ ಭೂಕಂಪನದ (ಪರಿಮಾಣ ೫.೦) ಅನುಭವ ಕರ್ನಾಟಕದ ಹೆಚ್ಚಿನ ಭಾಗದಲ್ಲಾಯಿತು. ೧೯೮೪ರ ಮಾರ್ಚ್೨೦ರಲ್ಲಾದ ಭೂಕಂಪನದ (ಪರಿಮಾಣ ೪.೫) ಅನುಭವ ಬೆಂಗಳೂರು ಮತ್ತು ಅಕ್ಕಪಕ್ಕದ ಪ್ರದೇಶಗಳಲ್ಲಾಯಿತು. ಇತ್ತೀಚೆಗೆ ೧೯೯೬ರ ಜನವರಿ ೯ರಂದು ರಿಕ್ಟರ್ ಪಟ್ಟಿಯಲ್ಲಿ ಕಡಿಮೆ ಪರಿಮಾಣದ (ಪರಿಮಾಣ ೫.೦) ಭೂಕಂಪನ ಧಾರವಾಡ ಜಿಲ್ಲೆಯಲ್ಲಾಯಿತು. ಇದರ

ಅನುಭವವೂ ರಾಜ್ಯದ ವ್ಯಾಪಕ ಪ್ರದೇಶದಲ್ಲಾಯಿತು. ಕರ್ನಾಟಕ ರಾಜ್ಯದಲ್ಲಿ ಅನುಭವಕ್ಕೆ ಬಂದಿರಬಹುದಾದ ಭೂಕಂಪನಗಳ ಪಟ್ಟಿಯನ್ನು ಮುಂದೆ ನೀಡಲಾಗಿದೆ. ಕರ್ನಾಟಕದಲ್ಲಿ ಆಗಿಂದಾಗ್ಗೆ ಒಟ್ಟಾಗಿ ಸಂಭವಿಸಿದ ಭೂಕಂಪನಗಳು ಅನುಭವಕ್ಕೆ ಬಂದಿವೆ (ರಿಕ್ಟರ್ ಮಾಪಕದಲ್ಲಿ ೨.೫ಕ್ಕೂ ಕಡಿಮೆ ಪರಿಮಾಣದ.) ೧೯೫೫ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ, ೧೯೫೬ರಲ್ಲಿ ಬೀದರ್ ಜಿಲ್ಲೆಯಲ್ಲಿ, ೧೯೬೫ರಲ್ಲಿ ಕೋಲಾರ ಜಿಲ್ಲೆಯಲ್ಲಿ, ೧೯೭೨ರಲ್ಲಿ ಮಂಡ್ಯ ಜಿಲ್ಲೆಯಲ್ಲಿ, ೧೯೮೦ರಲ್ಲಿ ಹೊಸಪೇಟೆ ತಾಲೂಕಿನಲ್ಲಿ ಇಂಥ ಸಮೂಹ ಕಂಪನಗಳ ಅನುಭವವಾಗಿದೆ.ಭಾರತೀಯ ಮಾನಕ ಸಂಸ್ಥೆಯ ನೇತೃತ್ವದಲ್ಲಿ ತಯಾರಿಸಿದ ಭಾರತದ ಭೂಕಂಪನಗಳ ವಲಯದ ನಕ್ಷೆಯಲ್ಲಿ, ಕರ್ನಾಟಕ ಪ್ರದೇಶವನ್ನು I, II, ಮತ್ತು III ರ ವಲಯದಲ್ಲಿ ತೋರಿಸಲಾಗಿದೆ. ಪುನರ್ವಿಮರ್ಶಿತ ಮರ್ಸಿಲಿ ಪಟ್ಟಿಯಲ್ಲಿ I, II, III, ಸ್ಥೂಲವಾಗಿ V, VI VII ರ ಗರಿಷ್ಠ ತೀವ್ರತೆಯನ್ನು ಸೂಚಿಸುತ್ತವೆ.

## ಬೆಂಗಳೂರಲ್ಲಿ ಭೂಕಂಪನಗಳು

ನೈಸರ್ಗಿಕ ವಿಕೋಪಗಳ ಪೈಕಿ ಭೂಕಂಪನ ಯಾವುದೇ ಒಂದು ಸ್ಥಳಕ್ಕೆ ಸೀಮಿತವಾಗಿರುವುದಿಲ್ಲ. ಅದರ ಹಾನಿಯ ಸ್ವರೂಪ, ಸ್ಥಳದಿಂದ, ಸ್ಥಳಕ್ಕೆ ವ್ಯತ್ಯಾಸವಾಗಬಹುದು. ಭೂಕಂಪನ ಅಲೆಗಳು ಶಕ್ತಿಯನ್ನು ಆಧರಿಸಿ ನೆಲದ ಗುಣವನ್ನು ಆಧರಿಸಿ ಪ್ರವಹಿಸುತ್ತವೆ. ಈ ಅರ್ಥದಲ್ಲಿ ಬೆಂಗಳೂರಿಗೇ ಸೀಮಿತವಾದಂತೆ ಭೂಕಂಪನಗಳು ದೊಡ್ಡ ಪ್ರಮಾಣದ ಹಾನಿ ಮಾಡಿಲ್ಲ. ದಕ್ಷಿಣಭಾರತ ಎಂದರೆ ವಿಂಧ್ಯಪರ್ವತದ ದಕ್ಷಿಣ ಭಾಗವೆಲ್ಲ ಸುರಕ್ಷ ಎಂಬ ಭಾವನೆ ವಿಜ್ಞಾನಿಗಳಲ್ಲೂ ಮೂಡಿತ್ತು. ಈಗ ಭೂಮಿಯ ಆಂತರ್ಯದಲ್ಲಿ ಇರುವ ದುರ್ಬಲ ರಚನೆಗಳು, ದಕ್ಷಿಣ ಭಾರತದ ಶಿಲೆಗಳ ವ್ಯಾಪಕ ಅಧ್ಯಯನಗಳಿಂದ ಪಡೆದ ಮಾಹಿತಿಯಂತೆ ಇಲ್ಲೂ ಭೂಕಂಪನಗಳು ಹಿಂದೆ ಘಟಿಸಿವೆ. ಆದರೆ ಗುಜರಾತ್, ಮಹಾರಾಷ್ಟ್ರಗಳಷ್ಟು, ತೀವ್ರವಾಗಿ ಬೆಂಗಳೂರು ನಗರ ಭೂಕಂಪನಕ್ಕೆ ತುತ್ತಾಗಿಲ್ಲ. ಇಲ್ಲಿ ಮುನ್ನೂರು ಕೋಟಿ ವರ್ಷಗಳಿಗೂ ಪುರಾತನವಾದ ಪೀಠ ಭೂಮಿಯ ಶಿಲೆಗಳಿವೆ. ಭಾರತದಲ್ಲಿ ಭೂಕಂಪನ ಮಾಪಕ ಕೇಂದ್ರ ಸ್ಥಾಪನೆಯಾಗಿದ್ದು ಕಲ್ಕತ್ತೆಯ ಆಲಿಪುರದಲ್ಲಿ–೧೮೯೮ರಲ್ಲಿ. ಅದಕ್ಕಿಂತ ಮೊದಲು ಇಲ್ಲಿನ ಭೂಕಂಪನಗಳು ದಾಖಲೆಯಾಗುತ್ತಿದ್ದುದು ಬೇರೆ ದೇಶಗಳಲ್ಲಿ ಸ್ಥಾಪಿಸಿದ ಭೂಕಂಪನ ಮಾಪಕ ಕೇಂದ್ರಗಳಲ್ಲಿ. ಗೌರಿಬಿದನೂರಿನಲ್ಲಿ ೧೯೬೫ರಲ್ಲಿ ಒಂದು ಅವಲೋಕನ ಕೇಂದ್ರ ಸ್ಥಾಪನೆಯಾಯಿತು.

ಓಲ್ಡ್ ಹ್ಯಾಂ ಎಂಬ ಭೂವಿಜ್ಞಾನಿ ಬೆಂಗಳೂರಿನಲ್ಲಿ ೧೨.೩.೧೮೯೮ರಲ್ಲಿ ಆದ ಭೂಕಂಪನ ಕುರಿತು ದಾಖಲೆ ಮಾಡಿದ್ದಾನೆ. ಆದರೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ೨೦.೩.೧೯೮೪ರಲ್ಲಿ ಬೆಂಗಳೂರಿನ ನಾಗರಿಕರಿಗೆ ಅನುಭವಕ್ಕೆ ಬರುವಷ್ಟು ಭೂಕಂಪನ ಘಟಿಸಿತು. ಇದರ ಕೇಂದ್ರಬಿಂದು ಕೂಡ ಬೆಂಗಳೂರಿನ ಹೊರವಲಯದಲ್ಲಿತ್ತು. ಬೆಂಗಳೂರಿನ ನಾಗರಿಕರಿಗೆ ತೀವ್ರವಾಗಿ ಭೂಕಂಪನದ ಅನುಭವವಾದದ್ದು ಗುಜರಾತಿನ ಭುಜ್ ಭೂಕಂಪನದ (ಜನವರಿ ೨೬, ೨೦೦೧) ನಂತರ. ಜನವರಿ, ೨೯ರ ಬೆಳಿಗ್ಗೆ ೮.೦೮ರ ಸಮಯದಲ್ಲಿ ಎರಡು ಮೂರು ಸೆಕೆಂಡಿಗಿಂತ ಇದು ಹೆಚ್ಚಿಗೆ ಇರಲಿಲ್ಲ. ಭೂಮಿ ಗುಡುಗಿದ ಶಬ್ದ, ಜೊತೆಗೆ ಕುರ್ಚಿ ಮುಂತಾದ ಪೀಠೋಪಕರಣಗಳು ಅಲುಗಿದ್ದೂ ಸಾರ್ವಜನಿಕರ ಗಮನಕ್ಕೆ ಬಂತು. ದಕ್ಷಿಣ ಭಾರತದ ನೆಲದಡಿಯಲ್ಲೂ ಅನೇಕ ಸೀಳುಗಳಿವೆಯೆಂದು ಅಧ್ಯಯನಗಳು ದೃಢಪಡಿಸಿವೆ. ಆ ಭಾಗದಲ್ಲಿ ಸ್ವಲ್ಪ ಚಲನೆಯಾದರೂ ಭೂಕಂಪನಗಳೂ ಉಂಟಾಗುತ್ತವೆ. ಇಂಥ ಚಲನೆಗಳು ಹೇಗಾಗುತ್ತವೆ, ಏಕಾಗುತ್ತವೆ ಎಂಬುದರ ಪೂರ್ಣ ಚಿತ್ರಣ ನಮಗೆ ದೊರೆಯುವುದು ಇಡೀ ಭೂಚಿಪ್ಪು ಹೇಗೆ ಛಿದ್ರವಾಗಿದೆ, ಭೂ ಫಲಕಗಳು (PLATES) ಯಾವ ಬಗೆಯಲ್ಲಿ, ದಿಶೆಯಲ್ಲಿ, ಯಾವ ಪ್ರಮಾಣದಲ್ಲಿ ಚಲಿಸುತ್ತಿವೆ ಎಂಬ ಸ್ಥೂಲ ಅಧ್ಯಯನದಿಂದ ಮಾತ್ರ. ಬೆಂಗಳೂರಿನಲ್ಲಿ ಫಲಿಸಿದ ಎಲ್ಲ ಭೂಕಂಪನಗಳನ್ನೂ ಗೌರಿಬಿದನೂರು ಭೂಕಂಪನ ಕೇಂದ್ರ ದಾಖಲೆಮಾಡಿದೆ.

ಭಾರತೀಯ ಪವನ ವಿಜ್ಞಾನ ಇಲಾಖೆ ತಯಾರಿಸಿದ ಭೂಕಂಪನ ಪಟ್ಟಿ. ಇದರಲ್ಲಿ ೧೧.೫ ರಿಂದ ೧೮.೫೦ ಡಿಗ್ರಿ ಉತ್ತರ ಅಕ್ಷಾಂಶ ಮತ್ತು ೭೪.೦೦ಯಿಂದ ೭೮.೦೦ ಡಿಗ್ರಿ ಪೂರ್ವ ರೇಖಾಂಶದೊಳಗಿನ ಪ್ರದೇಶ ಒಳಗೊಳ್ಳುತ್ತದೆ. (ಅವಧಿ : ೧೮೪೩ ರಿಂದ ೧೯೯೭)

| ದಿನಾಂಕ | 0–ಕಾಲಮಾನ | ಅಕ್ಷಾಂಶ | ರೇಖಾಂಶ | ಆಳ | ಪರಿಮಾಣ |
|---|---|---|---|---|---|
| ೧೮೪೩–೪–೧ | ೦೦೦.೦ | ೧೫.೦೦ | ೭೬.೦೦ | ೦.೦೦ | ೬.೦ |
| ೧೯೧೬–೧–೭ | ೦೦೦.೦ | ೧೩.೦೦ | ೭೭.೦೦ | ೦.೦೦ | ೫.೦ |
| ೧೯೮೪–೩–೨೦ | ೧೦೪೫೨೯.೫ | ೧೨.೮೨ | ೭೭.೪೩ | ೨೧.೦೦ | ೪.೫ |
| ೧೯೮೫–೫–೨೭ | ೬೫೭೧೨.೦ | ೧೭.೨೦ | ೭೪.೦೦ | ೩೩.೦೦ | ೦.೦ |
| ೧೯೮೫–೧೨–೧೫ | ೧೩೧೦೫೨.೦ | ೧೭.೩೬ | ೭೪.೦೦ | ೩೯.೦೦ | ೦.೦ |
| ೧೯೮೭–೨–೨ | ೯೧೮೩೮.೦ | ೧೭.೩೦ | ೭೪.೧೦ | ೧೦.೦೦ | ೦.೦ |
| ೧೯೮೮–೯–೧೧ | ೨೦೩೯೧೪.೦ | ೧೭.೨೩ | ೭೪.೦೦ | ೩೭.೦೦ | ೪.೩ |
| ೧೯೯೨–೧೦–೧೮ | ೧೭೩೩೩.೨ | ೧೮.೧೦ | ೭೬.೯೦ | ೩೩.೦೦ | ೪.೪ |
| ೧೯೯೨–೧೧–೨ | ೦೭೦.೨ | ೧೮.೨೦ | ೭೬.೬೦ | ೩೩.೦೦ | ೩.೯ |
| ೧೯೯೩–೯–೨೯ | ೨೨೨೫೪೭.೫ | ೧೮.೦೭ | ೭೬.೬೨ | ೧೨.೦೦ | ೬.೩ |
| ೧೯೯೩–೯–೨೯ | ೨೩೧೦೫೭.೫ | ೧೮.೦೦ | ೭೬.೪೦ | ೧೦.೦೦ | ೫.೦ |
| ೧೯೯೩–೯–೩೦ | ೦೫೩೧೩.೦ | ೧೮.೦೦ | ೭೬.೫೦ | ೧೨.೦೦ | ೪.೭ |
| ೧೯೯೩–೯–೩೦ | ೨೧೬೫೬.೩ | ೧೮.೧೦ | ೭೬.೬೦ | ೧೨.೦೦ | ೪.೫ |
| ೧೯೯೩–೯–೩೦ | ೩೩೧೪೬.೦ | ೧೮.೨೦ | ೭೬.೬೦ | ೧೨.೦೦ | ೩.೮ |
| ೧೯೯೩–೧೦–೧ | ೧೭೧೧೬.೮ | ೧೭.೯೦ | ೭೬.೬೦ | ೧೨.೦೦ | ೪.೪ |
| ೧೯೯೩–೧೦–೨ | ೨೩೧೫೩೦.೫ | ೧೭.೯೦ | ೭೬.೬೦ | ೧೨.೦೦ | ೩.೬ |
| ೧೯೯೩–೧೦–೪ | ೨೧೧೯೩೪.೮ | ೧೮.೦೦ | ೭೬.೬೦ | ೧೨.೦೦ | ೩.೯ |
| ೧೯೯೩–೧೦–೮ | ೨೦೪೫.೭೩ | ೧೮.೦೦ | ೭೬.೭೦ | ೩೩.೦೦ | ೪.೬ |
| ೧೯೯೩–೧೦–೧೬ | ೮೫೮೧೧.೬ | ೧೮.೦೦ | ೭೬.೫೦ | ೧೫.೦೦ | ೩.೩ |
| ೧೯೯೩–೧೦–೧೭ | ೦.೭೧೨.೩ | ೧೭.೯೦ | ೭೭.೨೦ | ೧.೦೦ | ೩.೮ |
| ೧೯೯೩–೧೦–೧೮ | ೧೮೯೩೯.೯ | ೧೭.೯೦ | ೭೬.೬೦ | ೨.೦೦ | ೩.೫ |
| ೧೯೯೩–೧೦–೨೮ | ೧೯೨೧೧೭.೪ | ೧೮.೦೦ | ೭೬.೫೦ | ೧.೦೦ | ೩.೨ |
| ೧೯೯೩–೧೧–೧ | ೬೨೮೪೪.೩ | ೧೮.೦೦ | ೭೬.೮೦ | ೨೧.೦೦ | ೩.೪ |
| ೧೯೯೩–೧೧–೧೨ | ೧೩೨೭೩೧.೦ | ೧೮.೦೦ | ೭೬.೬೦ | ೩.೦೦ | ೫.೦ |
| ೧೯೯೩–೧೧–೧೩ | ೪೨೧೨.೨ | ೧೮.೧೦ | ೭೬.೬೦ | ೪.೦೦ | ೩.೪ |
| ೧೯೯೩–೧೧–೧೮ | ೧೪೧೩೧.೬ | ೧೮.೩೦ | ೭೬.೮೦ | ೩೩.೦೦ | ೦.೦ |
| ೧೯೯೩–೧೧–೨೪ | ೧೪೪೪೬೧.೬ | ೧೮.೦೦ | ೭೬.೬೦ | ೧.೦೦ | ೪.೪ |
| ೧೯೯೫–೧೨–೨೧ | ೬೩೧೫೩.೦ | ೧೮.೦೦ | ೭೬.೫೦ | ೩೩.೦೦ | ೧.೨ |
| ೧೯೯೩–೧–೫ | ೧೧೮೪೫.೦ | ೧೬.೩೦ | ೭೪.೩೦ | ೩೩.೦೦ | ೦.೦ |
| ೧೯೯೬–೧–೯ | ೨೪೫೧೫.೦ | ೧೫.೨೦ | ೭೫.೪೦ | ೩೩.೦೦ | ೪.೫ |
| ೧೯೯೬–೧ | ೧೩೨೩೪೫.೫ | ೧೮.೧೦ | ೭೬.೫೦ | ೩೩.೦೦ | ೨.೫ |
| ೧೯೯೬–೯–೨ | ೧೯೫೩೩೬.೦ | ೧೮.೧೦ | ೭೬.೬೦ | ೦.೦೦ | ೩.೦ |
| ೧೯೯೬–೧೧–೧೦ | ೯೦೪.೧ | ೧೮.೩೦ | ೭೬.೬೯ | ೩೩.೦೦ | ೪.೧ |
| ೧೯೯೭–೧–೨೩ | ೨೩೪೪೬.೦ | ೧೭.೪೪ | ೭೬.೦೬ | ೩೩.೦೦ | ೦.೦ |
| ೧೯೯೭–೨–೨೧ | ೯೩೭೩೯.೦ | ೧೮.೦೦ | ೬.೬೦ | ೦.೦೦ | ೩.೨ |

ಒಟ್ಟು ಭೂಕಂಪನಗಳ ಸಂಖ್ಯೆ : ೩೫

## ರಾಜ್ಯದ ಜಿಲ್ಲಾವಾರು ವಿಸ್ತೀರ್ಣ, ಜನಸಂಖ್ಯೆ ಮತ್ತು ಆಡಳಿತ ವಿಭಾಗಗಳ ವಿವರ

| ಜಿಲ್ಲೆ | ವಿಸ್ತೀರ್ಣ (ಚ.ಕಿ.ಮೀ) | ರಾಜ್ಯದ ಶೇಕಡಾವಾರು | ಜನಸಂಖ್ಯೆ (೨೦೧೧) | ರಾಜ್ಯದ ಶೇಕಡಾವಾರು | ಜನಸಾಂದ್ರತೆ (೨೦೧೧) | ತಾಲೂಕುಗಳ ಸಂಖ್ಯೆ | ಹೋಬಳಿಗಳ ಸಂಖ್ಯೆ |
|---|---|---|---|---|---|---|---|
| ಬೆಂಗಳೂರು | ೨೧೯೦ | ೧.೧೪ | ೯೫೮೮೯೧೦ | ೧೫.೬೯ | ೪೩೭೮ | ೪ | ೧೭ |
| ಬೆಂಗಳೂರು (ಗ್ರಾ) | ೨೨೫೯ | ೧.೧೮ | ೯೮೭೨೫೭ | ೧.೬೧ | ೪೪೧ | ೪ | ೧೭ |
| ರಾಮನಗರ | ೩೫೫೬ | ೧.೮೫ | ೧೦೮೨೭೩೯ | ೧.೭೭ | ೩೦೩ | ೪ | ೧೮ |
| ಚಿತ್ರದುರ್ಗ | ೮೪೪೦ | ೪.೪೦ | ೧೬೬೦೩೭೮ | ೨.೭೨ | ೧೯೭ | ೬ | ೨೨ |
| ದಾವಣಗೆರೆ | ೫೯೨೪ | ೩.೦೯ | ೧೯೪೬೯೦೫ | ೩.೧೮ | ೩೨೯ | ೬ | ೨೪ |
| ಕೋಲಾರ | ೩೯೬೯ | ೨.೦೭ | ೧೫೪೦೨೩೧ | ೨.೫೨ | ೩೮೪ | ೫ | ೨೭ |
| ಚಿಕ್ಕಬಳ್ಳಾಪುರ | ೪೨೫೪ | ೨.೨೨ | ೧೨೫೪೩೭೭ | ೨.೦೫ | ೨೯೮ | ೬ | ೨೬ |
| ಶಿವಮೊಗ್ಗ | ೮೪೭೭ | ೪.೪೨ | ೧೭೫೫೫೧೨ | ೨.೮೭ | ೨೦೭ | ೭ | ೪೦ |
| ತುಮಕೂರು | ೧೦೫೯೭ | ೫.೫೩ | ೨೬೮೧೪೪೯ | ೪.೩೯ | ೨೫೩ | ೧೦ | ೫೦ |
| ಚಿಕ್ಕಮಗಳೂರು | ೭೨೦೧ | ೩.೭೫ | ೧೧೩೭೭೫೩ | ೧.೮೬ | ೧೫೮ | ೭ | ೩೪ |
| ದಕ್ಷಿಣ ಕನ್ನಡ | ೪೫೬೦ | ೨.೩೮ | ೨೦೮೩೬೨೫ | ೩.೪೧ | ೪೫೭ | ೫ | ೧೭ |
| ಉಡುಪಿ | ೩೮೮೦ | ೨.೦೨ | ೧೧೭೭೯೦೮ | ೧.೯೩ | ೩೦೪ | ೩ | ೯ |
| ಹಾಸನ | ೬೮೧೪ | ೩.೫೫ | ೧೭೭೬೨೨೧ | ೨.೯೧ | ೨೬೧ | ೮ | ೩೮ |
| ಕೊಡಗು | ೪೧೦೨ | ೨.೧೪ | ೫೫೪೭೬೨ | ೦.೯೧ | ೧೩೫ | ೩ | ೧೬ |
| ಮಂಡ್ಯ | ೪೯೬೧ | ೨.೫೯ | ೧೮೦೮೬೮೦ | ೨.೯೬ | ೩೬೫ | ೭ | ೩೧ |
| ಮೈಸೂರು | ೬೮೫೪ | ೩.೫೭ | ೨೯೯೪೭೪೪ | ೪.೯೦ | ೪೩೭ | ೭ | ೩೩ |
| ಚಾಮರಾಜನಗರ | ೫೧೦೧ | ೨.೬೬ | ೧೦೨೦೯೬೨ | ೧.೬೭ | ೨೦೦ | ೪ | ೧೬ |
| ಬೆಳಗಾಂ | ೧೩೪೧೫ | ೬.೯೯ | ೪೭೭೮೪೩೯ | ೭.೮೨ | ೩೫೬ | ೧೦ | ೩೫ |
| ಬಿಜಾಪುರ | ೧೦೪೯೪ | ೫.೪೭ | ೨೧೭೫೧೦೨ | ೩.೫೬ | ೨೦೭ | ೫ | ೧೮ |
| ಬಾಗಲಕೋಟೆ | ೬೫೭೫ | ೩.೪೩ | ೧೮೯೦೮೨೬ | ೩.೦೯ | ೨೮೮ | ೬ | ೧೮ |
| ಧಾರವಾಡ | ೪೨೬೦ | ೨.೨೨ | ೧೮೪೬೯೯೩ | ೩.೦೨ | ೪೩೪ | ೫ | ೧೪ |
| ಗದಗ | ೪೬೫೬ | ೨.೪೩ | ೧೦೬೫೨೩೫ | ೧.೭೪ | ೨೨೯ | ೫ | ೧೧ |
| ಹಾವೇರಿ | ೪೮೨೩ | ೨.೫೧ | ೧೫೯೮೫೦೬ | ೨.೬೧ | ೩೩೧ | ೭ | ೧೯ |
| ಉತ್ತರಕನ್ನಡ | ೧೦೨೯೧ | ೫.೩೭ | ೧೪೩೬೮೪೭ | ೨.೩೫ | ೧೪೦ | ೧೧ | ೩೫ |
| ಬಳ್ಳಾರಿ | ೮೪೫೦ | ೪.೪೧ | ೨೫೩೨೩೮೩ | ೪.೧೪ | ೩೦೦ | ೭ | ೨೭ |
| ಬೀದರ್ | ೫೪೪೮ | ೨.೮೪ | ೧೭೦೦೦೧೮ | ೨.೭೮ | ೩೧೨ | ೫ | ೩೦ |
| ಗುಲ್ಬರ್ಗ | ೧೦೯೯೦ | ೫.೭೩ | ೨೫೬೪೮೯೨ | ೪.೨೦ | ೨೩೩ | ೭ | ೩೨ |
| ರಾಯಚೂರು | ೬೮೨೭ | ೩.೫೬ | ೧೯೨೪೭೭೩ | ೩.೧೫ | ೨೨೮ | ೫ | ೩೭ |
| ಕೊಪ್ಪಳ | ೭೧೮೯ | ೩.೭೫ | ೧೩೯೧೨೯೨ | ೨.೨೮ | ೨೫೦ | ೪ | ೨೦ |
| ಯಾದಗಿರಿ | ೫೨೩೪ | ೨.೭೩ | ೧೧೭೨೯೮೫ | ೧.೯೨ | ೨೨೪ | ೩ | ೧೬ |
| ರಾಜ್ಯ | ೧೯೧೭೯೧ | ೧೦೦ | ೬೧೧೩೦೭೦೪ | ೧೦೦ | ೩೧೯ | ೧೭೬ | ೭೪೭ |

## ರಾಜ್ಯದ ಜಿಲ್ಲಾವಾರು ವಿಸ್ತೀರ್ಣ, ಜನಸಂಖ್ಯೆ ಮತ್ತು ಆಡಳಿತ ವಿಭಾಗಗಳ ವಿವರ

| ಜಿಲ್ಲೆ | ಗ್ರಾಮ ಪಂಚಾಯತಿಗಳ ಸಂಖ್ಯೆ ೨೦೦೭–೦೮ | ಪಟ್ಟಣ/ನಗರ ಸಮುದಾಯಗಳು | ನಗರಸಭೆ/ ನಗರಪಾಲಿಕೆ/ ಮಹಾನಗರ ಪಾಲಿಕೆಗಳು | ಜನವಸತಿ ಇರುವ ಗ್ರಾಮಗಳು ೨೦೧೧ | ಜನವಸತಿ ಇಲ್ಲದಿರುವ ಗ್ರಾಮಗಳು ೨೦೧೧ | ಲಿಂಗ ಪ್ರಮಾಣ ೨೦೧೧ | ಜನಸಂಖ್ಯಾ ಬೆಳವಣಿಗೆ ದರ ೨೦೦೧–೧೧ |
|---|---|---|---|---|---|---|---|
| ಬೆಂಗಳೂರು | ೮೬ | ೧೯ | ೨ | ೬೬೮ | ೩೧ | ೯೦೮ | ೩೬.೮೬ |
| ಬೆಂಗಳೂರು (ಗ್ರಾ) | ೯೮ | ೬ | ೫ | ೯೪೯ | ೧೦೧ | ೯೪೫ | ೧.೬೫ |
| ರಾಮನಗರ | ೧೩೦ | ೪ | ೪ | ೭೭೦ | ೫೩ | ೯೭೬ | ೦.೬೩ |
| ಚಿತ್ರದುರ್ಗ | ೧೮೫ | ೬ | ೬ | ೯೪೬ | ೧೧೩ | ೯೬೯ | ೧.೭೨ |
| ದಾವಣಗೆರೆ | ೨೩೦ | ೬ | ೬ | ೮೧೦ | ೧೧೩ | ೯೬೭ | ೧.೮೮ |
| ಕೋಲಾರ | ೧೫೬ | ೬ | ೬ | ೧೫೯೮ | ೧೯೯ | ೯೭೬ | ೧.೮೫ |
| ಚಿಕ್ಕಬಳ್ಳಾಪುರ | ೧೫೧ | ೬ | ೬ | ೧೩೨೧ | ೧೯೩ | ೯೬೮ | ೧.೨೭ |
| ಶಿವಮೊಗ್ಗ | ೨೬೦ | ೯ | ೯ | ೧೪೪೩ | ೮೭ | ೯೫೫ | ೧.೩೬ |
| ತುಮಕೂರು | ೩೨೧ | ೧೧ | ೧೦ | ೨೫೭೪ | ೧೩೪ | ೯೭೯ | ೧.೧೭ |
| ಚಿಕ್ಕಮಗಳೂರು | ೨೨೬ | ೯ | ೯ | ೧೦೩೪ | ೮೩ | ೧೦೦೫ | –೦.೦೪ |
| ದಕ್ಷಿಣ ಕನ್ನಡ | ೨೦೩ | ೨೦ | ೮ | ೩೫೪ | – | ೧೦೧೮ | ೨.೨೫ |
| ಉಡುಪಿ | ೧೪೬ | ೬ | ೪ | ೨೪೮ | – | ೧೦೯೩ | ೦.೭೯ |
| ಹಾಸನ | ೨೫೮ | ೯ | ೮ | ೨೫೯೪ | ೧೬೫ | ೧೦೦೫ | ೦.೬೬ |
| ಕೊಡಗು | ೯೮ | ೫ | ೪ | ೨೯೧ | ೫ | ೧೦೧೯ | ೦.೦೭ |
| ಮಂಡ್ಯ | ೨೩೨ | ೮ | ೭ | ೧೩೬೯ | ೧೧೦ | ೯೮೯ | ೦.೫೪ |
| ಮೈಸೂರು | ೨೩೫ | ೧೧ | ೧೦ | ೧೨೧೬ | ೧೨೪ | ೯೮೨ | ೪.೨೭ |
| ಚಾಮರಾಜನಗರ | ೧೨೦ | ೪ | ೫ | ೪೨೪ | ೮೫ | ೯೮೯ | ೦.೬೭ |
| ಬೆಳಗಾಂ | ೪೮೫ | ೨೨ | ೧೭ | ೧೨೫೫ | ೧೫ | ೯೬೯ | ೬.೮೧ |
| ಬಿಜಾಪುರ | ೧೯೯ | ೬ | ೬ | ೬೬೦ | ೧೭ | ೯೫೪ | ೪.೪೫ |
| ಬಾಗಲಕೋಟೆ | ೧೬೧ | ೧೨ | ೧೧ | ೬೨೩ | ೪ | ೯೮೪ | ೨.೮೯ |
| ಧಾರವಾಡ | ೧೨೭ | ೬ | ೬ | ೩೬೧ | ೧೮ | ೯೬೭ | ೨.೯೩ |
| ಗದಗ | ೧೦೬ | ೯ | ೯ | ೩೨೯ | ೮ | ೯೭೮ | ೧.೧೩ |
| ಹಾವೇರಿ | ೨೦೮ | ೯ | ೮ | ೬೯೧ | ೭ | ೯೫೧ | ೧.೯೨ |
| ಉತ್ತರಕನ್ನಡ | ೨೦೭ | ೧೩ | ೧೧ | ೧೨೪೬ | ೪೩ | ೯೭೫ | ೧ |
| ಬಳ್ಳಾರಿ | ೧೮೯ | ೧೧ | ೧೦ | ೫೨೪ | ೩೦ | ೯೭೮ | ೬.೧ |
| ಬೀದರ್ | ೧೭೫ | ೬ | ೬ | ೫೯೯ | ೨೨ | ೯೫೨ | ೨.೩೯ |
| ಗುಲ್ಬರ್ಗ | ೨೨೦ | ೧೭ | ೧೧ | ೮೭೩ | ೪೫ | ೯೬೨ | ೪.೭೧ |
| ರಾಯಚೂರು | ೧೬೪ | ೯ | ೭ | ೮೩೦ | ೫೩ | ೯೯೨ | ೩.೦೮ |
| ಕೊಪ್ಪಳ | ೧೩೪ | ೫ | ೪ | ೫೯೪ | ೩೫ | ೯೮೩ | ೨.೩೬ |
| ಯಾದಗಿರಿ | ೧೧೭ | – | ೪ | ೪೮೭ | ೩೨ | ೯೮೪ | ೨.೬೨ |
| ರಾಜ್ಯ | ೫೬೨೭ | ೨೭೦ | ೨೧೯ | ೨೭೪೮೧ | ೧೯೨೫ | ೯೬೮ | ೧೦೦ |

## ಕರ್ನಾಟಕ ಜೀವವೈವಿಧ್ಯ ಮಂಡಳಿ

ಜೀವವೈವಿಧ್ಯ ಅಧಿನಿಯಮ ೨೦೦೨ರ ಕಲಂ೨೨ರ ಪ್ರಕಾರ ಕರ್ನಾಟಕ ಜೀವವೈವಿಧ್ಯಮಂಡಳಿಯು ದಿನಾಂಕ.೧೧.೦೮.೨೦೦೩ ರಂದು ಸ್ಥಾಪಿಸಲ್ಪಟ್ಟಿತು. ಜೀವ ವೈವಿಧ್ಯ ಮಂಡಳಿಯ ಮುಖ್ಯ ಉದ್ದೇಶ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಜೈವಿಕ ವೈವಿಧ್ಯಕ್ಕೆ ಸಂಬಂಧಿಸಿದಂತೆ ಜಾಗೃತಿಯನ್ನು ಹೆಚ್ಚಿಸುವುದಕ್ಕೆ ಸಂಶೋಧನೆ, ತರಬೇತಿ ಮತ್ತು ಸಾರ್ವಜನಿಕ ಶಿಕ್ಷಣಕ್ಕೆ ಪ್ರೋತ್ಸಾಹ ಕ್ರಮಗಳನ್ನು ತೆಗೆದುಕೊಳ್ಳುವುದು. ಜೈವಿಕ ಸಂಪನ್ಮೂಲಗಳ ಸುಸ್ಥಿರಬಳಕೆಗಾಗಿ ಯೋಜನೆಗಳು. ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು. ರಾಷ್ಟ್ರೀಯ ಜೀವ ವೈವಿಧ್ಯ ಕಾಯ್ದೆ ೨೦೦೨ ರನ್ನು ಅನುಷ್ಠಾನಗೊಳಿಸುವಲ್ಲಿನ ಸಮಗ್ರಸಾಧನೆಗಾಗಿ ಕರ್ನಾಟಕ ಜೀವಮಂಡಳಿಗೆ ೨೦೦೯-೧೦ನೇಸಾಲಿನ "ಭಾರತದ ಅತ್ಯುತ್ತಮ ಜೀವ ವೈವಿಧ್ಯ ಮಂಡಳಿ" ಎಂಬ ಪ್ರಶಸ್ತಿಯನ್ನು ರಾಷ್ಟ್ರೀಯ ಜೀವವೈವಿಧ್ಯಪ್ರಾಧಿಕಾರ ಮತ್ತು ಭಾರತ ಸರ್ಕಾರ ಪ್ರದಾನಮಾಡಿರುತ್ತದೆ.

## ಪಾರಂಪರಿಕ ತಾಣಗಳ ಘೋಷಣೆ

ಜೀವವೈವಿಧ್ಯಕಾಯ್ದೆ೨೦೦೨ರಕಲಂ೩೭(೧)ರಂತೆ ಕೆಳಗಿನ ತಾಣಗಳನ್ನು ಪಾರಂಪರಿಕ ತಾಣಗಳೆಂದು ಘೋಷಿಸಲಾಗಿದೆ.

## ಪಾರಂಪರಿಕ ತಾಣಗಳ ವೈಶಿಷ್ಟ್ಯ

**ಅ.ನಲ್ಲೂರು**: ನಲ್ಲೂರಿನಲ್ಲಿರುವ ಹುಣಸೆತೋಪು ಹಲವಾರು ಶತಮಾನಗಳಿಂದ ಪ್ರಕೃತಿ ವೈಪರೀತ್ಯಗಳನ್ನು ತಡೆದು ಜೀವಂತ ಪಳೆಯುಳಿಕೆಗಳಾಗಿ ನಿಂತಿದೆ. ಈ ಹುಣಸೆ ಮರಗಳಲ್ಲಿ ಎಲ್ಲೂ ಕಂಡುಬಾರದ ಹಾಗೂ ದಾಖಲಾಗದ ವೈಶಿಷ್ಟ್ಯಗಳನ್ನು ಕಾಣಬಹುದು, ಅವುಗಳೆಂದರೆ-ಬಿಳಲು (ಪ್ರಾಪ್‌ರೂಟ್ಸ್) ಮತ್ತು ಬೇರುಗಳಿಂದ ಬೆಳೆದ ಮರಗಳು. ಈ ತೋಪು ವಿವಿಧ ಸಸ್ಯ, ಪ್ರಾಣಿ ಮತ್ತು ಪಕ್ಷಿಗಳು ಇರುವ ನೆಲೆಯೂ ಕೂಡ ಆಗಿದೆ.

### ಪಾರಂಪರಿಕ ತಾಣಗಳ ಘೋಷಣೆ

| ಕ್ರ.ಸಂ | ಸ್ಥಳ | ತಾಲ್ಲೂಕು | ಜಿಲ್ಲೆ | ವಿಸ್ತೀರ್ಣ | ಗ್ರಾಮಪಂಚಾಯತಿ |
|---|---|---|---|---|---|
| ೧ | ನಲ್ಲೂರು | ದೇವನಹಳ್ಳಿ | ಬೆಂಗಳೂರು(ಗ್ರಾ) | ೫೩ಎಕರೆ | ನಲ್ಲೂರು |
| ೨ | ಹೊಗ್ರೆಕಾನ್ | ಕಡೂರು | ಚಿಕ್ಕಮಗಳೂರು | ೨೫೦೮.೧೫ಎಕರೆ | ಬಳ್ಳಿಗನೂರು |
| ೩ | ಜಿ.ಕೆ.ವಿಕೆ.ಕ್ಯಾಂಪಸ್ ಯು.ಎ.ಎಸ್, ಬೆಂಗಳೂರು | ಬೆಂಗಳೂರು(ನ) | ೧೬೭ಹೆ. | ಬೆಂಗಳೂರು | |
| ೪ | ಅಂಬಾರಗುಡ್ಡ | ಸಾಗರ | ಶಿವಮೊಗ್ಗ | ೩೮೫೭.೧೨ಎಕರೆ | ಶಂಕಣ್ಣಶಾನಬಾಗ್ |
| ಕೆಳಗಿನಸ್ಥಳಗಳನ್ನುಪಾರಂಪರಿಕತಾಣಗಳೆಂದುಘೋಷಿಸಲುಕ್ರಮಕೈಗೊಳ್ಳಲಾಗುತ್ತಿದೆ. | | | | | |
| ೧ | ನೇತ್ರಾಣಿನಡುಗುಡ್ಡೆ | ಭಟ್ಕಳ | ಉತ್ತರಕನ್ನಡ | ೫೦ಎಕರೆ | ಮಾವಳ್ಳಿ |
| ೨ | ವರದಾನದಿತೀರದಸುತ್ತಮುತ್ತಲಿನಕೆಲವುಹಳ್ಳಗಳನ್ನುಕೃಷಿಜೀವವೈವಿಧ್ಯಪಾರಂಪರಿಕತಾಣವೆಂದು ಘೋಷಿಸಲುಕರ್ನಾಟಕಜೀವವೈವಿಧ್ಯಮಂಡಳಿಯುಕ್ರಮಕೈಗೊಳ್ಳುತ್ತಿದೆ. | | | | |

**ಆ.ಹೊಗ್ರಕಾನ್:** ಈ ಪ್ರದೇಶವು ಬಾಬಬುಡನ್ ಗಿರಿ ಮತ್ತು ಕೆಮ್ಮಣ್ಣುಗುಂಡಿ ಪ್ರದೇಶಗಳನ್ನು ಕೂಡಿಸುವ ಕೊಂಡಿಯಂತಿದೆ. ಭದ್ರಾ ಅಭಯಾರಣ್ಯ ಮತ್ತು ಎಮ್ಮೆದೊಡ್ಡಿ ಹುಲಿ ಸಂರಕ್ಷಣ ತಾಣಗಳಿಗೆ ಹೊಂದಿ ಕೊಂಡಂತಿದೆ. 'ಶೋಲಾ' ಅರಣ್ಯ ಮತ್ತು ಹುಲ್ಲುಗಾವಲುಗಳು ಈ ಪ್ರದೇಶದ ವೈಶಿಷ್ಟ್ಯ. ಇಲ್ಲಿನ ಸಸ್ಯರಾಶಿ ಔಷಧೀಯ ಗುಣಗಳಿಗೆ ಪ್ರಖ್ಯಾತವಾಗಿವೆ.

**ಇ. ಜಿ.ಕೆ.ವಿಕೆ:** ಈಪ್ರದೇಶವು ಬೆಂಗಳೂರಿನಲ್ಲೇ ಅತ್ಯಂತ ಹಸಿರಿನಿಂದ ಕೂಡಿರುವ ಪ್ರದೇಶ. ಇಲ್ಲಿನ ಸಸ್ಯೋದ್ಯಾನವು ೬೦೦ ಜಾತಿಯ ಮುಖ್ಯವಾದ ಸಸ್ಯಗಳನ್ನೊಳಗೊಂಡಿದೆ. ೧೩ ಜಾತಿಯ ಸಸ್ತನಿಗಳು, ೧೦ ಜಾತಿಯ ಸರೀಸೃಪಗಳು. ೧೬೫ ಜಾತಿಯ ಪಕ್ಷಿಗಳು ಮತ್ತು ೬೦೦ ಜಾತಿಯಸಸ್ಯಗಳು ಇಲ್ಲಿನ ಜೀವವೈವಿಧ್ಯತೆಯನ್ನು ಸಮೃದ್ಧಗೊಳಿಸಿವೆ.

**ಈ. ನೇತ್ರಾಣಿ ನಡುಗುಡ್ಡೆ:** ಇದು ಒಂದು ಹವಳಗಳ ಪಟ್ಟಿಯಿರುವ ದ್ವೀಪ. ಇಲ್ಲಿರುವ ೨೭ ಮತ್ಸ್ಯ ಪ್ರಭೇದಗಳು ವೈಶಿಷ್ಟ್ಯ ಪೂರ್ಣವಾಗಿದೆ. ಹಲವಾರು ಸಾಗರ ಜೀವಿಗಳಿರುವ ಈ ಪ್ರದೇಶವುಮತ್ಸ್ಯ ಜೀವ ವೈವಿಧ್ಯತೆಯ ಆಗರ. ಈ ದ್ವೀಪದಲ್ಲಿ ವಿಶಿಷ್ಟ ಸಸ್ಯ ಮತ್ತು ಪ್ರಾಣಿ ಪ್ರಭೇದಗಳನ್ನು ಸಹ ಕಾಣಬಹುದು.

**ಉ. ಅಂಬಾರಗುಡ್ಡ:** ಈ ಪ್ರದೇಶವು ಕೊಡಚಾದ್ರಿಬೆಟ್ಟ ಸಾಲುಗಳ ಭಾಗವಾಗಿದ್ದು ಮೂಕಾಂಬಿಕಾ ಅಭಯಾರಣ್ಯಕ್ಕೆ ಹೊಂದಿಕೊಂಡಿದೆ. ಶರಾವತಿ ಅಭಯಾರಣ್ಯ ಮತ್ತು ಮೂಕಾಂಬಿಕ ಅಭಯಾರಣ್ಯಗಳನ್ನು ಸೇರಿಸುವ ಕೊಂಡಿಯಂತಿದೆ. ಶೋಲಾ ಅರಣ್ಯ, ಹುಲ್ಲುಗಾವಲುಗಳ ಜೊತೆಗೆ ದಟ್ಟವಾದ ಅರಣ್ಯ ಈ ಪ್ರದೇಶದ ವೈಶಿಷ್ಟ್ಯ ಇಲ್ಲಿನ ಸಸ್ಯ/ಪ್ರಾಣಿ ಸಂಪತ್ತು ಅಪಾಯದಲ್ಲಿದ್ದು, ಇದರ ಸಂರಕ್ಷಣೆ ಅತೀ ಅವಶ್ಯಕವಾಗಿದೆ.

ಊ. ಬನವಾಸಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವರದಾನದಿಯ ಇಕ್ಕೆಲಗಳಲ್ಲಿ ಪಾರಂಪರಿಕ ಭತ್ತದ ತಳಿಗಳ ಬೇಸಾಯ ಇಂದಿಗೂ ಚಾಲ್ತಿಯಲ್ಲಿದೆ. ಪ್ರತಿವರ್ಷವೂ ವರದಾ ನದಿಯು ಪ್ರವಾಹವನ್ನುಂಟು ಮಾಡುತ್ತಿದ್ದು, ಈ ಪ್ರವಾಹವನ್ನು ತಡೆಯುವ ಶಕ್ತಿಯುಳ್ಳ ತಳಿಗಳು ಇಲ್ಲಿನ ವೈಶಿಷ್ಟ್ಯ. ಇಲ್ಲಿನ ಭತ್ತದ ತಳಿಗಳು ತಮ್ಮ ಔಷಧೀಯ ಗುಣಗಳಿಂದಲೂ ಸಹ ಪ್ರಸಿದ್ಧಿಯಾಗಿದೆ. ಇಲ್ಲಿನ ಬೇಸಾಯ ಕ್ರಮ ಮತ್ತು ಸಂಸ್ಕೃತಿ ಕೂಡ ಅನನ್ಯ. ಈಸಂಸ್ಕೃತಿ ಸಂರಕ್ಷಣೆಯೊಂದಿಗೆ ರೈತರಿಗೆ ಸ್ಥಳೀಯ ತಳಿಗಳ ಸಂರಕ್ಷಣೆಗೆ ಪ್ರೋತ್ಸಾಹ ನೀಡುವುದು ಮಂಡಳಿಯ ಉದ್ದೇಶವಾಗಿದೆ.

ಋ. ಮಂಡ್ಯಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕಿರುಗಾವಲ ಗ್ರಾಮದಲ್ಲಿರುವ ಮಾವಿನ ತೋಟವನ್ನು ರೈತರು ನಿರ್ವಹಿಸುತ್ತಿದ್ದು ಈ ತೋಟವನ್ನು ಟಿಪ್ಪುಸುಲ್ತಾನನ ಕಾಲದ ಒಬ್ಬ ಸಿಪಾಯಿಯು ಸ್ಥಾಪಿಸಲಾಗಿರುತ್ತದೆ ಎಂದು ತಿಳಿಸಲಾಗಿದೆ. ಈ ತೋಟವು ೧೨೦ ಸಾಂಪ್ರದಾಯಿಕ ತಳಿಯ ಮರಗಳನ್ನು ಒಳಗೊಂಡಿರುತ್ತದೆ. ಈ ತೋಟ ನಿರ್ವಹಿಸುತ್ತಿರುವ ರೈತನು ಇದರೊಂದಿಗೆ ೧೫೦ ವಿಧದ ತಳಿಯ ಭತ್ತ, ವಿವಿಧ ತಳಿಯ ರಾಗಿ ಹಾಗು ಇತರ ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.

ೠ. ಲಕ್ಷ್ಮಿರಂಗನಾಥಸ್ವಾಮಿ ಔಷಧಿಯ ಜೈವಿಕ ಉದ್ಯಾನವನವು ಒಂದು ಚಿಕ್ಕ ಗುಡ್ಡದ (೧.೪೬ ಎಕರೆ) ಮೇಲೆ (ದೇವರಗುಡ್ಡ) ಇದ್ದು ಇಲ್ಲಿ ಅಮೂಲ್ಯವಾದ ಗಿಡಮರಗಳು, ಸುಮಾರು ೧೧೮ ವಿಧದ ಔಷಧಿಯ ಗಿಡಗಳು, ಪೊದೆಗಳು, ಗಿಡ ಮೂಲಿಕೆಗಳು ಹಾಗು ಸುಮಾರು ೫೦೦ ವಿವಿಧ ಜಾತಿಯ ಮರಗಳು ಹಾಗು ಸಸ್ಯಗಳಿಂದ ಕೂಡಿದ್ದು ಇದೊಂದು ಅನನ್ಯ ನಗರ ಜೀವವೈವಿಧ್ಯತೆಯನ್ನು ಪ್ರತಿನಿಧಿಸುತ್ತದೆ.

## ಪಾರಂಪರಿಕ ವೃಕ್ಷಗಳ ಘೋಷಣೆ

ಕರ್ನಾಟಕ ಜೀವ ವೈವಿಧ್ಯಮಂಡಳಿಯು ರಾಜ್ಯಾದ್ಯಂತ ಐತಿಹಾಸಿಕ ಹಿನ್ನಲೆಯುಳ್ಳ, ಪ್ರಾಮುಖ್ಯತೆಯನ್ನು ಪಡೆದಿರುವ ಅನನ್ಯ ವೃಕ್ಷಗಳನ್ನು ಗುರುತಿಸಿ, ಅವುಗಳನ್ನು ಪಾರಂಪರಿಕ ವೃಕ್ಷಗಳೆಂದು ಘೋಷಿಸುವ ಕಾರ್ಯಕೈಗೊಂಡಿದೆ. ರಾಜ್ಯಾದ್ಯಂತ ಅಂತಹ ಹತ್ತು ವೃಕ್ಷಗಳನ್ನು ಗುರುತಿಸಿ ಪಾರಂಪರಿಕ ವೃಕ್ಷ ಸ್ಥಾನಮಾನ ನೀಡುವ ಬಗ್ಗೆ ಜೀವ ವೈವಿಧ್ಯಮಂಡಳಿಯು ಕ್ರಮ ತೆಗೆದುಕೊಳ್ಳುತ್ತಿದೆ. ಈ ಸಂಬಂಧ ಪಾರಂಪರಿಕ ವೃಕ್ಷಗಳ ಮಾಹಿತಿ ಕುರಿತ ಪ್ರಸ್ತಾವನೆಗಳ ಕೋರಿಕೆಯ ಪತ್ರಿಕಾ ಪ್ರಕಟಣೆಯನ್ನು ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಗಳಲ್ಲಿ ಹೊರಡಿಸಲಾಗಿದೆ. ಜೀವ ವೈವಿಧ್ಯತೆಯ ಅಧಿನಿಯಮ ೨೦೦೨ ಸೆಕ್ಷನ್‌೬೩ (೨)(೧) ರಂತೆ ಮಂಡಳಿಯು ಈ ಕೆಳಕಂಡ ಮರಗಳನ್ನು ಪಾರಂಪರಿಕ ಮರಗಳೆಂದು ಘೋಷಿಸಲು ಶಿಫಾರಸ್ಸು ಮಾಡಿದೆ.

### ಪಾರಂಪರಿಕ ವೃಕ್ಷಗಳ ಘೋಷಣೆ

| ಕ್ರ. ಸಂ | ಮರದ ಹೆಸರು | ಸ್ಥಳ | ಸುತ್ತಳತೆ ಮೀಟರ್‌ಗಳಲ್ಲಿ | ಎತ್ತರ ಮೀಟರ್‌ಗಳಲ್ಲಿ | ಸ್ಥಳೀಯರು ವರದಿ ನೀಡಿದಂತೆ ಮರದ ವಯಸ್ಸು |
|---|---|---|---|---|---|
| ೧ | ದೊಡ್ಡ ಹುಣಸೇಮರ (Adansonia digitata –Malvaceae) | ಬಿಜಾಪುರ ಜಿಲ್ಲೆ, ಬಿಜಾಪುರ ತಾಲ್ಲೂಕು | ೫.೦೦ | ೧೦.೮೪ | ೬೦೦ ವರ್ಷಗಳು |
| ೨ | ದೊಡ್ಡ ಹುಣಸೇಮರ (Adansonia digitata – Malvaceae) | ಬಿಜಾಪುರ ಜಿಲ್ಲೆ, ಬಿಜಾಪುರ ತಾಲ್ಲೂಕು | ೭.೦೦ | ೯.೨೦ | ೩೫೯ ವರ್ಷಗಳು |
| ೩ | ಹುಣಸೇಮರ (Tamarindus indica) | ಬಿಜಾಪುರ ಜಿಲ್ಲೆ, ಸಿಂದಗಿ ತಾಲ್ಲೂಕು, ದೇವರ ಹಿಪ್ಪರಗಿ ಗ್ರಾಮ | ೭.೭೮ | ೩೯.೩೯ | ೮೮೩ ವರ್ಷಗಳು |
| ೪ | ಬೇವಿನ ಮರ (Azadirachta indica – (Bevu) | ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು | ೫.೪ | ೨೫ | ೨೦೦ ವರ್ಷಗಳು |
| ೫ | ಆಲದ ಮರ Ficus bengalensis– (Alada Mara) | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಚಿಕ್ಕನಹಳ್ಳಿ | ೧೧.೨ | ೩೦ | ೨೬೦ ವರ್ಷಗಳು |
| ೬ | ಅರಳಿ ಮರ Ficus relegiosa– (Peepal) | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಮಾನಸ ಗಂಗೋತ್ರಿ ಕ್ಯಾಂಪಸ್ | ೮.೮೦ | ೩೨ | ೧೬೦ ವರ್ಷಗಳು |
| ೭ | ಕೆಂಪು ಬೂರಗದ ಮರ (Bombax ceiba) | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಪ್ಯಾಲೇಸ್ ಗೇಟ್ | ೧೯.೪ | ೨೮ | ೧೩೦ ವರ್ಷಗಳು |
| ೮ | ಆಲದ ಮರ Ficus bengalensis (Doddaalada Mara) | ಬೆಂಗಳೂರು ನಗರ, ಕೇತೋಹಳ್ಳಿ | – | ೩೦ | ೪೦೦ ವರ್ಷಗಳು |
| ೯ | ಅರಕೇರಿ Araucaria cookie | ಬೆಂಗಳೂರು ಲಾಲ್‌ಬಾಗ್ | ೭ | ೫೦ | ೧೪೦ ವರ್ಷಗಳು |
| ೧೦ | ಪಿಳಲಿ ಮರ Ficus microcarpa | ಶಿವಮೊಗ್ಗ ಜಿಲ್ಲೆ ಸೋರಬ ತಾಲ್ಲೂಕು ಬನವಾಸಿ | ೩೩೦ | ೫–೬ | ೪೦೦ ವರ್ಷಗಳು |

### ಕರ್ನಾಟಕ ಬಯಲು ಸೀಮೆ ಜೀವವೈವಿಧ್ಯ ಒಳನೆಲೆ ಸಂರಕ್ಷಣ ತಾಣಗಳು

ಕರ್ನಾಟಕದ ಬಯಲು ಸೀಮೆಯ ೧೩ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ೧೦೦ ರಿಂದ೨೦೦ಹೆ. ಪ್ರದೇಶವನ್ನು ಗುರುತಿಸಿ, ಎಲ್ಲೆಯನ್ನು ಗುರುತಿಸಿ, ಅಪರೂಪದ ಸಸ್ಯ/ಪ್ರಾಣಿಗಳ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಂರಕ್ಷಣಾ ಕಾರ್ಯದ ಜೊತೆಗೆ ಜೀವ ವೈವಿಧ್ಯತೆಯ ದಾಖಲಾತಿಯನ್ನು ಸಹ ನಡೆಸಲಾಗುತ್ತಿದೆ. ಇಂತಹ ಪ್ರದೇಶಗಳಲ್ಲಿ ಯಾವುದೇ ಕೊಯ್ಲನ್ನು ನಿಯಂತ್ರಿಸಲಾಗಿದೆ. ಈ ಸ್ಥಳಗಳಲ್ಲಿ ಕಾಡ್ಗಿಚ್ಚಿನಿಂದ ರಕ್ಷಣೆ, ದೇಶೀಯ ಸಸ್ಯ ಪ್ರಭೇಧಗಳನ್ನು ಬೆಳೆಸುವುದು, ನೀರು ಮತ್ತು ಮಣ್ಣಿನ ಸಂರಕ್ಷಣೆ ಕಾರ್ಯವನ್ನು ಕೈಗೊಳ್ಳಲಾಗಿದೆ. ಈ ಕಾರ್ಯ ಬಯಲುಸೀಮೆ ಅರಣ್ಯದ ಸಸ್ಯ/ಪ್ರಾಣಿ ಪ್ರಬೇಧಗಳ ಸಂರಕ್ಷಣೆಗೆ ಸಹಾಯ ನೀಡುತ್ತದೆ. ಈ ಯೋಜನೆಯಡಿ ಇದುವರೆವಿಗೂ ಅಪಾಯದ ಅಂಚಿನಲ್ಲಿರುವ ೧೪ ಸಸ್ಯಪ್ರಭೇದಗಳನ್ನು ಗುರುತಿಸಲಾಗಿದೆ

**ಕರ್ನಾಟಕ ಬಯಲು ಸೀಮೆ ಜೀವವೈವಿಧ್ಯ ಒಳನೆಲೆ ಸಂರಕ್ಷಣಾ ತಾಣಗಳು**

| ಕ್ರ. ಸಂ. | ತಾಣ | ವಲಯ | ವಿಭಾಗ |
|---|---|---|---|
| ೧. | ಕರಪಕಪಳ್ಳಿ | ಹುಮನಾಬಾದ್ | ಬೀದರ್ |
| ೨. | ಶೆರಿಬಿಕನ ಹಳ್ಳಿ | ಚಿಂಚೋಳಿ | ಗುಲ್ಬರ್ಗಾ |
| ೩. | ಗುಂತಗೋಳ | ಲಿಂಗಸುಗೂರು | ರಾಯಚೂರು |
| ೪. | ದೋಣಿಮಲೈ ಬ್ಲಾಕ್ | ಸಂಡೂರು | ಬಳ್ಳಾರಿ |
| ೫. | ಇಂಡರ್ಗಿ | ಮುನಿರಾಬಾದ್ | ಕೊಪ್ಪಳ |
| ೬. | ಕೋಳಿಕಾಲು ಕಾಯ್ದಿಟ್ಟ ಅರಣ್ಯ(ಸಿದ್ದರಬೆಟ್ಟ) | ಕೊರಟಗೆರೆ | ತುಮಕೂರು |
| ೭. | ಮಾಕಳಿದುರ್ಗ | ದೊಡ್ಡಬಳ್ಳಾಪುರ | ಬೆಂಗಳೂರು (ಗ್ರಾಮಾಂತರ) |
| ೮. | ಸುಣಕಲ್ (ರಾಯಲಪಾಡು ರಕ್ಷಿತಾರಣ್ಯ) | ಶ್ರೀನಿವಾಸಪುರ | ಕೋಲಾರ |
| ೯ | ಚಿಕ್ಕಮಾಕಳಿ | ಮಳವಳ್ಳಿ | ಮಂಡ್ಯ |
| ೧೦. | ಜೋಗಿಮಟ್ಟಿ | ಚಿತ್ರದುರ್ಗ | ಚಿತ್ರದುರ್ಗ |
| ೧೧. | ಮಲೆಬೆನ್ನೂರು | ದಾವಣಗೆರೆ | ದಾವಣಗೆರೆ |
| ೧೨. | ಮಮದಾಪುರ | ಬಿಜಾಪುರ | ಬಿಜಾಪುರ |
| ೧೩. | ಮಹಾಕೂಟ | ಬದಾಮಿ | ಬಾಗಲಕೋಟೆ |

### ಜೈವಿಕಸಂಪನ್ಮೂಲಗಳನ್ನುಬಳಸುವಜೈವಿಕ ಉದ್ದಿಮೆಗಳಸಮೀಕ್ಷೆ

ಜೈವಿಕ ಉದ್ದಿಮೆಗಳಲ್ಲಿ ಬಳಕೆಯಾಗುವ ಜೈವಿಕ ಸಂಪನ್ಮೂಲಗಳ ಬಗ್ಗೆ ಮಾಹಿತಿ ಸಂಗ್ರಹಣಾ ಕಾರ್ಯವು ಕರ್ನಾಟಕ ಭಾರತೀಯ ಔಷಧೀತಯಾರಕರ ಒಕ್ಕೂಟ(ರಿ)ದ ಸಹಯೋಗದೊಂದಿಗೆ ನಡೆಸಲಾಗಿದೆ. ಜೈವಿಕ ಉದ್ದಿಮೆಗಳ ಬಗ್ಗೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆ ವಿಧಾನಗಳ ಬಗ್ಗೆ ವರದಿಯನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕರ್ನಾಟಕದಲ್ಲಿ ಒಟ್ಟು ೧೯೮ ಫಾರ್ಮಾಸಿಟಿಕಲ್ಸ್ ಮತ್ತು ೮೨ ಕಾಸ್ಮೆಟಿಕ್ಸ್ ಕಂಪನಿಗಳಿವೆ.

## ಜೀವವೈವಿಧ್ಯತೆಯ ಅಟ್ಲಾಸ್ ತಯಾರಿಕೆ

ಕರ್ನಾಟಕ ರಾಜ್ಯದ ಜೀವ ವೈವಿಧ್ಯತೆಯ ಅಟ್ಲಾಸ್ ತಯಾರಿಕೆ ಪ್ರಗತಿಯಲ್ಲಿದೆ. ಈ ಯೋಜನೆಯ ಮುಖ್ಯ ಉದ್ದೇಶ ಕರ್ನಾಟಕದ ಜೀವವೈವಿಧ್ಯತೆಯ ವರ್ಗೀಕರಣ/ಹಂಚಿಕೆ ಮತ್ತು ಸಂರಕ್ಷಣೆಯ ಕುರಿತು ದತ್ತಾಂಶ ಅಭಿವೃದ್ಧಿ ಪಡಿಸುವುದು. ಈ ಅಟ್ಲಾಸ್‌ನಲ್ಲಿ ಆವಾಸಸ್ಥಳಗಳ ವರ್ಗೀಕರಣದ ನಕ್ಷೆ ಮತ್ತು ಜೀವವೈವಿಧ್ಯ ಸಂರಕ್ಷಣಾ ಸ್ಥಳಗಳ ಕುರಿತು ಮಾಹಿತಿ ಸಂಗ್ರಹಿಸಲಾಗುವುದು.

## ಜೀವವೈವಿಧ್ಯ ಪ್ರಶಸ್ತಿ

ಜೀವವೈವಿಧ್ಯ ಮಂಡಳಿಯು ಜೀವವೈವಿಧ್ಯತೆ ಸಂರಕ್ಷಣಾ ಕಾರ್ಯದಲ್ಲಿ ಉತ್ತಮ ಕಾರ್ಯ ನಿರ್ವಹಿಸಿರುವವರಿಗೆ "ಜೀವ ವೈವಿಧ್ಯ ಪ್ರಶಸ್ತಿ"ಗಳನ್ನು ನೀಡುತ್ತಿದೆ. ಜೀವ ವೈವಿಧ್ಯ ಪ್ರಶಸ್ತಿಗಳನ್ನು ವೈಯುಕ್ತಿಕ, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಮಂಡಳಿಗಳು ಮತ್ತು ಕಾರ್ಪೋರೇಷನ್‌ಗಳು, ವಿಭಾಗಗಳಲ್ಲಿ ಸ್ಥಾಪಿಸಲಾಗಿದೆ.

